# ಮಾರ್ಕ್ಸ್‌ವಾದ ಮತ್ತು ಮಾನವ ಸಮಾಜದ ಬೆಳವಣಿಗೆ

ಶಿವದಾಸ್ ಘೋಷ್

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ
(ಕಮ್ಯುನಿಸ್ಟ್)
ಕರ್ನಾಟಕ ರಾಜ್ಯ ಸಮಿತಿ

‘**Marxvaada Matthu Maanava Samaajada Belavanige’** is the translation of a booklet **‘Marxism and Development of Human Society’** by Comrade Shibdas Ghosh.

Edited by:
**K.Radhakrishna**
On behalf of SUCI(C), Karnataka State Committee,
No. 31, 3rd Cross, Malleswaram, Bangalore-560 003
Ph: 080-23561443, 23561257

Website: www.suci.in
e-mail: karmika.drushtikona@gmail.com

**ಬೆಲೆ : ರೂ. 25/–**

**ಮೊದಲನೇ ಮುದ್ರಣ : ಮಾರ್ಚ್ 8, 2011**
**ಎರಡನೇ ಮುದ್ರಣ : ಜನವರಿ 1, 2014**

ಮುದ್ರಣ :
**ವಿಘ್ನೇಶ್ವರ ಪ್ರಿಂಟರ್ಸ್,** ನಂ 159, ಬಿಬಿ ಲೇನ್, ಕಾಮಣ್ಣನ ಗುಡಿ ಹತ್ತಿರ,
ಕಾಟನ್ ಪೇಟೆ, ಬೆಂಗಳೂರು – 560 053

# ಮುನ್ನುಡಿ

ಪಶ್ಚಿಮ ಬಂಗಾಲದ ರೈತ–ಕೃಷಿ ಕಾರ್ಮಿಕ ಸಂಘಟನೆಯ 10ನೇ ವಾರ್ಷಿಕ ಸಮ್ಮೇಳನದ ಸಂದರ್ಭದಲ್ಲಿ 1960 ಜೂನ್ 18ರಂದು, ಉತ್ತರ 24 ಪರಗಣ ಜಿಲ್ಲೆಯ ಭಾಟ್‌ಪರಾದಲ್ಲಿ ರಾಜನೈತಿಕ ಶಾಲೆಯೊಂದನ್ನು ನಡೆಸಲಾಯಿತು. ಇದನ್ನು ನಡೆಸಿಕೊಟ್ಟವರು, **SUCI(C)**–ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್)ದ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಗಳೂ, ಈ ಯುಗದ ಓರ್ವ ಅಪ್ರತಿಮ ಮಾರ್ಕ್ಸ್‌ವಾದಿ ಚಿಂತಕರೂ, ದಾರ್ಶನಿಕರೂ ಆದ ಕಾಮ್ರೇಡ್ ಶಿವದಾಸ್ ಘೋಷ್‌ರವರು. ಈ ರಾಜನೈತಿಕ ಶಾಲೆಯ ಪ್ರಥಮ ಅಧಿವೇಶನದಲ್ಲಿ ಅವರು 'ಮಾರ್ಕ್ಸ್‌ವಾದ ಮತ್ತು ಮಾನವ ಸಮಾಜದ ಬೆಳವಣಿಗೆ'ಯ ಕುರಿತು ಚರ್ಚಿಸಿದರು.

ಕ್ರಾಂತಿಯನ್ನು ನೆರವೇರಿಸಿ ವಿಮುಕ್ತಿಯನ್ನು ಗಳಿಸಿಕೊಳ್ಳಲು ಕಾರ್ಮಿಕರು ಮತ್ತಿತರ ಶೋಷಿತರಿಗೆ ಸತ್ಯವನ್ನು ಅರಿತುಕೊಳ್ಳುವುದು ಅವಶ್ಯಕ. ಕಾಮ್ರೇಡ್ ಶಿವದಾಸ್ ಘೋಷ್‌ರವರ ಈ ಭಾಷಣವು ಮಾರ್ಕ್ಸ್‌ವಾದದ ಬೆಳಕಿನಲ್ಲಿ ವಸ್ತುವಾದಿ ಚಿಂತನೆ ಮತ್ತು ಸಾಮಾಜಿಕ ಬೆಳವಣಿಗೆಗಳ ಕುರಿತಾದ ಒಂದು ಸಂಕ್ಷಿಪ್ತ ವಿಶ್ಲೇಷಣೆಯಾಗಿದೆ. ದ್ವಂದ್ವಾತ್ಮಕ ವಸ್ತುವಾದ ಮತ್ತಿತರ ತತ್ವಜ್ಞಾನಗಳ ನಡುವಿನ ಮೂಲಭೂತ ವ್ಯತ್ಯಾಸಗಳ ಮೇಲೆ ಈ ವಿಶ್ಲೇಷಣೆಯು ಬೆಳಕು ಚೆಲ್ಲುತ್ತದೆ; ತನ್ನ ಪ್ರಸಕ್ತ ಕೊಳೆತಕ್ಕೀಡಾದ ಹಂತದಲ್ಲಿ ಬಂಡವಾಳವಾದ ಹೇಗೆ ಸಮಾಜ ಹಾಗೂ ವಿಜ್ಞಾನಗಳ ಪ್ರಗತಿಗೆ ಅಡೆತಡೆಯೊಡ್ಡುತ್ತದೆ ಎಂಬುದನ್ನು ಬಯಲುಪಡಿಸುತ್ತದೆ. ಅವರ ಬಂಗಾಲಿ ಭಾಷಣದ ಅನುವಾದ ತದನಂತರ ಇಂಗ್ಲಿಷ್‌ನಲ್ಲಿ ಹೊರಬಂತು. ಈ ಮೇರುಕೃತಿಯ ಕನ್ನಡ ಅನುವಾದ ಬೇಕೆಂಬುದು ಬಹುಕಾಲದ ಬೇಡಿಕೆ. ಇದರಿಂದ ಅದನ್ನು ಕನ್ನಡಕ್ಕೆ ತರಲಾಗಿದೆ. ಭಾಷಾಂತರ ಕಾರ್ಯದಲ್ಲಿ ಎಲ್ಲ ಕಾಳಜಿ ವಹಿಸಿರುವ ನಂತರವೂ ತಪ್ಪುಗಳು–ಅಸಮರ್ಪಕತೆಗಳು ಏನಾದರೂ ಇದ್ದಲ್ಲಿ ಅದರ ಹೊಣೆ ನಮ್ಮದೇ.

**ಕೆ.ರಾಧಾಕೃಷ್ಣ,**
ರಾಜ್ಯ ಕಾರ್ಯದರ್ಶಿ, ಎಸ್‌ಯುಸಿಐ(ಸಿ)

ಜನವರಿ 1, 2014

# ಮಾರ್ಕ್ಸ್‌ವಾದ ಮತ್ತು ಮಾನವ ಸಮಾಜದ ಬೆಳವಣಿಗೆ

ಸತ್ಯಶೋಧನೆಯಲ್ಲಿ ನಮಗೆ ಸರಿಯಾಗಿ ಮಾರ್ಗದರ್ಶನ ಮಾಡಬಲ್ಲ ಏಕೈಕ ತತ್ವಜ್ಞಾನವೇ ಮಾರ್ಕ್ಸ್‌ವಾದ. ಸತ್ಯವನ್ನು ಸಮಗ್ರವಾಗಿ ಅನಾವರಣಗೊಳಿಸುವಲ್ಲಿ ಬೆಳಕು ಚೆಲ್ಲಬಲ್ಲ ತತ್ವಜ್ಞಾನವಾಗಲೀ ಅಥವಾ ವೈಚಾರಿಕತೆಯಾಗಲೀ ಮಾರ್ಕ್ಸ್‌ವಾದದ ಹೊರತು ಇನ್ನಾವುದೂ ಇಲ್ಲವಾದ್ದರಿಂದ ನಾವು ಮಾರ್ಕ್ಸ್‌ವಾದದ ಆಚರಣೆ ಅತ್ಯಾವಶ್ಯವೆಂದು ಪರಿಗಣಿಸುತ್ತೇವೆ ಹಾಗೂ ಮಾರ್ಕ್ಸ್‌ವಾದವನ್ನು ಜೀವನದ ತತ್ವಜ್ಞಾನವೆಂದು ಸ್ವೀಕರಿಸುತ್ತೇವೆ ಮತ್ತು ನಮ್ಮನ್ನು ನಾವು ಮಾರ್ಕ್ಸ್‌ವಾದಿಗಳೆಂದು ಕರೆದುಕೊಳ್ಳುತ್ತೇವೆ.

ಮಾರ್ಕ್ಸ್‌ವಾದ ಹಾಗೂ ಅಸ್ತಿತ್ವದಲ್ಲಿರುವ ಇತರ ತತ್ವಜ್ಞಾನಗಳ ನಡುವಣ ಮೂಲಭೂತ ವ್ಯತ್ಯಾಸವೆಂದರೆ ಸತ್ಯವನ್ನು ಅರಿಯಲು ಇತರ ಎಲ್ಲಾ ತತ್ವಜ್ಞಾನಗಳು ಮಾನವನ ಮೇಧಾಶಕ್ತಿ, ಚಿಂತನಾ ಸಾಮರ್ಥ್ಯ ಅಥವಾ ಯಾರಾದರೂ ತತ್ವಜ್ಞಾನಿ ಅಥವಾ ಯಾವುದೇ ವ್ಯಕ್ತಿಯ–ಅವರ ವೈಯಕ್ತಿಕ ನೆಲೆಗಟ್ಟಿನಲ್ಲಿ–ಚಿಂತನಾಶಕ್ತಿಯನ್ನು ಅವಲಂಬಿಸಿದರೆ, ಇದಕ್ಕೆ ತದ್ವಿರುದ್ಧವಾಗಿ ಮಾರ್ಕ್ಸ್‌ವಾದವು ಪ್ರಯೋಗ, ವಸ್ತುನಿಷ್ಠ ವಾಸ್ತವತೆ, ಇತಿಹಾಸ, ವೈಜ್ಞಾನಿಕ ತರ್ಕ ಹಾಗೂ ವಿವೇಚನೆಗಳನ್ನು ಆಧರಿಸಿದ ಸತ್ಯವನ್ನು ಸ್ವೀಕರಿಸುತ್ತದೆ. ಮಾರ್ಕ್ಸ್‌ವಾದವು ಪ್ರಯೋಗಗಳಿಂದ ಪರೀಕ್ಷೆಗೆ ಒಳಗಾಗದ, ಐತಿಹಾಸಿಕ ಅನುಭವ ಮತ್ತು ಆಚರಣೆಯಿಂದ ಸಾಬೀತಾಗದ ಹಾಗೂ ವೈಜ್ಞಾನಿಕ ತರ್ಕ ಮತ್ತು ವಿವೇಚನೆಗಳ ಮೂಲಕ ಪಡೆಯದ ಯಾವುದೇ ಜ್ಞಾನವನ್ನು ಸರಿಯಾಗಿದೆ ಎಂದಾಗಲೀ, ಯಾವುದೇ ಸತ್ಯವನ್ನು ಸ್ಥಾಪಿಸಲಾಗುವುದು ಎಂದಾಗಲೀ ತಿಳಿಯುವುದಿಲ್ಲ. ಆದ್ದರಿಂದ ಸತ್ಯವನ್ನು ಅರಿಯಲು ನಾವು ಕೇವಲ ಓರ್ವ ವ್ಯಕ್ತಿಯ ಚಿಂತನಾಶಕ್ತಿ ಅಥವಾ ಬುದ್ಧಿಮತ್ತೆಯ ಮೇಲೆ ಅವಲಂಬಿತರಾಗಲಾರೆವು. ಮಾನವನ ಚಿಂತನಾಶಕ್ತಿ ಮತ್ತು ಬುದ್ಧಿಮತ್ತೆ ನಿಸ್ಸಂದೇಹವಾಗಿ ಅವಶ್ಯಕ. ಆದರೆ ಸತ್ಯವನ್ನು ನಿರ್ಧರಿಸಬೇಕಾಗಿರುವುದು, ಪ್ರತ್ಯಕ್ಷೀಕರಿಸಿಕೊಳ್ಳಬೇಕಾಗಿರುವುದು ವಾಸ್ತವತೆ, ವೈಜ್ಞಾನಿಕ ಪ್ರಯೋಗ ಮತ್ತು ವಿವೇಚನೆ ಮೇಲಾಧಾರಿತ ಅನುಭವಗಳ ಮೂಲಕ ಮಾತ್ರ. ಆದ್ದರಿಂದ ಮಾರ್ಕ್ಸ್‌ವಾದವು ಸಂಪೂರ್ಣವಾಗಿ ವಿಜ್ಞಾನದ ಮೇಲೆ ಆಧಾರಿತವಾಗಿದೆ. ಅದರ ಆಧಾರವು ಪ್ರಯೋಗಕ್ಕೊಳಪಟ್ಟ ಸತ್ಯವಾದ್ದರಿಂದ ಅದರ ಸಂಪೂರ್ಣ ರಚನೆ ವೈಜ್ಞಾನಿಕ ಪ್ರಯೋಗ, ಪರಿಶೀಲನೆ ಹಾಗೂ ಸತ್ಯದ ಮೇಲೆ ನಿಂತಿದೆ. ಮಾನವನ ವ್ಯಕ್ತಿನಿಷ್ಠ ಚಿಂತನೆ ಹಾಗೂ ವಿಶ್ಲೇಷಣೆಗಳ ಮೇಲೆ ಆಧರಿಸಿ ಯಾವ ರೀತಿಯಲ್ಲೂ ಅದರ ಬೆಳವಣಿಗೆಯಾಗಿಲ್ಲ. ಇತರ ತತ್ವಜ್ಞಾನಗಳು ವ್ಯಕ್ತಿನಿಷ್ಠ ವಿಚಾರಗಳು ಹಾಗೂ ನಂಬಿಕೆಗಳ ಮೇಲೆ ಅವಲಂಬಿತವಾದ್ದರಿಂದ ವಿಜ್ಞಾನದ ಮೇಲೆ ಪ್ರಾಬಲ್ಯಗಳಿಸಲು ಪ್ರಯತ್ನಿಸುತ್ತವೆ ಮತ್ತು ವೈಜ್ಞಾನಿಕ ಸತ್ಯವನ್ನು ನಿರಾಕರಿಸುತ್ತವೆ. ಇದಕ್ಕೆ

ತದ್ವಿರುದ್ಧವಾಗಿ ಮಾರ್ಕ್ಸ್‌ವಾದವು ವಿಜ್ಞಾನದ ಮೇಲೆ ಆಧಾರಿತವಾಗಿದೆ, ವೈಜ್ಞಾನಿಕ ಸತ್ಯವನ್ನು ಸ್ವೀಕರಿಸುತ್ತದೆ ಹಾಗೂ ಸಾಮಾನ್ಯೀಕೃತ ಸತ್ಯಗಳನ್ನು ಪ್ರತ್ಯಕ್ಷೀಕರಿಸಿಕೊಳ್ಳಲು ವಿಜ್ಞಾನದ ನಿರ್ದಿಷ್ಟ ಸತ್ಯಗಳನ್ನು ಸಮನ್ವಯೀಕರಿಸಿಕೊಳ್ಳುವಲ್ಲಿ ತೊಡಗಿದೆ.

## ವಿಜ್ಞಾನದ ಸಹಾಯದಿಂದ ಮಾತ್ರವೇ ಸತ್ಯವನ್ನು ಅರಿಯಲು ಸಾಧ್ಯ

ಇತರ ತತ್ವಜ್ಞಾನಗಳು ಹೇಳುವುದೇನು? ಇತರ ತತ್ವಜ್ಞಾನಗಳು ಹೇಳುವುದೆಂದರೆ ವಿಜ್ಞಾನದಿಂದ ಹೆಚ್ಚೆಂದರೆ ನಿರ್ದಿಷ್ಟ ಕ್ಷೇತ್ರಗಳಲ್ಲಿನ ಸತ್ಯದ ಬಗ್ಗೆ ಅರಿಯಲು ಸಾಧ್ಯ, ಆದರೆ ನಮ್ಮ ಸುತ್ತಲಿನ ವಿಶ್ವವು ವಿಜ್ಞಾನದ ತಿಳುವಳಿಕೆಗೆ ಸಂಪೂರ್ಣವಾಗಿ ಒಳಪಡುವುದಿಲ್ಲ. ಏಕೆಂದರೆ ಕೇವಲ ಅವುಗಳ ವಿಚಾರದಲ್ಲಿ ಅಥವಾ ಕಲ್ಪನೆಯಲ್ಲಿ ಮಾತ್ರವೇ ಅಸ್ತಿತ್ವದಲ್ಲಿರುವ ಅಲೌಕಿಕ ವಸ್ತುವಿನ ಬಗ್ಗೆ ವಿಜ್ಞಾನ ಏನನ್ನೂ ಹೇಳುವುದಿಲ್ಲ. ಆದ್ದರಿಂದ ಈ ತತ್ವಜ್ಞಾನಗಳ ಪ್ರತಿಪಾದಕರು ವಿಜ್ಞಾನದ ನೆರವಿನಿಂದ ಸತ್ಯವನ್ನು ಮತ್ತು ಜೀವನದ ಎಲ್ಲಾ ಮಜಲುಗಳ ಕುರಿತು ಅರಿಯುವುದೇ ಸಾಧ್ಯವಿಲ್ಲವೆಂದು ನಂಬುತ್ತಾರೆ. ಹಾಗಾದರೆ ಸತ್ಯವನ್ನು ಅರಿಯುವುದಾದರೂ ಹೇಗೆ? ಈ ತತ್ವಜ್ಞಾನಗಳ ಪ್ರಕಾರ ಓರ್ವ ವ್ಯಕ್ತಿಯ ಆತ್ಮ ಸಾಕ್ಷಾತ್ಕಾರದ ಮೂಲಕ ಮಾತ್ರ ಸತ್ಯವನ್ನು ತಲುಪಬಹುದು. ಅಂದರೆ ವಿಜ್ಞಾನ, ಯಾವುದು ಸಾಮೂಹಿಕ ಮಾನವ ಜ್ಞಾನ ಮತ್ತು ಅನುಭವದ ಉತ್ಪಾದನೆಯಾಗಿದೆಯೋ ಆ ವಿಜ್ಞಾನದ ಮೂಲಕ ಪಡೆಯಲಾಗದ್ದನ್ನು ಓರ್ವ ಮೇಧಾವಿಯ ಆತ್ಮಸಾಕ್ಷಾತ್ಕಾರದ ಮೂಲಕ ಪಡೆಯಬಹುದು. ಮಾರ್ಕ್ಸ್‌ವಾದ ಇಂತಹ ವಿತಂಡವಾದಗಳನ್ನು ನಂಬುವುದಿಲ್ಲ, ನಂಬಲಾಗದು ಸಹ. ಬದಲಿಗೆ, ಸತ್ಯವನ್ನು ಅರಿಯುವ ಪ್ರಶ್ನೆಗೆ ಸಂಬಂಧಿಸಿದಂತೆ ವಿಜ್ಞಾನ ಓರ್ವ ವ್ಯಕ್ತಿಯ ಶಕ್ತಿಗಿಂತ ಅದೆಷ್ಟೋ ಪಟ್ಟು ಶಕ್ತಿಯುತವಾದುದೆಂದು ಮಾರ್ಕ್ಸ್‌ವಾದದ ಅಭಿಮತ. ಆದ್ದರಿಂದ ಓರ್ವ ವ್ಯಕ್ತಿಯ ನಂಬಿಕೆ ಮತ್ತು ಆತ್ಮ ಸಾಕ್ಷಾತ್ಕಾರಗಳ ಬದಲಿಗೆ ವಿಜ್ಞಾನದ ಮೇಲೆ ಅವಲಂಬಿತವಾಗುವುದೇ ವಿಚಾರಶೀಲತೆ. ಮಾರ್ಕ್ಸ್‌ವಾದ ಮತ್ತಿತರ ಎಲ್ಲಾ ತತ್ವಜ್ಞಾನಗಳ ನಡುವಣ ಮೂಲಭೂತ ವ್ಯತ್ಯಾಸವು ಅಡಗಿರುವುದು ಇಲ್ಲಿಯೇ.

## ತತ್ವಜ್ಞಾನದ ಧ್ಯೇಯ

ಮಾರ್ಕ್ಸ್‌ವಾದವು ಮಿಕ್ಕೆಲ್ಲಾ ತತ್ವಜ್ಞಾನಗಳೊಂದಿಗೆ ಇನ್ನೊಂದು ಮೂಲಭೂತ ವ್ಯತ್ಯಾಸವನ್ನು ಹೊಂದಿದೆ. ಇಲ್ಲಿಯವರೆಗೂ ಇತರ ಎಲ್ಲಾ ತತ್ವಜ್ಞಾನಗಳು ಸತ್ಯವನ್ನು ಅರಿಯಲು ಹಾಗೂ ವ್ಯಾಖ್ಯಾನಿಸಲು ಪ್ರಯತ್ನಪಟ್ಟಿವೆ–ಎಷ್ಟರಮಟ್ಟಿಗೆ ಅವು ಸಫಲವಾದವು ಎಂಬುದು ಬೇರೆಯೇ ವಿಷಯ–ಏಕೆಂದರೆ ಸಮಾಜದಲ್ಲಿ ಮಾರ್ಕ್ಸ್‌ವಾದ ಹೊರಹೊಮ್ಮುವತನಕ ಜ್ಞಾನದ ಧ್ಯೇಯವು ಕೇವಲ ಸತ್ಯವನ್ನು ಅರಿಯುವುದು ಮತ್ತು ವಿಶ್ವವನ್ನು ವ್ಯಾಖ್ಯಾನ ಮಾಡುವುದೇ ಆಗಿತ್ತು. ಅಂದರೆ ವಸ್ತು ಪ್ರಪಂಚ, ಜೀವನ ಹಾಗೂ ಸಮಾಜಕ್ಕೆ ಸಂಬಂಧಿಸಿದ ಸಮಸ್ಯೆಗಳ ವ್ಯಾಖ್ಯಾನ. ಕೇವಲ ತಿಳುವಳಿಕೆಯು ಅರ್ಥಹೀನ ಎಂದು ಮೊಟ್ಟಮೊದಲ ಬಾರಿಗೆ

ತೋರಿಸಿಕೊಟ್ಟ ಏಕೈಕ ತತ್ವಜ್ಞಾನವೇ ಮಾರ್ಕ್ಸ್‌ವಾದ. ಕೇವಲ ತಿಳುವಳಿಕೆ ಮಾತ್ರ ಪಡೆದು, ಅದನ್ನು ಆಚರಣೆಯಲ್ಲಿ ಉಪಯೋಗಿಸಲು ಆಗದಿದ್ದಲ್ಲಿ ನಮಗಾಗುವ ಪ್ರಯೋಜನವಾದರೂ ಏನು? ತತ್ವಜ್ಞಾನದ ಧ್ಯೇಯವು ವಿಶ್ವವನ್ನು ಕೇವಲ ಅರಿಯುವುದು, ವ್ಯಾಖ್ಯಾನಿಸುವುದು ಮಾತ್ರವಲ್ಲದೆ ಅದನ್ನು ಬದಲಾಯಿಸುವುದು ಸಹ ಎಂದು ಮಾರ್ಕ್ಸ್‌ವಾದ ನಂಬುತ್ತದೆ. ಸಹಜವಾಗಿ ಇತರೆಲ್ಲಾ ತತ್ವಜ್ಞಾನಗಳು ವಿಶ್ವವನ್ನು ವ್ಯಾಖ್ಯಾನಿಸಲು ತಮ್ಮ ಉದ್ದೇಶವನ್ನು ಸೀಮಿತಗೊಳಿಸಿಕೊಂಡರೆ ಮಾರ್ಕ್ಸ್‌ವಾದದ ಧ್ಯೇಯವೆಂದರೆ ವಿಶ್ವವನ್ನು ಅರಿಯುವುದು, ವ್ಯಾಖ್ಯಾನಿಸುವುದು ಹಾಗೂ ಸರಿಯಾಗಿ ಕಲ್ಪಿಸಿಕೊಳ್ಳುವುದು ಮತ್ತು ಈ ವಿಶ್ವದ ಬದಲಾವಣೆಯ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ನೆರವಾಗುವುದಾಗಿದೆ.

ಈಗ, ಮಾರ್ಕ್ಸ್‌ವಾದವನ್ನು ಅರಿತುಕೊಳ್ಳಲು ನಮಗೆ ತತ್ವಜ್ಞಾನದ ಬೆಳವಣಿಗೆಯ ಇತಿಹಾಸದ ಒಂದು ಸಾಮಾನ್ಯ ಜ್ಞಾನ ಇರಬೇಕು. ಒಂದೇ ತರಗತಿಯಲ್ಲಿ ಇದರ ಬಗ್ಗೆ ವಿವರವಾಗಿ ಚರ್ಚಿಸಲು ಖಂಡಿತ ಸಾಧ್ಯವಿಲ್ಲ; ಆದರೂ ಪ್ರಮುಖ ಅಂಶಗಳ ಬಗ್ಗೆ ತಿಳಿಸಲು ನಾನು ಪ್ರಯತ್ನ ಮಾಡುತ್ತೇನೆ.

## ಚಿಂತನೆಯ ಉಗಮ ಮತ್ತು ಮಾನವ ನಾಗರಿಕತೆಯ ಬೆಳವಣಿಗೆ

ಪ್ರಾರಂಭದಲ್ಲಿ ನಾನೊಂದು ಅಂಶವನ್ನು ಹೇಳಬಯಸುತ್ತೇನೆ. ಮಾನವ ಮತ್ತು ಪ್ರಾಣಿಗಳ ನಡುವೆ ಒಂದು ಮೂಲಭೂತ ವ್ಯತ್ಯಾಸವಿದೆ. ಅದಾವುದು? ಮೆದುಳಿನ ವಿಶಿಷ್ಟ ಸಂಯೋಜನೆಯ ಕಾರಣದಿಂದ ಮಾನವನು ಆಲೋಚಿಸುವ, ವಿಶ್ಲೇಷಿಸುವ ಹಾಗೂ ನಿರ್ಣಯಿಸುವ ಸಾಮರ್ಥ್ಯ ಹೊಂದಿದ್ದಾನೆ. ಮಾನವ ಜನಾಂಗ ಈ ವಿಶ್ವದಲ್ಲಿ ಉದಯಿಸಿದ್ದೇ ಈ ಗುಣಲಕ್ಷಣಗಳೊಂದಿಗೆ. ಪ್ರಾಣಿಗಳಲ್ಲಿ ನರಸಂವೇದನೆಯಿದ್ದು ಅವು ಬಾಹ್ಯ ಪ್ರಚೋದನೆಗೆ ಪ್ರತಿಕ್ರಿಯಿಸುತ್ತವೆ: ಆದರೆ ಅವುಗಳಲ್ಲಿ ಆಲೋಚಿಸುವ ಅಥವಾ ವಿಶ್ಲೇಷಿಸುವ ಸಾಮರ್ಥ್ಯವಿಲ್ಲ. ಮಾನವ ಮೆದುಳಿನ ಈ ವಿಶಿಷ್ಟ ಸಂಯೋಜನೆ ಮತ್ತು ರಚನೆಯ ಬೆಳವಣಿಗೆ ಕೇವಲ ಮಾನವನಲ್ಲಿ ಮಾತ್ರ ಆಲೋಚಿಸುವ ಶಕ್ತಿಯನ್ನು ಪ್ರದಾನ ಮಾಡಿದೆ. ಇದು ಮಾನವನು ಎಲ್ಲಾ ಪ್ರಾಣಿಗಳಿಗಿಂತ ಸಂಪೂರ್ಣವಾಗಿ ಭಿನ್ನವಾಗಿರುವಂತೆ ಮಾಡಿದೆ. ಪ್ರಾಣಿಗಳು ನಿಸರ್ಗದ ನಿಯಮಗಳಿಗೆ ಸಂಪೂರ್ಣವಾಗಿ ಅಧೀನವಾಗಿವೆ. ನೈಸರ್ಗಿಕ ನಿಯಮಗಳ ಮೇಲಿನ ತಮ್ಮ ಅಧೀನತೆಯನ್ನು ಅವು ಯಾವುವೂ ಮೀರಲಾರವು ಹಾಗೂ ಅವು ನಿಸರ್ಗವನ್ನು ತಮ್ಮ ಹತೋಟಿಗೆ ತರಲಾರವು. ತತ್ಪರಿಣಾಮವಾಗಿ ಅವು ಜೀವಿತವಾಗಿರುವ ಪ್ರಯತ್ನ ಮಾಡುತ್ತವೆ ಹಾಗೂ ನಿಸರ್ಗ ಎಷ್ಟು ದಿನ ಬಿಡುತ್ತದೋ ಅಷ್ಟುದಿನ ಉಳಿದುಕೊಳ್ಳುತ್ತವೆ. ಅವುಗಳು ಪ್ರಯತ್ನ ಮಾಡಬಹುದು, ಆದರೆ ಅವುಗಳ ಉಳಿವು ಅಳಿವು ನಿಸರ್ಗದ ಪ್ರಕ್ರಿಯೆಯನ್ನು ಅವಲಂಬಿಸಿದೆ. ಆದರೆ ಅಸ್ತಿತ್ವಕ್ಕಾಗಿ ಮಾನವನ ಹೋರಾಟ ಹೊಸದೊಂದು ಗುಣಲಕ್ಷಣವನ್ನು ತಂದಿತು. ನಿಸರ್ಗದ ನಿಯಮಗಳಿಗೆ ಸಂಪೂರ್ಣವಾಗಿ ಅಧೀನನಾಗಿರಲು ಮಾನವ

ನಿರಾಕರಿಸಿದ. ನಾಗರಿಕತೆ, ಸಂಸ್ಕೃತಿ ಮತ್ತು ಸಾಮಾಜಿಕ ಜೀವನವನ್ನು ಕಟ್ಟುವ ಹಾದಿಯಲ್ಲಿ ಮಾನವನು ನಿಸರ್ಗದ ಶಕ್ತಿಗಳನ್ನು ಅರಿಯುವಂತೆ, ಗ್ರಹಿಸುವಂತೆ ಹಾಗೂ ಉಪಯೋಗಿಸಿಕೊಳ್ಳುವಂತಾದ. ಹೀಗೆ ಮಾನವನು ಸಮಾಜದಲ್ಲಿ ಸಂಘಟಿತನಾದ, ಸಾಮಾಜಿಕ ವ್ಯಕ್ತಿಯಾದ ಹಾಗೂ ಜ್ಞಾನ ಮತ್ತು ವಿಜ್ಞಾನದ ಬೆಳವಣಿಗೆ ಮತ್ತು ಮುನ್ನಡೆಯ ಪ್ರಕ್ರಿಯೆಯ ಮೂಲಕ ಹಾಗೂ ನಾಗರಿಕತೆ ಹಾಗೂ ಸಂಸ್ಕೃತಿಯ ಉಗಮದೊಂದಿಗೆ ಪ್ರಸ್ತುತ ಹಂತ ತಲುಪಿದ. ಆದರೆ ಮಾನವ ನಾಗರಿಕತೆಯ ಈ ಬೆಳವಣಿಗೆ ಒಂದು ದಿನದಲ್ಲಿ ಬರಲಿಲ್ಲ. ಇದರ ಹಿಂದೆ ಒಂದು ಸುದೀರ್ಘ ಇತಿಹಾಸವೇ ಇದೆ. ಮಾನವನು ನಾವಿಂದು ನೋಡುತ್ತಿರುವಂತೆ ಹಿಂದೆ ಇರಲಿಲ್ಲ. ಮಾನವನು ಸಮಾಜದಲ್ಲಿ ಸಂಘಟಿತನಾಗಿ ಸಹ ಇರದ ಕಾಲವೂ ಒಂದಿತ್ತು. ಇತರೆಲ್ಲಾ ಪ್ರಾಣಿಗಳಂತೆ ಕಾಡಿನ ಆದಿಮಾನವನು ಸಹ ನಿಸರ್ಗದ ನಿಯಮಗಳಿಗೆ ಸಂಪೂರ್ಣವಾಗಿ ಗುಲಾಮನಾಗಿದ್ದ. ಆಗ ಆಲೋಚನಾ ಸಾಮರ್ಥ್ಯವೊಂದನ್ನು ಬಿಟ್ಟರೆ ಮಾನವ ಹಾಗೂ ಪ್ರಾಣಿಗಳ ನಡುವೆ ಹೆಚ್ಚು ಅಂತರವಿರಲಿಲ್ಲ. ತನ್ನ ಮೆದುಳಿನಿಂದಾಗಿ ಮನುಷ್ಯನು ಮಾತ್ರ ಪಡೆದಿರುವ ಅನನ್ಯವಾದ ಚಿಂತನಾ ಶಕ್ತಿ ಅವನನ್ನು ಪ್ರಾಣಿಗಳಿಗಿಂತ ವಿಶಿಷ್ಟವಾಗಿ ವಿಭಿನ್ನನಾಗಿರುವಂತೆ ಮಾಡಿದೆ. ಇದರಿಂದ ಆತ ನಿಸರ್ಗದ ಮತ್ತು ಪರಿಸರದ ಶಕ್ತಿಗಳನ್ನು ಅರಿತುಕೊಳ್ಳುವ ಹಾಗೂ ನಿವಾರಿಸಿಕೊಳ್ಳುವ, ಹಾಗೂ ಬದುಕಿನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದ್ದಾನೆ. ಆದಿಮಾನವನು ಅಂದಿನ ಪ್ರಾರಂಭಿಕ ಹಂತದಲ್ಲಿಯೇ, ಅಂದು ಅವನು ಹೊಂದಿದ್ದ ಕಿಂಚಿತ್ ಚಿಂತನಾಶಕ್ತಿಯಿಂದಲೇ ಏಕಾಂಗಿಯಾಗಿ ಜೀವಿಸಲು ಯತ್ನಿಸುವುದು ವ್ಯರ್ಥ, ಆ ರೀತಿ ಬದುಕುಳಿಯಲಾಗದು ಎಂಬುದನ್ನು ಮನಗಂಡಿದ್ದನು. ಕನಿಷ್ಠ ಬದುಕುಳಿಯಲು, ನಿಸರ್ಗದ ಎಲ್ಲಾ ಅಡೆತಡೆಗಳನ್ನು ಎದುರಿಸಲು ಸಾಮೂಹಿಕ ಜೀವನ ಅತ್ಯಾವಶ್ಯಕವಾಗಿತ್ತು. ಮಾನವನು ಉತ್ತಮ ಬದುಕಿನ ಆಸ್ಥೆಯಿಂದ, ಅವನನ್ನು ಸುತ್ತುವರಿದ ನಿಸರ್ಗದ ಪ್ರತಿಕೂಲ ಶಕ್ತಿಗಳ ವಿರುದ್ಧ ತನ್ನ ಅಸ್ತಿತ್ವಕ್ಕಾಗಿ ಸಂಘರ್ಷದಲ್ಲಿ ನಿರತನಾಗಿದ್ದಾಗ ಅವನಲ್ಲಿ ಮೂಡಿದ ಪ್ರಜ್ಞೆಯ ಪ್ರಥಮ ಅಣುಗಳು, ಅವು ಚಿಗುರುತ್ತಿರುವ ಹಂತದಲ್ಲೇ ಹೀಗಿದ್ದವು; ನಾವು ಬದುಕುಳಿಯಲು ಒಗ್ಗೂಡಬೇಕು, ನಾವು ಒಬ್ಬಂಟಿಗರಾಗಿ ಬಾಳಲಾರೆವು; ನಾವು ಒಗ್ಗೂಡಿ ಹೋರಾಡಬೇಕು ಮತ್ತು ನಾವು ಒಗ್ಗೂಡಿ, ಸಾಮೂಹಿಕವಾಗಿ ಬದುಕುಳಿಯಲು ಪ್ರಯತ್ನಿಸಬೇಕು. ಇದು ಮಾನವ ನಾಗರಿಕತೆಯ ಪ್ರಜ್ಞೆಯ ಪ್ರಥಮ ಅಣು. ಇದೇ ಮಾನವ ನಾಗರಿಕತೆಯ ಹಿಂದಿರುವ ಮೂಲಭೂತ ಪ್ರಜ್ಞೆ . ಈ ಪ್ರಜ್ಞೆಯ ಆಧಾರದಲ್ಲಿ ಮಾನವ ಸಮಾಜ ಕಟ್ಟಲ್ಪಟ್ಟಿತು ಹಾಗೂ ಮಾನವ ಸಾಮಾಜಿಕ ಜೀವಿಯಾದ. ನಾವೆಲ್ಲಾ ಸಮಾಜ ಜೀವಿಗಳು–ಎಂಬುದರ ಮೂಲದಲ್ಲಿ ನಾವು ಏಕಾಂಗಿಯಾಗಿ ಬಾಳಲಾರೆವು, ಮತ್ತು ನಾವು ನೈಸರ್ಗಿಕ ಶಕ್ತಿಗಳ ವಿರುದ್ಧ ಸಾಮೂಹಿಕವಾಗಿ ಹೋರಾಡುತ್ತಾ ಸಾಮೂಹಿಕವಾಗಿ ಬದುಕುಳಿಯಬೇಕು ಹಾಗೂ ಈ ಸಾಮೂಹಿಕ ಹೋರಾಟದ ಮೂಲಕ ನಾವು ನೈಸರ್ಗಿಕ

ಶಕ್ತಿಗಳನ್ನು ನಮ್ಮ ಹತೋಟಿಗೆ ತರಬಲ್ಲೆವು ಮತ್ತು ಉತ್ತಮ ಜೀವನಕ್ಕಾಗಿ ಅವನ್ನು ಬಳಸಿಕೊಳ್ಳಬಲ್ಲೆವು ಎಂಬ ತಿಳುವಳಿಕೆ ಅಡಗಿದೆ. ಆದಿ ಮಾನವ ಇದನ್ನು ತನ್ನ ನಿಜಜೀವನದ ಅನುಭವಗಳಿಂದ ಅರಿತುಕೊಂಡ.

## ಮಾನವನ ಮೂಲ ಚಿಂತನೆ ವಸ್ತುವಾದಿಯಾಗಿತ್ತು

ಬುಡಕಟ್ಟುಗಳ ಇತಿಹಾಸ, ಗುಹೆಗಳಲ್ಲಿನ ಚಿತ್ರಗಳು ಹಾಗೂ ಪ್ರಾಚೀನ ಹಸ್ತಪ್ರತಿಗಳ ವಿಶ್ಲೇಷಣೆ ಮತ್ತು ಪರಿಶೋಧನೆಯಿಂದ ಇದುವರೆಗೂ ಆದಿಮಾನವನ ಕುರಿತು ನಾವು ತಿಳಿದುಕೊಳ್ಳಲು ಸಾಧ್ಯವಾಗಿರುವಷ್ಟರಿಂದ ಆದಿಮಾನವನ ಚಿಂತನೆ ವಸ್ತುವಾದಿಯಾಗಿತ್ತು, ಭಾವನಾವಾದಿಯಾಗಿರಲಿಲ್ಲ ಎಂಬುದು ನಮಗೆ ಕಂಡು ಬಂದಿದೆ. ಆದಿಮಾನವನ ಚಿಂತನೆಯಲ್ಲಿ ಭಾವನಾವಾದದ ಯಾವುದೇ ಚಿಹ್ನೆಗಳಾಗಲೀ, ಅಚ್ಚಾಗಲೀ ಇರಲಿಲ್ಲ. ಆದ್ದರಿಂದ ಮಾನವ ಸಮಾಜದ ಮುನ್ನಡೆ ವಸ್ತುವಾದಿ ಚಿಂತನೆಯೊಂದಿಗೆ ಪ್ರಾರಂಭವಾಯಿತು ಎಂಬುದು ಸುಸ್ಪಷ್ಟ. ಆದರೆ ನಂತರ, ಮಾನವ ಸಮಾಜದ ಬೆಳವಣಿಗೆಯ ಒಂದು ನಿರ್ದಿಷ್ಟ ಹಂತದಲ್ಲಿ ಅದು ಕೇವಲ ವಸ್ತುವಾದಿಯಾಗಿ ಉಳಿಯಲಿಲ್ಲ. ವಸ್ತುವಾದಿ ಚಿಂತನೆಯ ಜೊತೆಜೊತೆಗೆ ಭಾವನಾವಾದಿ ಚಿಂತನೆಯೂ ಸಮಾಜದಲ್ಲಿ ಕಾಣಿಸಿಕೊಂಡಿತು. ಹಾಗೂ ಅಂದಿನಿಂದ ವಸ್ತುವಾದ ಮತ್ತು ಭಾವನಾವಾದ–ವಸ್ತುವಾದಿ ಚಿಂತನೆ ಮತ್ತು ಭಾವನಾವಾದಿ ಚಿಂತನೆ– ಇವೆರಡೂ ಚಿಂತನಾ ಲಹರಿಗಳು ಮಾನವ ಸಮಾಜದಲ್ಲಿ ಜೊತೆಜೊತೆಗೆ ಸಾಗುತ್ತಿವೆ. ಈ ಭಾವನಾವಾದಿ ಚಿಂತನೆಯ ಬೆಳವಣಿಗೆಯ ಹಿಂದೆ ಒಂದು ಇತಿಹಾಸವಂತೂ ಖಂಡಿತ ಇದೆ.

ಮೊದಲಿನಿಂದಲೂ ಆದಿಮಾನವನ ಚಿಂತನೆ ವಸ್ತುವಾದಿಯಾಗಿರಬೇಕಾದರೆ ಮಾನವ ಸಮಾಜದಲ್ಲಿ ಭಾವನಾವಾದ ಅಥವಾ ಭಾವನಾವಾದಿ ಚಿಂತನೆ ಬೆಳೆದಿದ್ದಾದರೂ ಹೇಗೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದನ್ನು ವಿವರಿಸುವುದು ಹೇಗೆ? ಇದರ ಹಿಂದಿನ ಕಾರಣವೇನು? ಖಂಡಿತ ಇದೊಂದು ಸೂಕ್ತ ಪ್ರಶ್ನೆಯೇ.

ಆದಿಮಾನವನ ಆಲೋಚನೆಯಲ್ಲಿ ಅಲೌಕಿಕವಾದುದು ಏನೂ ಇರಲಿಲ್ಲ. ನೈಸರ್ಗಿಕ ಶಕ್ತಿಗಳ ಕುರಿತು ಮಾನವನ ತಿಳುವಳಿಕೆ ಸ್ಪಷ್ಟವಿರದಿದ್ದರೂ ಒಂದು ಅಂಶ ಅವನಿಗೆ ಸ್ಪಷ್ಟವಾಗಿತ್ತು: ನೈಸರ್ಗಿಕ ಶಕ್ತಿಗಳೆಂದರೆ ವಸ್ತುವಿನ ಶಕ್ತಿಗಳಲ್ಲದೇ ಬೇರೇನೂ ಅಲ್ಲ. ಅವನಿಗೆ ಶಕ್ತಿಯೆಂಬುದು ಒಂದು ಗ್ರಹಿಸಲಾಗದ ಅಂಶವಾಗಿತ್ತು, ಅದು ವಿಪತ್ಕಾರಿಯೋ ಅಥವಾ ಪೂಜ್ಯವೋ ಆಗಿತ್ತು, ಆದರೂ ಸದಾ ವಸ್ತುವಿನ ಶಕ್ತಿಯೇ ಆಗಿತ್ತು. ಅಂದರೆ ಗಾಳಿ, ನೀರು, ಬೆಂಕಿ, ಕಲ್ಲು ಇತ್ಯಾದಿಗಳ ಶಕ್ತಿ. ಶಕ್ತಿಯ ಕುರಿತಾದ ಅವನ ವಿಚಾರ ಹೀಗಿತ್ತು. ಆದ್ದರಿಂದ ಶಕ್ತಿಯ ಕುರಿತಾದ ಆದಿಮಾನವನ ಆಲೋಚನೆ ವಸ್ತುವಾದಿಯಾಗಿತ್ತು ಅಥವಾ ಇನ್ನೊಂದು ಮಾತಿನಲ್ಲಿ

ಹೇಳಬೇಕೆಂದರೆ ಶಕ್ತಿಯೆಂದರೆ ವಸ್ತುವಿನ ಶಕ್ತಿಯೇ ಆಗಿತ್ತು. ಒಂದು ನಿದರ್ಶನ ಪರಿಗಣಿಸಿ. ಒಂದು ಕಲ್ಲು ಬಂಡೆಯ ತುಂಡು ಕೆಳಗುರುಳುತ್ತಾ ಕೆಲ ಜನರನ್ನು ಸಮಾಧಿ ಮಾಡಿದೆ. ಇದನ್ನು ಭೌತಿಕಶಕ್ತಿಯ ಕ್ರಿಯೆಯೆಂದು ಮಾನವ ತಿಳಿಯುತ್ತಿದ್ದ. ವಿಜ್ಞಾನದ ಪ್ರಕಾರ ಭೌತಿಕ ಶಕ್ತಿಯೆಂದರೆ ವಸ್ತುವಿನ ಶಕ್ತಿಯೆಂದು ವಿಜ್ಞಾನದ ಯಾವುದೇ ವಿದ್ಯಾರ್ಥಿ ತಿಳಿದಿರುತ್ತಾನೆ. ಆದಿಮಾನವನು ಶಕ್ತಿಯನ್ನು ಎಂದೂ ಅಲೌಕಿಕವೆಂದಾಗಲೀ ಅಥವಾ ವಸ್ತು ಅತೀತ, ವಸ್ತುರಹಿತ ಘಟಕವೆಂದಾಗಲೀ ಎಂದು ಎಂದೂ ಭಾವಿಸಿರಲಿಲ್ಲ. ಮಾನವನನ್ನು ಬಡಿದದ್ದು ಉರುಳುತ್ತಿರುವ ಬಂಡೆಯ ಈ ಶಕ್ತಿ. ಈ ಶಕ್ತಿಯನ್ನು ಪಳಗಿಸಲು ಅಥವಾ ಹದ್ದುಬಸ್ತಿನಲ್ಲಿರಿಸಲು ಆದಿಮಾನವನು ಅದನ್ನು ಆರಾಧಿಸಲಾರಂಭಿಸಿದ. ವಸ್ತುವಿನ ಶಕ್ತಿಯನ್ನು ಪಳಗಿಸುವ ಅಥವಾ ಹದ್ದುಬಸ್ತಿನಲ್ಲಿರಿಸುವ ನಂಬಿಕೆಯಿಂದ ಆರಾಧಿಸುವ ಈ ಪ್ರಾಚೀನ ವಿಧಾನವೇ ಜಾದೂವಿದ್ಯೆಯಲ್ಲದೆ ಬೇರೇನೂ ಅಲ್ಲ. ಈ ಜಾದೂವಿದ್ಯೆ ನೈಸರ್ಗಿಕ ಶಕ್ತಿಗಳನ್ನು ಹತೋಟಿಗೆ ತೆಗೆದುಕೊಂಡು ಬಳಸಿಕೊಳ್ಳುವ ಉದ್ದೇಶದಿಂದ ಅಸ್ತಿತ್ವಕ್ಕೆ ಬಂದಿತು. ಆದ್ದರಿಂದಲೇ ಈ ಜಾದೂವಿದ್ಯೆಯು ಆದಿಮಾನವನ ವಿಜ್ಞಾನವೆಂದು ಕರೆಯಲ್ಪಡುವುದು. ಈ ವಿಜ್ಞಾನವು ಇಂದು ನಾವು ತಿಳಿದಿರುವ ವಿಜ್ಞಾನವಲ್ಲವೆಂದು ನೀವು ತಿಳಿಯಬೇಕು. ಅದು ಆದಿ ಮಾನವನ ವಿಜ್ಞಾನವಾಗಿತ್ತು. ನಾನೇಕೆ ಇದನ್ನು ವಿಜ್ಞಾನವೆಂದು ಕರೆಯುತ್ತಿದ್ದೇನೆ? ಇಂದು ವಿಜ್ಞಾನದ ಕಾರ್ಯವೇನು? ವಿಜ್ಞಾನ ವಸ್ತುವಿನ ಶಕ್ತಿಗಳನ್ನು ಅನಾವರಣಗೊಳಿಸುತ್ತದೆ, ನಿಸರ್ಗದ ನಿಗೂಢತೆಗಳನ್ನು ತೆರೆದಿಡುತ್ತದೆ, ವಿವಿಧ ನಿಯಮಗಳನ್ನು ಹುಡುಕುತ್ತದೆ, ವಸ್ತುವಿನ ಅಸ್ತಿತ್ವದ ರೀತಿಯನ್ನು ಗ್ರಹಿಸಲು ನೆರವಾಗುತ್ತದೆ. ಆದರೆ ಆದಿಮಾನವ ವಸ್ತುವಿನ ಶಕ್ತಿಯನ್ನು ತಿಳಿಯಲು, ಅದನ್ನು ತನ್ನ ಹತೋಟಿಗೆ ತರಲು ಜಾದೂವಿದ್ಯೆಯ ಮೂಲಕ ಪ್ರಯತ್ನಿಸಿದ. ಏಕೆಂದರೆ ಅವನಿಗೆ ಇನ್ನಾವ ವಿಧಾನವೂ ತಿಳಿದಿರಲಿಲ್ಲ. ಆದ್ದರಿಂದ ಅದನ್ನು ತಾನು ಅರ್ಥಮಾಡಿಕೊಂಡ ಹಾಗೇ ಆಲೋಚಿಸುತ್ತಿದ್ದ ಮತ್ತು ಇಂದು ಅರ್ಥಹೀನ ಎಂದು ಕಾಣುವ ಅನೇಕ ಪ್ರಸಂಗಗಳನ್ನು ಮಾಡುತ್ತಿದ್ದ. ಆದುದರಿಂದ ನೀವು ಸ್ವಲ್ಪ ಗಮನಿಸಿದರೆ, ಎಷ್ಟೋ ಜಾದೂ ಪಠಣಗಳಲ್ಲಿ ಯಾವುದೇ ಅರ್ಥವಿಲ್ಲವೆಂಬುದನ್ನು ನೀವು ಕಾಣಬಲ್ಲಿರಿ. ತಮಾಷೆಯೆಂದರೆ ಈ ತಂತ್ರಗಳನ್ನು ಬಳಸಿ ಆದಿಮಾನವ ನೈಸರ್ಗಿಕ ಶಕ್ತಿಗಳನ್ನು ಹತೋಟಿಗೆ ತರುವೆನೆಂಬ ಭ್ರಮೆಯಲ್ಲಿ ಇದ್ದ! ನೈಸರ್ಗಿಕ ಶಕ್ತಿಗಳನ್ನು ಅರಿಯಲು, ಹದ್ದುಬಸ್ತಿನಲ್ಲಿಡಲು ಅಥವಾ ಖುಷಿಪಡಿಸಲು ಆದಿಮಾನವ ಬಳಸಿದ ಜಾದೂವಿದ್ಯೆ–ಇದರಲ್ಲಿ ಅವನೆಷ್ಟು ಸಫಲವಾದನೋ ಇಲ್ಲವೊ ಎಂಬುದು ಬೇರೆ ವಿಷಯ– ಇತಿಹಾಸದ ಕಾಲಕ್ರಮದಲ್ಲಿ, ನಂತರದ ಹಂತದಲ್ಲಿ ವಸ್ತುವಿನಿಂದ ಸ್ವತಂತ್ರವಾದ ಅಥವಾ ವಸ್ತುವಿನಿಂದ ಹೊರತಾದ ಒಂದು ಅಲೌಕಿಕ ಶಕ್ತಿಯ ಅಥವಾ ದೇವರ ಪೂಜೆಯೊಂದಿಗೆ ಅವಿಚ್ಛಿನ್ನವಾಗಿ ಬೆಸೆದುಕೊಂಡಿತು. ಜಾದೂವಿದ್ಯೆಯೂ ಒಂದು ಮಿಥ್ಯಾ

ವಿಜ್ಞಾನವಾಗಿದ್ದು, ನೈಜ ವಿಜ್ಞಾನದ ಬೆಳವಣಿಗೆಯೊಂದಿಗೆ ಅದು ನಿರರ್ಥಕವಾಯಿತು. ಅನೇಕ ರೀತಿಯ ಮೂಢನಂಬಿಕೆಗಳ ಆಚರಣೆಯಲ್ಲಿ ಅದು ತನ್ನ ಹೆಜ್ಜೆ ಗುರುತನ್ನು ಉಳಿಸಿಹೋಗಿದೆ ಎಂದು ಕೆಲ ಮಾನವವಿಜ್ಞಾನಶಾಸ್ತ್ರಜ್ಞರು ಸರಿಯಾಗಿಯೇ ಗಮನಿಸಿದ್ದಾರೆ.

ಭಾವನಾವಾದ, ಆಸ್ತಿಕತೆ ಅಥವಾ ದೇವರ ಕಲ್ಪನೆ, ಇವೆಲ್ಲಾ ಸಮಾಜದಲ್ಲಿ ಉದಯಿಸಿದಾಗ, ಈ ಜಾದೂ ವಿದ್ಯೆ ಕ್ರಮೇಣವಾಗಿ ದೇವರನ್ನು ಪೂಜಿಸುವ ಮಂತ್ರಗಳಾಗಿ ರೂಪಾಂತರ ಹೊಂದಿತು.

## ಆದಿಕಾಲದಲ್ಲಿ ಸಮಾಜ ವಿಭಜಿತವಾಗಿರಲಿಲ್ಲ

ಮಾನವನ ಮೊಟ್ಟಮೊದಲ ಸಾಮಾಜಿಕ ಗುಂಪು, ಪ್ರಾಚೀನ ಅಲೆಮಾರಿ ಗುಂಪು (Primal horde) ಅಂದರೆ ಬುಡಕಟ್ಟು ಸಮಾಜದ ಪೂರ್ವಿಕ ಗುಂಪಾಗಿತ್ತು. ಗುಂಪಿನ ಸದಸ್ಯರ ಜೀವನಾಧಾರ ಏನಾಗಿತ್ತು? ಬಹಳ ಕಾಲದವರೆಗೆ ಹಣ್ಣು ಹಂಪಲುಗಳ ಸಂಗ್ರಹಣೆಯಿಂದ ಮತ್ತು ಬೇಟೆಯಿಂದ ಜೀವನ ನಿರ್ವಹಿಸುತ್ತಿದ್ದರು. ಇದನ್ನೆಲ್ಲಾ ಅವರು ಸಾಮೂಹಿಕವಾಗಿ ನಡೆಸುತ್ತಿದ್ದರು. ತಾವು ಪಡೆದುದನ್ನೆಲ್ಲಾ ತಮ್ಮೊಳಗೇ ಹಂಚಿಕೊಳ್ಳುತ್ತಿದ್ದರು. ದೈಹಿಕ ಬಲ ಪ್ರಯೋಗದಿಂದಲೋ ಅಥವಾ ಇಲ್ಲದೆಯೋ ಎಂಬುದು ಇಲ್ಲಿ ಅಪ್ರಸ್ತುತ. ಸಂಪತ್ತನ್ನು ಕೂಡಿಡುವುದು, ರಕ್ಷಿಸುವುದು ಅಥವಾ ಹೆಚ್ಚಿಸುವುದು ಆಗ ಅಸಾಧ್ಯವಾಗಿತ್ತು, ಏಕೆಂದರೆ ಅಂತಹ ಸಂಪತ್ತಾಗಲೀ ಅಥವಾ ಆಸ್ತಿಯಾಗಲೀ ಸಮಾಜದಲ್ಲಿ ಇರಲಿಲ್ಲ. ಸಮಾಜದಲ್ಲಿ ಸ್ಥಿರಾಸ್ತಿ ಅಂದರೆ ಬಳಕೆಗಾಗಿ ಕಾಯ್ದಿಡುವ ಹಾಗೂ ಇತರರ ಶ್ರಮದಿಂದ ಹೆಚ್ಚಿಸುವ ಆಸ್ತಿ ಇನ್ನೂ ಬಂದಿರದ ಕಾಲವದಾಗಿತ್ತು. ಆ ಹಂತದಲ್ಲಿ ಮಾನವನ ಜೀವನ ನಿರ್ವಹಣೆ ಬಹಳ ಸರಳವಾಗಿತ್ತು.

ಪ್ರತಿಕೂಲ ನೈಸರ್ಗಿಕ ಶಕ್ತಿಗಳ ಮಧ್ಯೆ ಏಕಾಂಗಿಯಾಗಿ ಮಾನವ ಬದುಕಲಾರ, ಉಳಿಯಲಾರ ಎಂಬ ವಾಸ್ತವಿಕ ಅವಶ್ಯಕತೆಯ ಕಾರಣದಿಂದಲೇ ಮಾನವನು ಸಮಾಜದಲ್ಲಿ ಸಂಘಟಿತನಾದ ಎಂಬುದನ್ನು ನಾನು ಈಗಾಗಲೇ ಹೇಳಿದ್ದೇನೆ. ಆದ್ದರಿಂದ ಮಾನವರು ಸಾಮೂಹಿಕವಾಗಿ ಬಾಳಿದರು, ಸಾಮೂಹಿಕವಾಗಿ ಬೇಟೆಯಾಡಿದರು ಹಾಗೂ ಈ ರೀತಿ ತಮ್ಮ ಜೀವನ ನಡೆಸಿದರು. ಅವರು ಪ್ರಜ್ಞಾಪೂರ್ವಕವಾಗಿ ಅಥವಾ ನೀತಿ ಮತ್ತು ನೈತಿಕ ಮೌಲ್ಯಗಳ ಪರಿಪ್ರಜ್ಞೆವುಳ್ಳವರಾಗಿ ತಾವು ಬೇಟೆಯಾಡಿದುದನ್ನು ಸಮಾನವಾಗಿ ಹಂಚಿಕೊಂಡರು ಅಂಥಲ್ಲ. ಅಂತಹ ವಿವೇಕವಾಗಲೀ, ನೀತಿ–ನೈತಿಕತೆಗಳ ಪರಿಪ್ರಜ್ಞೆಯಾಗಲಿ ಇನ್ನೂ ಸಮಾಜದಲ್ಲಿ ಉದಯಿಸಿರಲಿಲ್ಲ. ಹೇಳಬೇಕೆಂದರೆ ಮಾನವನನ್ನೂ ಮಾನವಗುಣಗಳನ್ನು ಗಳಿಸಿರಲಿಲ್ಲ. ಆಗ ಅವನಲ್ಲಿ ಪ್ರಾಣಿಸಮಾನವಾದ ಅನೇಕ ಗುಣಲಕ್ಷಣಗಳಿದ್ದವು. ಆದಿಕಾಲವಿರಲಿ, ಬುಡಕಟ್ಟು ಸಮಾಜದ ಉದಯದ ಪ್ರಾಥಮಿಕ ಕಾಲದಲ್ಲೂ ಮಾನವ ಹೆಚ್ಚು ಕಮ್ಮಿ ಪ್ರಾಣಿಗಳ ತರಹವೇ

ಇದ್ದ. ಹೀಗೆ ಮಾನವ ಒಂದರ್ಥದಲ್ಲಿ ಮೃಗೀಯನಾಗಿದ್ದು, ಪ್ರಾಣಿಗಳ ಗುಣಲಕ್ಷಣ ಹೊಂದಿದ್ದ. ಈ ಮೃಗೀಯ ಗುಣಲಕ್ಷಣಗಳ ಕಾರಣದಿಂದ ಮಾನವ ಆಹಾರವನ್ನು ಹಂಚಿಕೊಳ್ಳುವಾಗ ದೈಹಿಕಬಲ ಪ್ರಯೋಗಿಸಿ ಕಿತ್ತುಕೊಂಡು ತಿನ್ನುತ್ತಿದ್ದ. ಅದು ಅಂದಿನ ಚಿತ್ರಣ. ಅವರು ಪಡೆದುದರಲ್ಲಿ ಹೆಚ್ಚಿನ ಪಾಲನ್ನು ಬಲಿಷ್ಠನಾದವನು ಬಲ ಪ್ರಯೋಗಿಸಿ ಪಡೆದುಕೊಳ್ಳುತ್ತಿದ್ದ. ವಯಸ್ಸಿನ ದೌರ್ಬಲ್ಯದಿಂದ ಕಾಡಲ್ಪಟ್ಟ ವಯಸ್ಸಾದವರು, ದುರ್ಬಲರು–ಶಕ್ತಿಹೀನರಾಗಿದ್ದರೂ ಕೊಂಚವನ್ನಾದರೂ ಪಡೆಯಲು–ಕೆಲವೊಮ್ಮೆ ಸಫಲವಾಗಿ ಕೆಲವೊಮ್ಮೆ ವಿಫಲವಾಗಿ–ಅವಕಾಶವಂತೂ ಇರುತ್ತಿತ್ತು. ಆಗಲೂ ಬುಡಕಟ್ಟು ವಿಭಜಿತವಾಗಿರಲಿಲ್ಲ. ಸಮಾಜವು ಬುಡಕಟ್ಟು ಗುಣಲಕ್ಷಣವನ್ನು ಕಳೆದುಕೊಂಡಿರಲಿಲ್ಲ.

## ಅಸಮಾನತೆ ದುರಾಸೆಯಿಂದ ಬೆಳೆಯಲಿಲ್ಲ–
## ಅಸಮಾನತೆಯ ಆಧಾರದ ಸಮಾಜ ದುರಾಸೆಗೆ ಜನ್ಮ ನೀಡಿತು

ದುರಾಸೆ ಮಾನವನ ಶಾಶ್ವತ ಲಕ್ಷಣ–ಅದು ಯಾವಾಗಲೂ ಇತ್ತು, ಎಂದೆಂದಿಗೂ ಇದ್ದೇ ಇರುತ್ತದೆ, ಸಮಾಜದಲ್ಲಿನ ಅಸಮಾನತೆ ದುರಾಸೆಯ ಪರಿಣಾಮ ಹಾಗೂ ಮಾನವನ ದುರಾಸೆಯಿಂದ ಸಮಾಜವು ಬಡವ–ಬಲ್ಲಿದ, ಉಳ್ಳವ–ಇಲ್ಲದವ ಎಂದು ವರ್ಗವಿಭಜಿತವಾಯಿತು ಎಂದು ಪರಿಗಣಿಸುವವರು ಎಷ್ಟು ತಪ್ಪು ಎಂದು ತೋರಿಸಲು ಮಾತ್ರ ನಾನು ಇವನ್ನೆಲ್ಲಾ ಚರ್ಚಿಸುತ್ತಿದ್ದೇನೆ. ಒಬ್ಬ ಯಾವಾಗಲೂ ಇನ್ನೊಬ್ಬನನ್ನು ತುಳಿದಿಡಲು ಪ್ರಯತ್ನಿಸುತ್ತಾನೆ ಹಾಗೂ ಈ ಅವಕಾಶವನ್ನು ಎಂದೂ ಕಳೆದುಕೊಳ್ಳುವುದಿಲ್ಲ, ಇದು ಮಾನವ ಸ್ವಭಾವ ಮತ್ತು ಇದರಿಂದಲೇ ಕೆಲವರು ಯಾವಾಗಲೂ ಉಚ್ಛ್ರಾಯಸ್ಥಿತಿ ತಲುಪುತ್ತಾರೆ, ಅಸಮಾನತೆ–ಬಡವ–ಬಲ್ಲಿದ ಎಂಬುದು ಸಮಾಜದಲ್ಲಿ ಎಂದಿಗೂ ಇರುತ್ತದೆ ಎಂದು ಬಹಳಷ್ಟು ಜನ ತಿಳಿದಿದ್ದಾರೆ. ಅವರಿದನ್ನು ಇತಿಹಾಸದಿಂದಲ್ಲ, ತಮ್ಮ ಊಹಾಪೋಹಗಳಿಂದ ಹೇಳುತ್ತಾರೆ. ಇಲ್ಲದೆ ಹೋದಲ್ಲಿ ಅವರು, 'ಮೂಲ ಪ್ರವೃತ್ತಿಗಳು ಸಮಾಜದ ಅಸಮಾನತೆಗೆ ಜನ್ಮ ನೀಡಿಲ್ಲ, ಬದಲಿಗೆ ಅಸಮಾನತೆಯ ಮೇಲೆ ಕಟ್ಟಲ್ಪಟ್ಟ ಸಮಾಜ ಮಾನವನಲ್ಲಿನ ಈ ಮೂಲ ಪ್ರವೃತ್ತಿಗಳಿಗೆ ಜನ್ಮ ನೀಡಿ ಅವನ್ನು ಪೋಷಿಸಲು ನೆರವಾಗಿದೆ' ಎಂಬುದನ್ನು ಮನಗಾಣುತ್ತಿದ್ದರು. ನಾನು ಒತ್ತಿ ಹೇಳಲು ಬಯಸುವ ಹಾಗೂ ನಾವು ಚೆನ್ನಾಗಿ ಗಮನದಲ್ಲಿಡಬೇಕಾದ ಅಂಶವೆಂದರೆ ಮೃಗೀಯ ಪ್ರವೃತ್ತಿಗಳೊಡನೆಯೂ ಆದಿಮಾನವರು ಸಾಮೂಹಿಕವಾಗಿಯೇ ಜೀವಿಸಿದ್ದರು ಹಾಗೂ ಬುಡಕಟ್ಟುಗಳು ವಿಘಟನೆ ಗೊಂಡಿರಲಿಲ್ಲ. ಮಾಲೀಕ ವರ್ಗ ಮತ್ತು ಕಾರ್ಮಿಕ ವರ್ಗದ ಮಾತಿರಲಿ ಆಗ ಸಮಾಜ ಇನ್ನೂ ವರ್ಗ ವಿಭಜಿತವಾಗಿರಲಿಲ್ಲ. ಆ ಆದಿ ಮೃಗೀಯ ಮಾನವರು ತಮ್ಮೊಳಗೆ ಕಚ್ಚಾಡುತ್ತಿದ್ದುದು ಒಂದು ರೊಟ್ಟಿಯ ತುಣುಕಿಗಾಗಿ ಕಾದಾಡುವ ಬೀದಿ ನಾಯಿಗಳಂತೆ ಕಾಣುತ್ತಿತ್ತು. ಅವರು ಪರಸ್ಪರ ತಮ್ಮೊಳಗೆ ಒಬ್ಬರಿನ್ನೊಬ್ಬರ ವಿರುದ್ಧ ಕಾದಾಡುತ್ತಿದ್ದರು, ಆಹಾರಕ್ಕಾಗಿ ಕಿತ್ತಾಡುತ್ತಿದ್ದರು. ಆದರೂ

ಸಮಾಜ ವಿಘಟಿತವಾಗಿರಲಿಲ್ಲ, ವರ್ಗ ವಿಭಜನೆ ಬಂದಿರಲಿಲ್ಲ, ನಾವೀಗ ಕಾಣುವ ಮಾಲೀಕರು, ಕಾರ್ಮಿಕರು, ವ್ಯಾಪಾರಿಗಳು, ಜಮೀನ್ದಾರರು, ಮಧ್ಯಮ ರೈತರು ಹಾಗೂ ಭೂಹೀನ ರೈತರು ಮುಂತಾದವರು ಆಗಿನ್ನೂ ಬಂದಿರಲಿಲ್ಲ. ಹಾಗಾದರೆ ವರ್ಗಗಳು ಉದಯಿಸಿದ್ದು ಹೇಗೆ?

## ಕೃಷಿಯ ಉದಯ ಹಾಗೂ ಅದರ ಪರಿಣಾಮ

ಸಮಾಜದಲ್ಲಿ ಸ್ಥಿರಾಸ್ತಿಯ ಉಗಮದೊಂದಿಗೆ ಮಾತ್ರ ವರ್ಗಗಳು ಅಸ್ತಿತ್ವಕ್ಕೆ ಬಂದವು. ಉತ್ಪಾದನಾ ಸಾಧನಗಳ ಮೇಲೆ ಸ್ಥಿರ ಮಾಲೀಕತ್ವದ ಪರಿಸ್ಥಿತಿ ನಿರ್ಮಾಣವಾಗುವ ಹಂತವನ್ನು ಉತ್ಪಾದನಾ ವ್ಯವಸ್ಥೆ ತಲುಪಿದಾಗ ಮಾತ್ರವೇ ಹಾಗೂ ಅದೇ ಗತಿಯಲ್ಲಿ ಅದು ಇತರರ ಶ್ರಮವನ್ನು ಲೂಟಿ ಮಾಡುವ ಹಾಗೂ ಸಂಪತ್ತನ್ನು ಕೊಳ್ಳೆಹೊಡೆದು ಹೆಚ್ಚಿಸಿಕೊಳ್ಳುವ ಪರಿಸ್ಥಿತಿ ನಿರ್ಮಿಸಿದಾಗ ಮಾತ್ರವೇ ಸಮಾಜದಲ್ಲಿ ವರ್ಗಗಳು ಉದಯಿಸಿದವು. ಆ ಕಾಲ ಯಾವುದದು? ಸ್ಥೂಲವಾಗಿ ಹೇಳಬೇಕೆಂದರೆ ಅದು ಪ್ರಾಣಿ ಸಾಕಾಣಿಕೆ ಹಾಗೂ ವಿಶಿಷ್ಟವಾಗಿ ಕೃಷಿಯು ಸಮಾಜದಲ್ಲಿ ಬಂದು ಅದು ಸ್ಥಿರಾಸ್ತಿಯನ್ನು ಸೃಷ್ಟಿಸಿದ ಕಾಲವಾಗಿದೆ. ಬೇಟೆಗಾಗಿ ಹಾಗೂ ಆಹಾರ ಸಂಗ್ರಹಿಸಲು ಮಾನವನು ಗುಂಪುಗಳಲ್ಲಿ ಅಲೆಯುತ್ತಿದ್ದಾಗ ಇದ್ದಕ್ಕಿದ್ದಂತೆ ಉದಾಹರಣೆಗೆ, ಒಂದು ಮಾವಿನ ಓಟೆ ಬಿದ್ದ ಜಾಗದಲ್ಲೇ ಮಾವಿನ ಮರ ಬೆಳೆದು ಅದೇ ಹಣ್ಣನ್ನು ನೀಡುವುದನ್ನು ಕಂಡು ಈ ವಿಷಯ ಅವನ ಮನಸ್ಸಿಗೆ ಹೊಳೆಯಿತು. ಈ ಓಟೆಯಿಂದ ಮರ ಬಂದಿರುವುದಾದರೆ, ಅದೇ ಬೀಜ ಬಿತ್ತಿದಲ್ಲಿ ಮರವನ್ನು ಹಾಗೂ ಹಣ್ಣುಗಳನ್ನು ಪಡೆಯಬಹುದಲ್ಲ ಎಂದವನು ಯೋಚಿಸಿರಬೇಕು. ಈ ನಿರ್ಣಯಕ್ಕೆ ಆತ ಬರಲು ಅವನು ಸಾವಿರಾರು ವರ್ಷಗಳನ್ನು ಕಳೆದಿರಬೇಕು ಎಂಬುದಂತೂ ನಿಜ. ಈ ವಿಚಾರದ ಮೇಲೆ ಅವಲಂಬಿತವಾಗಿ ಮುಂದೊಂದು ದಿನ ನೆಲವನ್ನು ಉಳುವುದು ಮತ್ತು ಕೃಷಿ ಮಾಡುವುದು ಸಮಾಜದಲ್ಲಿ ಬಂದವು.

ಹೀಗೆ ಪುರಾತನ ಹಂತದಲ್ಲಿ ಮಾನವರು ಗುಂಪುಗಳಲ್ಲಿದ್ದು ಅಲೆಮಾರಿ ಜೀವನ ನಡೆಸುತ್ತಿದ್ದರು. ಇಡೀ ಸಮಾಜ ಆಗ ಇಂತಹ ಅಲೆಮಾರಿ ಗುಂಪುಗಳಿಂದಲೇ ರಚಿತವಾಗಿತ್ತು. ಇಂದು ನಾವು ಕಾಣುವ ರಾಷ್ಟ್ರ, ರಾಷ್ಟ್ರೀಯ ಸೀಮೆ, ಸಂಪ್ರದಾಯ, ಇತ್ಯಾದಿಗಳು ಆಗ ಇರಲು ಸಾಧ್ಯವಿರಲಿಲ್ಲ. ನಾವಿಂದು ಮಾತನಾಡುವ ಭಾಷೆಗಳು ಸೃಷ್ಟಿಯಾಗಿರಲಿಲ್ಲ. ಆದಿಮಾನವನ ಭಾಷೆ ಪ್ರಾಣಿಗಳಂತೆ ಇತ್ತು. ಇಂತಹ ಹಂತದಲ್ಲಿ ನಾನು ಚರ್ಚಿಸುತ್ತಿರುವ ಕೃಷಿ ಇದ್ದಕ್ಕಿದ್ದಂತೆ ಸಮಾಜದಲ್ಲಿ ಅಸ್ತಿತ್ವಕ್ಕೆ ಬಂತು. ಕೃಷಿಯ ವಿಧಾನವನ್ನು ಮಾನವ ಅರಿತುಕೊಂಡ. ಸಾಮೂಹಿಕವಾಗಿ ಕಾಡನ್ನು ಕಡಿದು ಅರಣ್ಯನಾಶಗೊಳಿಸಿ, ಕ್ರೂರ ಮೃಗಗಳ ವಿರುದ್ಧ ಹೋರಾಡುತ್ತಾ ಮಾನವರು ಬೀಳುಬಿದ್ದ ಭೂಮಿಯನ್ನು ಕೃಷಿಯೋಗ್ಯವನ್ನಾಗಿಸಿದರು.

## ಸ್ಥಿರಾಸ್ತಿ ಹಾಗೂ ಖಾಸಗಿ ಮಾಲೀಕತ್ವದ ಉಗಮ

ಆದ್ದರಿಂದ ಆಸ್ತಿ ಬರುವ ಮುನ್ನವೇ ಯಾರೂ ಭೂಮಿಯ ಒಡೆಯರಾಗಿ ಹುಟ್ಟಿರಲಿಲ್ಲ ಎಂಬುದು ಸ್ವಯಂವೇದ್ಯ. ಆಸ್ತಿಯನ್ನು ಪಿತ್ರಾರ್ಜಿತ ಬಳುವಳಿಯಾಗಿ ಪಡೆಯುವ ಹಕ್ಕು ಒಂದು ಪೂಜ್ಯ ಹಕ್ಕಾಗಿತ್ತು, ಅದು ಅನಾದಿ ಕಾಲದಿಂದ ಪೂರ್ವಜರಿಂದ ಬಂದಿರುವಂತಹುದು ಎನ್ನುವ ಮಾಲೀಕರ ಘೋಷಣೆ ಎಷ್ಟು ಸುಳ್ಳು ಎಂಬುದನ್ನು ನಾವು ಮನಗಾಣಬೇಕು. ಇವರ ಪೂರ್ವಜರು ಭೂಒಡೆಯರಾಗುವ ಹಿಂದೆ ಒಂದು ಇತಿಹಾಸವಿದೆ ಎಂಬುದನ್ನು ಸಹ ನಾವು ಅರ್ಥ ಮಾಡಿಕೊಳ್ಳಬೇಕು. ಮತ್ತೆ ಅದು ದ್ರೋಹದ ಭಯಾನಕ ಇತಿಹಾಸ, ಕ್ರೌರ್ಯದ ಭಯಂಕರ ಕತೆ–ಅದು ಇತರರ ಶ್ರಮವನ್ನು ದೈಹಿಕ ಶಕ್ತಿ ಮತ್ತು ಬಲ ಪ್ರಯೋಗದಿಂದ ಲೂಟಿ ಮಾಡುವ, ದರೋಡೆಯ ಇತಿಹಾಸವಾಗಿದೆ. ಈ ಇತಿಹಾಸವನ್ನು ನಾವೂ ತಿಳಿದುಕೊಂಡು ಇತರರಿಗೂ ತಿಳಿಸಬೇಕು. ಕ್ರೂರ ಪ್ರಾಣಿ ಮತ್ತು ಪ್ರತಿಕೂಲ ನೈಸರ್ಗಿಕ ಶಕ್ತಿಗಳ ವಿರುದ್ಧ ಹೋರಾಡಿ ಸಾಮೂಹಿಕವಾಗಿ ಕೃಷಿಗೆ ದೊರಕುವಂತೆ ಮತ್ತು ತಕ್ಕದ್ದಾಗುವಂತೆ ಮಾಡಲ್ಪಟ್ಟ ಭೂಮಿ, ಸಾಮೂಹಿಕ ಶ್ರಮದ ಪ್ರತಿಫಲವಾದ ಭೂಮಿ ಕೇವಲ ದೈಹಿಕ ಬಲದಿಂದ ಕೆಲ ಜನರ ಪಾಲಾಯಿತು. ಹೀಗೆ ಕೃಷಿಯ ಅನ್ವೇಷಣೆ ಮತ್ತು ಉತ್ಪಾದನೆಯ ಸ್ಥಿರ ಸಾಧನವಾಗಿ ಭೂಮಿಯ ಉಗಮದೊಂದಿಗೆ ಮಾನವನ ಜೀವನೋಪಾಯದಲ್ಲಿ ಒಂದು ಮಹತ್ತರ ಬದಲಾವಣೆ ಬಂದುದನ್ನು ನಾವು ಕಾಣಬಹುದು.

ಹಿಂದೆ ಮಾನವನ ಜೀವನೋಪಾಯ ಅಸ್ಥಿರವಾಗಿತ್ತು ಹಾಗೂ ಅವನು ಹಸಿವನ್ನು ತೀರಿಸಿಕೊಳ್ಳಲು ಬೇಟೆ ಮತ್ತು ಹಣ್ಣು ಹಂಪಲುಗಳ ಮೇಲೆ ಅವಲಂಬಿತನಾಗಬೇಕಿತ್ತು. ಇದಕ್ಕಾಗಿ ಅವನು ಅಲೆಮಾರಿ ಜೀವನ ನಡೆಸುತ್ತಿದ್ದ. ಆದರೀಗ ಬದಲಾವಣೆ ಬಂದಿತು. ಏಕೆಂದರೆ ಭೂಮಿ ಎಂತಹ ಉತ್ಪಾದನಾ ಸಾಧನವೆಂದರೆ ಅದರಿಂದ ಪ್ರತಿವರ್ಷ ಬೆಳೆ ಬೆಳೆಯಬಹುದು, ಇಳುವರಿ ಪಡೆಯಬಹುದು, ಭೋಗಿಸಬಹುದು. ಆದ್ದರಿಂದ ಈಗ ಕೇವಲ ಬದುಕುಳಿಯಲು ಅಲೆಯುವ ಅವಶ್ಯಕತೆ ಉಳಿಯಲಿಲ್ಲ. ಜೊತೆಗೆ ಇನ್ನೇನಾಯಿತು? ಮಾನವ ತಾನು ಭೂಒಡೆಯನಾಗಬಹುದು ಹಾಗೂ ಇತರರ ಶ್ರಮ ಬಳಸಿ ಪ್ರತಿಫಲ ಪಡೆಯಬಹುದು ಎಂಬುದನ್ನು ಅರಿತುಕೊಂಡ. ಇವರೆಲ್ಲರಲ್ಲಿ ಬಲಿಷ್ಠರಾದವರು ತಾವು ಹೇಗಾದರೂ ಮಾಡಿ ಭೂಮಿಯ ಒಡೆತನ ಪಡೆದುಕೊಂಡರೆ, ತಾವು ಉತ್ಪಾದನೆಯ ಒಡೆಯರೂ ಆಗಬಹುದು ಹಾಗೂ ಭೂಮಿಯ ಮೇಲಿನ ಹಕ್ಕು ತಮ್ಮದಾಗುತ್ತದೆ, ತತ್ಪರಿಣಾಮವಾಗಿ ತಾವು ಸುಭಿಕ್ಷ ಜೀವನವನ್ನು ನಡೆಸಬಹುದು ಎಂದು ಆಲೋಚಿಸಿದರು.

ಇತರರನ್ನು ವಂಚಿಸುವ ಈ ಮನೋಧರ್ಮ ಏಕೆ? ಏಕೆಂದರೆ ಇತರರೊಡನೆ ಸಮಾನವಾಗಿ ಹಂಚಿಕೊಂಡರೆ ಯಾರಿಗೂ ಕನಿಷ್ಠ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಆಗುತ್ತಿರಲಿಲ್ಲ. ಸಮಾನತೆ ಮತ್ತು ನ್ಯಾಯದ ಪರಿಪ್ರಜ್ಞೆ ಸಮಾಜದಲ್ಲಿ ಇನ್ನೂ ಉದಯಿಸದೇ

ಇದ್ದ ಕಾಲವದು. ಅವರು ಹೇಗೆ ಗಾಂಧಿ ಅಥವಾ ಬುದ್ಧನ ಶಿಷ್ಯರಾಗಿರಲು ಸಾಧ್ಯ? ಮಾನವನು ಆಗ ಅರ್ಧ ಪ್ರಾಣಿಯ ಹಂತದಲ್ಲಿದ್ದ ಹಾಗೂ ಅವನ ನಡತೆಯೂ ಪ್ರಾಣಿಗಳ ತರಹವೇ ಇತ್ತು. ಆದ್ದರಿಂದಲೇ ಅವನು ಆ ರೀತಿ ಚಿಂತಿಸಲು ಅಥವಾ ನಡೆಯಲು ಆಗಲಿಲ್ಲ. ಆ ದಿನಗಳಲ್ಲಿ ಮನುಷ್ಯನ ಮಹೋನ್ನತ ಕಾಳಜಿ ಎಂದರೆ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದೇ ಆಗಿತ್ತು. ಈ ವಾಸ್ತವಿಕ ಅವಶ್ಯಕತೆ ಮತ್ತು ಜೀವನದ ಮೇಲೆ ಅದರ ಪ್ರಭಾವ ಯಾವುದೇ ಆದರ್ಶಕ್ಕಿಂತ ಹೆಚ್ಚಾಗಿತ್ತು. ವಸ್ತು ಪರಿಸ್ಥಿತಿ ಹೇಗಿತ್ತು? ಅಂದಿನ ಉತ್ಪಾದನಾ ವ್ಯವಸ್ಥೆ ಮತ್ತು ಮಾನವನ ಉತ್ಪಾದನಾ ಸಾಮರ್ಥ್ಯವನ್ನು ಅವಲಂಬಿಸಿಕೊಂಡು ಅವನು ಭೂಮಿಯಿಂದ ಉತ್ಪಾದಿಸುತ್ತಿದ್ದುದನ್ನು ಸಮನಾಗಿ ಹಂಚಿಕೊಂಡರೆ ಅವನ ಕನಿಷ್ಠ ಅವಶ್ಯಕತೆಗಳೂ ಪೂರೈಸುತ್ತಿರಲಿಲ್ಲ, ಇನ್ನು ವಿಲಾಸಿ ಜೀವನವಂತೂ ದೂರದ ಮಾತಾಯಿತು. ಎಲ್ಲರೂ ಸಮನಾಗಿ ಹಂಚಿಕೊಂಡರೆ ಹೆಚ್ಚೆಂದರೆ ಎಲ್ಲರಿಗೂ ದಿನಕ್ಕೆ ಒಂದು ತುತ್ತು ಅನ್ನ, ಮೈ ಮುಚ್ಚಲು ಮರದ ತೊಗಟೆಯ ಒಂದು ಚೂರು–ಇದೂ ಕೆಲ ಗುಂಪುಗಳಿಗೆ ಮಾತ್ರ, ಎಲ್ಲರಿಗೂ ಅಲ್ಲ–ದೊರಕುತಿತ್ತು. ಕೃಷಿ ಸಲಕರಣೆಯಿಲ್ಲದವರು ಅಥವಾ ಬೇಕಾದಷ್ಟು ಭೂಮಿ ಇಲ್ಲದವರು ಆಹಾರವನ್ನರಸಿಕೊಂಡು ಬೇರೆಡೆ ತಿರುಗಬೇಕಾಗುತ್ತಿತ್ತು.

## ಉತ್ಪಾದನೆಯ ಕೊರತೆ ಮತ್ತದರ ಪ್ರಭಾವ

ಒಂದು ಅಂಶ ಇಲ್ಲಿ ಬಹಳ ಪ್ರಸ್ತುತವಾದುದು. ಅದೆಂದರೆ ಮಾನವನ ಅವಶ್ಯಕತೆ ಎಂದೂ ಹೆಚ್ಚುತ್ತಿರುತ್ತದೆ, ಅದು ಸ್ಥಾಯಿಯಾಗಿ ಇರಲಾರದು. ಇದು ಸಹಜವೂ ಹೌದು. ಏಕೆಂದರೆ ಒಂದಡೆ ಜನಸಂಖ್ಯೆ ಹೆಚ್ಚುತ್ತಿದೆ. ಹಾಗೆಯೇ ಮಾನವನ ಅವಶ್ಯಕತೆ ಮತ್ತು ಉತ್ತಮ ಜೀವನ ನಡೆಸುವ ಅವನ ಆಕಾಂಕ್ಷೆಯೂ ಬೆಳೆಯುತ್ತಲಿದೆ. ಈ ವಾಸ್ತವಾಂಶವನ್ನು ಅಲ್ಲಗಳೆಯಲಾಗದು. ಅಂದಿನ ದಿನಗಳಲ್ಲಿ ಮಾನವನ ಈ ಬೆಳೆಯುತ್ತಿರುವ ಅವಶ್ಯಕತೆಗೆ ಹೋಲಿಸಿದರೆ ಅವನ ಉತ್ಪಾದನೆ ಸಾಲದಾಗಿತ್ತು. ಆದ್ದರಿಂದ ಉತ್ಪಾದನಾ ವ್ಯವಸ್ಥೆಯ ಆ ಪುರಾತನ ಸ್ಥಿತಿಯಲ್ಲಿ ಸಿಗುವ ಅತ್ಯಂತ ಕಡಿಮೆ ಉತ್ಪಾದನೆಯನ್ನು ಹಂಚಿಕೊಳ್ಳಲು ಜಗಳ–ಸಂಘರ್ಷಗಳು ಸರ್ವೇಸಾಮಾನ್ಯವಾಗಿದ್ದವು. ವಾದಕ್ಕಾಗಿ ಹೇಳುವುದಾದರೆ ಬಹುಶಃ ನಾಗರಿಕತೆಯ ಉದಯದ ಕಾಲದಿಂದಲೇ ಮಾನವನ ಸದಾ ಹೆಚ್ಚುತ್ತಿರುವ ಅವಶ್ಯಕತೆಗೆ ತಕ್ಕಂತೆ ಉತ್ಪಾದನೆಯೂ ಹೆಚ್ಚುವಂತಹ ಪರಿಸ್ಥಿತಿಯೇನಾದರೂ ಇದ್ದಿದ್ದರೆ, ಇತರರನ್ನು ವಂಚಿಸಿ ತಾನು ಮಾತ್ರ ಅನುಭವಿಸುವ ಮನೋಭಾವ ಬರುತ್ತಿರಲಿಲ್ಲ. ಉದಾಹರಣೆಗಾಗಿ ನಾವೊಂದು ಬಯಲಿನಲ್ಲಿ ಕುಳಿತಿದ್ದೇವೆಂದುಕೊಳ್ಳೋಣ. ಬೀಸುವ ಗಾಳಿಯಿಂದ ಇತರರನ್ನು ವಂಚಿಸುವ ಪ್ರಶ್ನೆಯೇ ಏಳುವುದಿಲ್ಲ. ಆದರೆ ಫ್ಯಾನ್, ಹವಾನಿಯಂತ್ರಿತ ಕೊಠಡಿ, ಅಥವಾ ಕಾರುಗಳ ಬಗ್ಗೆ ಖಂಡಿತ ಸ್ಪರ್ಧೆಯಿದೆ–ನಮಗಿಷ್ಟವಿದ್ದರೂ ಇವೆಲ್ಲವನ್ನು ಹೊಂದುವಂತಹ

ಸೌಲಭ್ಯ ನಮಗಿಲ್ಲ. ಒಂದು ಮೋಟಾರು ಕಾರು ಪಡೆಯಲು ನಮ್ಮಲ್ಲಿ ಸ್ಪರ್ಧೆ ಇರುವುದೇಕೆಂದರೆ ಅವುಗಳ ಕೊರತೆ. ನಾವೆಲ್ಲರೂ ಒಂದು ಮೋಟಾರು ಕಾರು ಹೊಂದಲು ಹೇಗೆ ಸಾಧ್ಯ? ಕೊಳ್ಳುವ ಶಕ್ತಿಯ ಪ್ರಶ್ನೆಯೂ ಇದಕ್ಕೆ ಸಂಬಂಧಿಸಿದೆ. ಆದ್ದರಿಂದ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಸ್ಪರ್ಧೆಯಿದೆ. ಈ ಎಲ್ಲಾ ಸೌಕರ್ಯಗಳನ್ನು ಯಾವುದೇ ವಿಧವಾದ–ಸರಿಯಾದ ಅಥವಾ ತಪ್ಪಾದ–ಜೀವನೋಪಾಯದ ಮಾರ್ಗಗಳಿಂದ ಪಡೆಯಲು ನಾವು ಬಯಸುತ್ತೇವೆ. ಆದ್ದರಿಂದ, ಭೋಗಕ್ಕಾಗಿ ಮತ್ತು ವಿಲಾಸಕ್ಕಾಗಿ ಒಬ್ಬರಿನ್ನೊಬ್ಬರು ಹಿಂದಿಕ್ಕುವ ಭರದಲ್ಲಿ ಜರಗುವ ಪೈಪೋಟಿ ಇದಾಗಿದೆ; ಅಧಿಕಾರ ಹಾಗೂ ಸ್ಥಾನಮಾನಗಳಿಗಾಗಿ ಜರುಗುವ ಕಾದಾಟ ಮತ್ತು ಸಂಘರ್ಷಗಳಾಗಿವೆ. ಏಕೆಂದರೆ ನಮ್ಮ ಅವಶ್ಯಕತೆಗಳನ್ನು ಪೂರೈಸುವ ಸೌಕರ್ಯದ ಸಾಮಗ್ರಿಗಳ ಕೊರತೆಯಿದೆ. ಆದರೆ ನೈಸರ್ಗಿಕ ಗಾಳಿಯನ್ನು ಅನುಭವಿಸಲು ನಮ್ಮಲ್ಲಿ ಯಾವುದೇ ಘರ್ಷಣೆ ಇದೆಯೇ ಅಥವಾ ಅದಕ್ಕಾಗಿ ನಾವು ಯಾರನ್ನಾದರೂ ಮೋಸಗೊಳಿಸುವ ಅಥವಾ ತುಳಿಯುವ ಅವಶ್ಯಕತೆ ಇದೆಯೇ? ಇಲ್ಲ, ಇಂತಹುದು ಆಗುವುದಿಲ್ಲ. ಗಾಳಿ ವಿಫುಲ ವಾಗಿರುವುದರಿಂದ ನಾವೆಲ್ಲರೂ ಇಷ್ಟ ಬಂದಷ್ಟು ಅದನ್ನು ಅನುಭವಿಸಬಹುದು. ಹಾಗಾಗಿ ಮಾನವನ ಜೀವನಕ್ಕೆ ಅವಶ್ಯವಾದ ಜೀವನದ ಎಲ್ಲಾ ಅಗತ್ಯತೆಗಳು ವಿಫುಲವಾಗಿ ಉತ್ಪಾದನೆಯಾಗಲು ಹಾಗೂ ಎಲ್ಲರಿಗೂ ಸಿಗಲು ಸಾಧ್ಯವಾದಲ್ಲಿ ಮಾತ್ರವೇ, ಮಾನವನ ಅವಶ್ಯಕತೆಗಳು ಪೂರೈಸಲು ಸಾಧ್ಯ. ಅಂದರೆ ಉತ್ಪಾದನೆಯು ಹೇರಳವಾಗುವುದರೊಂದಿಗೆ ಮಾನವನ ಬೆಳೆಯುತ್ತಿರುವ ಅವಶ್ಯಕತೆಗಳಿಗೆ ಸರಿಸಮನಾಗಿ ಸಾಮಗ್ರಿಗಳ ಪೂರೈಕೆಯೂ ಇರುವಂತಹ ವಿತರಣಾ ವ್ಯವಸ್ಥೆ ಇದ್ದಲ್ಲಿ ಮಾತ್ರ, ಕೇವಲ ಆಗ ಮಾತ್ರವೇ ಈ ಸಮಸ್ಯೆಯನ್ನು ಎಂದೆಂದಿಗೂ ಕೊನೆಗಾಣಿಸಬಹುದು; ಆಗ ಎಂದೂ ಇತರರೊಡನೆ ಸ್ಪರ್ಧೆಗಿಳಿಯುವ ಅಥವಾ ಇತರರನ್ನು ವಂಚಿಸುವ ಮನೋಭಾವ ಉಳಿಯುವುದಿಲ್ಲ.

ಆದರಿದು ತಮಾಷೆಯ ವಿಷಯವಲ್ಲ–ಆದಿಕಾಲದ ಸಮಾಜದ ಮಾತು ಬಿಡಿ, ಇಂದೂ ಸಹ ಇದು ಸಾಧ್ಯವಿಲ್ಲ.

ಆ ವಿಷಯ ಒತ್ತಟ್ಟಿಗಿರಲಿ, ಆದಿಮಾನವನ ಮೂಲಭೂತ ಸಮಸ್ಯೆಗಳ ಕುರಿತಾದ ನಮ್ಮ ಚರ್ಚೆಗೆ ಹಿಂದಿರುಗೋಣ. ಸಮಸ್ಯೆಯ ಕೇಂದ್ರಬಿಂದುವೆಂದರೆ ಬೆಳೆಯುತ್ತಿರುವ ಮಾನವನ ಅವಶ್ಯಕತೆ ಮತ್ತು ಉತ್ಪಾದನೆಯ ತೀವ್ರ ಕೊರತೆಯ ನಡುವಣ ದ್ವಂದ್ವ. ಆದ್ದರಿಂದ ವ್ಯಕ್ತಿಗತ ಅವಶ್ಯಕತೆಗಳ ತೃಪ್ತಿಗಾಗಿ ಮಾನವ ಮಾನವನ ನಡುವೆ ಸಂಘರ್ಷ ಉಂಟಾಯಿತು. ಎಲ್ಲರ ಸಾಮೂಹಿಕ ಪ್ರಯತ್ನಗಳಿಂದ ಬರಡು ಭೂಮಿಯನ್ನು ಕೃಷಿಯೋಗ್ಯ ಭೂಮಿಯನ್ನಾಗಿ ಮಾಡಲಾಗಿತ್ತು. ಅವರಲ್ಲಿ ಬಲಾಢ್ಯನಾದವನು ಈಗ ತನ್ನ ಬಲಪ್ರಯೋಗಿಸಿ ಅದನ್ನು ತನ್ನದಾಗಿಸಿಕೊಂಡು ಅದರ ಒಡೆಯನಾದ. ನಾಯಕರು, ಯೋಧರು–ಅವರಲ್ಲಿನ

ಬಲಾಢ್ಯರು–ಸಹಜವಾದ ಹಾಗೂ ಸಮಾನಹಕ್ಕುಗಳನ್ನು ಅನುಭೋಗಿಸುತ್ತಿದ್ದವರನ್ನು ಸಹ ತುಳಿದು, ಗುಲಾಮರನ್ನಾಗಿಸಿಕೊಂಡು ಅವರ ಒಡೆಯರಾದರು. ಗುಲಾಮರ ಶ್ರಮವನ್ನು ಕಬಳಿಸಿ ಅವರು ತಮಗಾಗಿ ಒಂದು ಸುಖ ಮತ್ತು ವಿಲಾಸದ ವಿಶ್ವವನ್ನು ಕಟ್ಟಿಕೊಂಡರು. ಇದರ ಜೊತೆಗೆ ಅಂದಿನ ಈ ಆರಂಭದ ಹಂತದಲ್ಲಿ ಒಂದು ಸ್ಥಳದಿಂದ ಇನ್ನೊಂದೆಡೆಗೆ ಅಲೆಯುವ ಅಲೆಮಾರಿ ಜೀವನವನ್ನು ಮಾನವ ನಡೆಸುತ್ತಿರುವಾಗ ಇಂತಹ ಎರಡು ಗುಂಪುಗಳು ಸೇರಿದಾಗ ಜಗಳ–ಸಂಘರ್ಷಗಳು ಉಂಟಾಗುತ್ತಿದ್ದವು. ಕದನದಲ್ಲಿ ಸೋತವರು ಇತರರ ಅಧೀನಕ್ಕೆ ಒಳಗಾಗಿ ಹೆಚ್ಚು ಶ್ರಮಿಸುವ ಬಲವಂತಕ್ಕೆ ಒಳಗಾಗುತ್ತಿದ್ದರು, ದಮನಕ್ಕೆ ಒಳಗಾಗುತ್ತಿದ್ದರು ಅಥವಾ ಗುಲಾಮರಾಗುತ್ತಿದ್ದರು. ಕಾಲಕ್ರಮೇಣ ಈ ಪ್ರಕ್ರಿಯೆಯ ಫಲವಾಗಿ ಗುಲಾಮರೊಡೆಯರು ಅವರ ಖಾಸಗಿ ಆಸ್ತಿಯೊಂದಿಗೆ ಅಸ್ತಿತ್ವಕ್ಕೆ ಬಂದರು. ಅಂದರೆ ಸಮಾಜ ಎರಡು ವರ್ಗಗಳಾಗಿ ವಿಭಜನೆಯಾಯಿತು – ಹಿಡಿಯಷ್ಟು ಗುಲಾಮರೊಡೆಯರು ಹಾಗೂ ಅಸಂಖ್ಯಾತ ಗುಲಾಮರ ಎರಡು ವರ್ಗಗಳಾಗಿ ಸಮಾಜವು ವಿಭಜಿತವಾಯಿತು.

## ಖಾಸಗಿ ಆಸ್ತಿ ಹಾಗೂ ರಾಜ್ಯಗಳ ಉಗಮದ ಇತಿಹಾಸ

ಹಾಗಾದರೆ ಖಾಸಗಿ ಆಸ್ತಿಯ ಉಗಮದ ಇತಿಹಾಸವೇನು? ಖಾಸಗಿ ಆಸ್ತಿಯ ಉಗಮದ ಹಿಂದೆ ಕೇವಲ ಅನ್ಯಾಯ ಮತ್ತು ದಬ್ಬಾಳಿಕೆ ಇದೆ. ದಬ್ಬಾಳಿಕೆ ಮತ್ತು ಬರಿಯ ಅನ್ಯಾಯದ ಅಕೃತ್ಯಗಳ ಮೂಲಕ ಸಮುದಾಯದ ಆಸ್ತಿಯು ಖಾಸಗಿ ಆಸ್ತಿಯಾಗಿ ಪರಿವರ್ತಿತವಾಯಿತು. ಮಾನವನ ಅವಶ್ಯಕತೆಗಳ ತೃಪ್ತಿಗಾಗಿ ಸಾಮೂಹಿಕ ಶ್ರಮದಿಂದ ಒಗ್ಗೂಡಿಸಲಾದ ನೈಸರ್ಗಿಕ ಸಂಪತ್ತು, ಎಲ್ಲರ ಕಠಿಣ ಶ್ರಮದ ಮೂಲಕ ಕೃಷಿಯೋಗ್ಯ ಮಾಡಲ್ಪಟ್ಟ ಭೂಮಿ ಕೇವಲ ದೈಹಿಕಬಲ ಮತ್ತು ದಂಡ ಪ್ರಯೋಗದ ಮೂಲಕ ಕೆಲವೇ ಜನರ ಆಸ್ತಿಯಾಗಿ ಪರಿವರ್ತಿತವಾಯಿತು. ಅಂದಿನಿಂದ ಈ ದಮನಕಾರಿ ಶಕ್ತಿಯು ಖಾಸಗಿ ಆಸ್ತಿಯ ಹಕ್ಕನ್ನು ಕಾನೂನುಗಳನ್ನು ರಚಿಸುವ ಮೂಲಕ ಪವಿತ್ರ ಹಕ್ಕನ್ನಾಗಿಸಿದೆ.

ಆದ್ದರಿಂದ ಈ ದಮನವು ಖಾಸಗಿ ಆಸ್ತಿಯ ಬೇರುಗಳಲ್ಲಿ ಇರುವುದಷ್ಟೇ ಅಲ್ಲ, ಈ ಖಾಸಗಿ ಆಸ್ತಿಯನ್ನು ಸಂರಕ್ಷಿಸುವ ವ್ಯವಸ್ಥೆಯ ಬುನಾದಿಯೂ ಸಹ ಅದೇ ಆಗಿದೆ. ಏಕೆಂದರೆ ಬರಿಯ ಬಲಪ್ರಯೋಗ ಮತ್ತು ಒತ್ತಾಯದಿಂದ ಯಾರಾದರೂ ಗುಲಾಮರೊಡೆಯರಾಗುವುದನ್ನು ಮಾನವ ಸ್ವೀಕರಿಸುವುದು ಸುಲಭವಲ್ಲ. ಆದ್ದರಿಂದ ತಮ್ಮನ್ನು ಒಡೆಯರೆಂದು ಹಾಗೂ ಖಾಸಗಿ ಆಸ್ತಿಯ ತಮ್ಮ ಹಕ್ಕನ್ನು ಪವಿತ್ರವೆಂದು ಜನತೆ ಒಪ್ಪಿಕೊಳ್ಳುವಂತೆ ಮಾಡಲು ಅವರು ಕಾನೂನು ರಚಿಸಿದರು, ಸೇನೆಯಂತಹ ದಮನಕಾರಿ ಅಸ್ತ್ರವನ್ನು ಬೆಳೆಸಿದರು ಹಾಗೂ ಸಮಾಜದಲ್ಲಿ ತಮ್ಮ ವ್ಯವಸ್ಥೆಯನ್ನು ಜಾರಿಗೆ ತಂದರು. ನಾವಿಂದು ಕಾಣುವ ರಾಜ್ಯ, ಆಡಳಿತಾಂಗ, ಕಾನೂನು ವ್ಯವಸ್ಥೆ ಮುಂತಾದವು ಸಮಾಜದಲ್ಲಿ ಕಾಲಕ್ರಮೇಣ ಅಸ್ತಿತ್ವಕ್ಕೆ ಬಂದವು. ಒಡೆಯರ ಸ್ವಂತ ವರ್ಗ ಹಿತಾಸಕ್ತಿಗೆ ಸೇವೆ ಸಲ್ಲಿಸುವುದು,

ಅದನ್ನು ಕಾಪಾಡುವುದು ಹಾಗೂ ಜಾರಿಗೊಳಿಸುವುದು ಒಡೆಯರಿಂದ ಅಸ್ತಿತ್ವಕ್ಕೆ ಬಂದ ರಾಜ್ಯದ ಪ್ರಮುಖ ಗುರಿಯಾಗಿತ್ತು. ಹೀಗೆ ನಾವು ಕೆಲವು ಪ್ರಮುಖ ತೀರ್ಮಾನಗಳಿಗೆ ಬರಬಹುದು. ಮೊದಲಿಗೆ, ರಾಜ್ಯವೆಂದರೆ ಏನು ಎಂಬುದನ್ನು ನಾವು ತಿಳಿದೆವು. ರಾಜ್ಯವು ಒಂದು ವರ್ಗದ ವಿರುದ್ಧ ಇನ್ನೊಂದು ವರ್ಗದ ದಮನಕಾರಿ ಅಸ್ತ್ರ. ಆದ್ದರಿಂದಲೇ ರಾಜ್ಯದ ಉಗಮದ ಇತಿಹಾಸವು ವರ್ಗಗಳಾಗಿ ಸಮಾಜ ವಿಭಜಿತವಾಗಿರುವ ಇತಿಹಾಸದೊಂದಿಗೆ ಅವಿಚ್ಛಿನ್ನವಾಗಿ ಬೆಸೆದುಕೊಂಡಿದೆ. ಪುರಾತನ ಬುಡಕಟ್ಟು ಸಮಾಜದಲ್ಲಿ ರಾಜ್ಯವಿರಲಿಲ್ಲ ಎಂಬುದನ್ನು ನಾವೀಗಾಗಲೇ ಚರ್ಚಿಸಿದ್ದೇವೆ. ಸಮಾಜ ಮೊಟ್ಟಮೊದಲ ಬಾರಿಗೆ ವರ್ಗ ವಿಭಜಿತವಾಗಿ ಒಡೆಯರ ವರ್ಗಕ್ಕೆ ಜನ್ಮ ನೀಡುತ್ತಾ, ಅದರೊಂದಿಗೆ ಅವರ ಹಿತಾಸಕ್ತಿಯನ್ನು ಕಾಪಾಡುವ ಅವಶ್ಯಕತೆಯೂ ಉಂಟಾದಾಗ ಇತಿಹಾಸದ ಆ ಕಾಲಘಟ್ಟದಲ್ಲೇ ರಾಜ್ಯ ಉದಯಿಸಿದ್ದು. ಹಾಗೆಯೇ ಪೊಲೀಸು, ಮಿಲಿಟರಿ, ನ್ಯಾಯಾಂಗ ಹಾಗೂ ಆಡಳಿತಾಂಗಗಳಂತಹ ಸಂಸ್ಥೆಗಳೂ ಉದಯಿಸಿದವು. ರಾಜ್ಯದ ಉದಯದ ಹಿಂದಿನ ಇತಿಹಾಸ ಇದೇ.

ಎಂತಹ ವಿಚಿತ್ರ ಕಾಕತಾಳೀಯ! ಒಡೆಯರ ವರ್ಗದ ಉದಯದೊಂದಿಗೆ ಸಮಾಜದಲ್ಲಿ ದೇವರು, ಆಸ್ತಿಕವಾದ ಮತ್ತು ಭಾವನಾವಾದದ ವಿಚಾರಗಳು ಮೂಡಿದವು. ದೇವರಲ್ಲಿ, ಒಡೆಯರು, ತಮ್ಮ ಅವಶ್ಯಕತೆಗೆ ಸ್ಪಂದಿಸುವ ನೈಜ ಗೆಳೆಯನನ್ನು ಕಂಡರು. ಅವರು ಎಂದೂ ದೈವ ವಿರೋಧಿಗಳಲ್ಲ, ಬದಲಿಗೆ ದೇವರ ಚಿರಂತನ ಮಹಾನ್ ಆರಾಧಕರು.

## ವಿಚಾರವು ವಸ್ತುವಿನ ಒಂದು ಉತ್ಪನ್ನ

ಮಾನವನ ಮೂಲ ಚಿಂತನೆ ವಸ್ತುವಾದಿಯಾಗಿತ್ತು ಹಾಗೂ ಅದು ಹಾಗೇ ಇರಬೇಕಿತ್ತು ಸಹ ಎಂಬುದನ್ನು ನೀವು ಈಗಾಗಲೇ ಕೇಳಿದ್ದೀರಿ. ಇದನ್ನು ಸ್ವಲ್ಪ ವಿಶದವಾಗಿ ಹೇಳುತ್ತೇನೆ. ವಿಚಾರವೆಂದರೇನು? ಮಾನವ ಹೇಗೆ ಆಲೋಚಿಸುತ್ತಾನೆ? ಅವನಲ್ಲಿ ಚಿಂತನೆ ಹೇಗೆ ಮೂಡುತ್ತದೆ?

ಪಂಚೇಂದ್ರಿಯಗಳು–ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ ನಮಗೆ ನಿರಂತರವಾಗಿ ಬಾಹ್ಯ ಪ್ರಪಂಚದೊಡನೆ ಸಂಪರ್ಕ ಕಲ್ಪಿಸಿ, ಅದನ್ನು ನಮಗೆ ಪರಿಚಯಿಸುತ್ತದೆ ಎಂಬುದು ನಮಗೆ ತಿಳಿದಿದೆ. ಈ ಬಾಹ್ಯ ಪ್ರಪಂಚ ಅಥವಾ ವಿಶ್ವವು, ಮಾನವನ ಅಸ್ತಿತ್ವ ಮತ್ತು ಪ್ರಜ್ಞೆಗೆ ಸ್ವತಂತ್ರವಾಗಿ ಅಸ್ತಿತ್ವದಲ್ಲಿದೆ. ಅಂದರೆ ನಾವಿರುವುದರಿಂದಲೇ ಬಾಹ್ಯ ಪ್ರಪಂಚವಿದೆ ಎಂದಲ್ಲ. ಉದಾಹರಣೆಗೆ ನಾನು ಈ ಸ್ಥಳವನ್ನು ಬಿಟ್ಟು ಹೊರಟ ಕೂಡಲೇ ಈ ಮೈಕ್ರೋಫೋನ್ ಆಗಲಿ, ಈ ಲೋಟವಾಗಲೀ ತಮ್ಮ ಅಸ್ತಿತ್ವ ಕಳೆದುಕೊಳ್ಳುತ್ತವೆಯೇ? –ಇಲ್ಲ. ವಸ್ತು ಸ್ಥಿತಿ ಹಾಗಿಲ್ಲ. ನಾನು ಅಳಿದ ಬಳಿಕವೂ ಈ ಭಾಟ್‌ಪರಾ(ಶಾಲಾ ಸ್ಥಳ) ತನ್ನೆಲ್ಲಾ ಪರಂಪರೆಯೊಂದಿಗೆ ಅಸ್ತಿತ್ವದಲ್ಲಿರುತ್ತದೆ. ಆದ್ದರಿಂದ ಈ ವಸ್ತು ಜಗತ್ತಿನ ಅಸ್ತಿತ್ವ ನಮ್ಮ ಸ್ವಂತ ಅಸ್ತಿತ್ವ, ನಮ್ಮ

ಪ್ರಜ್ಞೆಗಳಿಂದ ಸ್ವತಂತ್ರವಾಗಿರುತ್ತದೆ. ಈ ವಸ್ತು ಜಗತ್ತು ಭ್ರಮೆಯೂ ಅಲ್ಲ. ಇದೊಂದು ವಾಸ್ತವಿಕ ಸತ್ಯವಾಗಿದ್ದು ನಮ್ಮಿಂದ ಅಥವಾ ಮಾನವ ಪ್ರಜ್ಞೆಯಿಂದ ಸ್ವತಂತ್ರವಾಗಿರುತ್ತದೆ. ಬಾಹ್ಯ ಪ್ರಪಂಚ ನಾವಂದುಕೊಂಡಂತೆ ಇರುತ್ತದೆ ಎಂಬಂತಹ ವಿಚಾರಗಳು ಸಂಪೂರ್ಣವಾಗಿ ತಪ್ಪು. ನಾವು ಏನನ್ನಾದರೂ ಯೋಚಿಸಬಹುದು, ಕಲ್ಪನೆ ಮಾಡಿಕೊಳ್ಳಬಹುದು ಆದರೆ ಪ್ರಪಂಚ ಹೇಗಿರುತ್ತದೋ ಹಾಗೇ ಇರುತ್ತದೆ.

ಉದಾಹರಣೆಗೆ, ವಿದ್ಯುತ್ ಶಕ್ತಿ–ಅದು ಅಸ್ತಿತ್ವದಲ್ಲಿರುವಾಗ ತನ್ನೆಲ್ಲಾ ಗುಣಲಕ್ಷಣಗಳೊಂದಿಗೆ ಮತ್ತು ನಿಯಮಗಳೊಂದಿಗೆ ಅಸ್ತಿತ್ವದಲ್ಲಿರುತ್ತದೆ ಅದು ನಮ್ಮ ಇಚ್ಛೆಗೆ ಅನುಗುಣವಾಗಿ ಇರುವುದಿಲ್ಲ, ಅಥವಾ ಅದರ ನಿಯಮಗಳಾಗಲೀ, ಗುಣಲಕ್ಷಣಗಳಾಗಲೀ ನಮ್ಮ ಇಚ್ಛೆಯ ಮೇಲೆ ಅವಲಂಬಿತವಾಗಿ ಇರುವುದಿಲ್ಲ. ಅಂದರೆ ಈ ಬಾಹ್ಯ ಪ್ರಪಂಚ– ಈ ವಾಸ್ತವಿಕ ಸತ್ಯ–ಮಾನವ ಪ್ರಜ್ಞೆಯಿಂದ ಸ್ವತಂತ್ರವಾಗಿ ಇರುತ್ತದೆ. ತನ್ನೆಲ್ಲಾ ಗುಣಲಕ್ಷಣಗಳೊಂದಿಗೆ ಈ ವಸ್ತು ಪ್ರಪಂಚದ ಅಸ್ತಿತ್ವ ಮಾನವ ಪ್ರಜ್ಞೆಯ ಮೇಲೆ ಅವಲಂಬಿತವಾಗಿದೆ ಎಂದು ಯಾರಾದರೂ ದೃಢವಾಗಿ ವಾದಿಸಿದರೆ ಒಂದೋ ಅವರು ಅಜ್ಞಾನಿಗಳು ಅಥವಾ ಪ್ರಜ್ಞಾಪೂರ್ವಕವಾಗಿಯೇ ಮೋಸ ಗೊಳಿಸುತ್ತಿದ್ದಾರೆ ಎಂದರ್ಥ.

ನಾವೀಗ ನಮ್ಮ ಮೂಲ ಅಂಶಕ್ಕೆ ಮರಳೋಣ. ಮಾನವ ಆಲೋಚಿಸುವುದು ಹೇಗೆ? ಮಾನವ ಈ ಚಿಂತನಾ ಶಕ್ತಿಯನ್ನು ಪಡೆದುಕೊಂಡಿರುವುದೇ ಮೆದುಳಿನ ಸಂಯೋಜನೆ (composition) ಮತ್ತು ರಚನೆಯಿಂದ. ಪ್ರಜ್ಞೆಯಿಂದ ಸ್ವತಂತ್ರವಾಗಿ ಅಸ್ತಿತ್ವದಲ್ಲಿರುವ ಬಾಹ್ಯ ಪ್ರಪಂಚವು ಇಂದ್ರಿಯಗಳ ಮೂಲಕ ನಿರಂತರವಾಗಿ ಮಾನವ ಮೆದುಳಿನೊಂದಿಗೆ ಅಂತರ್‌ಕ್ರಿಯಿಸುತ್ತದೆ. ಮೆದುಳಿನ ವಿಶಿಷ್ಟ ಗುಣವೆಂದರೆ ರೂಪಾಂತರಿಸುವ ಅದರ ಶಕ್ತಿ– ಅಂದರೆ ಆಲೋಚಿಸುವ, ವಿಶ್ಲೇಷಿಸುವ, ಗ್ರಹಿಸುವ ಹಾಗೂ ನಿರ್ಧರಿಸುವ ಸಾಮರ್ಥ್ಯ. ಹೀಗೆ ರೂಪಾಂತರದ ವಿಶಿಷ್ಟ ಶಕ್ತಿ ಹೊಂದಿರುವ ಮಾನವ ಮೆದುಳಿನೊಂದಿಗೆ ಬಾಹ್ಯ ಪ್ರಪಂಚವು ಇಂದ್ರಿಯಗಳ ಮೂಲಕ ನಿರಂತರವಾಗಿ ಅಂತರ್‌ಕ್ರಿಯಿಸುವುದರಿಂದ ಮಾನವ ಆಲೋಚಿಸಬಲ್ಲ, ಗ್ರಹಿಸಬಲ್ಲ. ಆದ್ದರಿಂದ ವಸ್ತುವೇ ಚಿಂತನೆಯ ಮೂಲ. ಅಂದರೆ ನಮ್ಮನ್ನು ಸುತ್ತುವರಿದ ಬಾಹ್ಯ ಪ್ರಪಂಚ ಹಾಗೂ ಪ್ರಘಟನೆಗಳು ನಮ್ಮ ಮೆದುಳನ್ನು ತಟ್ಟುವ ರೀತಿಯಲ್ಲೇ ನಾವು ಆಲೋಚಿಸುತ್ತೇವೆ, ನೋಡುತ್ತೇವೆ ಹಾಗೂ ವಿಶ್ಲೇಷಿಸುತ್ತೇವೆ. ನಾವು ಗ್ರಹಿಸುವುದಷ್ಟೇ ವಸ್ತುವಲ್ಲ. ನಮ್ಮ ಮೆದುಳನ್ನು ನಿರಂತರವಾಗಿ ತಟ್ಟುವ ಪರಿಸರವೂ ಸಹ ವಸ್ತುವೇ. ನಾವು ಆಲೋಚಿಸಲು ಬಳಸುವ ಮಾನವ ಮೆದುಳು ಸಹ ವಸ್ತುವಿನಿಂದ ಮಾಡಲ್ಪಟ್ಟಿದೆ–ವಿಭಿನ್ನ ಸಾವಯವ ಸಂಯುಕ್ತಗಳಿಂದ ರಚಿಸಲ್ಪಟ್ಟಿದೆ. ಹೀಗೆ ವಸ್ತುವೇ ಆಲೋಚಿಸುತ್ತಿದೆ ಹಾಗೂ ಆಲೋಚನೆಗೆ ಸಾಮಗ್ರಿಯನ್ನು ಸಹ ಒದಗಿಸುತ್ತಿದೆ. ಅಂದರೆ ವಸ್ತುವಿನ ಸಂಘರ್ಷ ಮತ್ತು ದ್ವಂದ್ವಗಳ

ಮೂಲಕವೇ ಪ್ರಜ್ಞೆ ಮತ್ತು ವಿಚಾರ ಬೆಳೆದಿರುವುದು. ಹೀಗಾಗಿ ಆದಿಮಾನವನು ವಸ್ತುವಾದಿಯೇ ಆಗಿರಲು ಸಾಧ್ಯವಾಗಿತ್ತು.

## ಸಮಾಜದಲ್ಲಿ ದೇವರ ಕಲ್ಪನೆಯ ಉದಯ

ಸಮಾಜ ಮೊಟ್ಟಮೊದಲ ಬಾರಿಗೆ ವರ್ಗ ವಿಭಜಿತವಾದಾಗ ಮಾಲೀಕ ವರ್ಗ, ಸ್ಥಿರ ಮಾಲೀಕತ್ವ ಸೃಷ್ಟಿಸುತ್ತಾ ಒಂದು ಗುಂಪಿನ ಜನರನ್ನು ಮೇಲಿರಿಸಿ ಕಾನೂನು ಮತ್ತು ವ್ಯವಸ್ಥೆಯನ್ನು ರಚಿಸಿದಾಗ ವಿಜ್ಞಾನವಿನ್ನೂ ಬೆಳೆದಿರಲಿಲ್ಲ. ವಿಜ್ಞಾನ ಆಗಿನ್ನೂ ಕೆಳಮಟ್ಟದಲ್ಲಿದ್ದು, ಜಾದೂವಿದ್ಯೆಯ ಹಂತದಲ್ಲಿ 'ಮಿಥ್ಯಾ ವಿಜ್ಞಾನ'ವಾಗಿತ್ತು. ಮಾನವ ಎಲ್ಲವನ್ನೂ ಆಶ್ಚರ್ಯದಿಂದ ಗಮನಿಸುತ್ತಿದ್ದ. ಬೆಂಕಿ ಹೇಗೆ ಉರಿಯುತ್ತದೆ, ಮಳೆ ಹೇಗೆ ಬರುತ್ತದೆ, ಭೂಕಂಪನ ಹೇಗೆ ಆಗುತ್ತದೆ, ಬಿರುಗಾಳಿ ಬರುವುದು ಹೇಗೆ ಹಾಗೂ ಮಾನವನ ಉಗಮದ ಬಗ್ಗೆ, ಅವನು ಹೇಗೆ ಹುಟ್ಟಿದ, ಏಕೆ ಸಾಯುತ್ತಾನೆ ಎಂಬ ಪ್ರಶ್ನೆಗಳನ್ನು ಕೇಳಲಾರಂಭಿಸಿದ. ಇವೆಲ್ಲಾ ಪ್ರಶ್ನೆಗಳಿಗೆ ಅವನು ಉತ್ತರವನ್ನು ಕಂಡುಕೊಳ್ಳಲು ವ್ಯರ್ಥ ಪ್ರಯತ್ನಪಟ್ಟ. ಅವನಿಗೆ ಉತ್ತರ ಸಿಗಲಿಲ್ಲ. ದಿನನಿತ್ಯ ಸೂರ್ಯ ಉದಯಿಸಿ ಮುಳುಗುವುದು ಏಕೆ, ಏಕೆ ಕಾಲಕಾಲಕ್ಕೆ ಋತುಗಳು ಬದಲಾಗುತ್ತವೆ, ಅಲೆಗಳ ಉಬ್ಬರವಿಳಿತವೇಕೆ ಇಂತಹ ಪ್ರಶ್ನೆಗಳು ಒಂದಾದ ಮೇಲೊಂದರಂತೆ ಬಂದು ಮತ್ತೆ ಮತ್ತೆ ಮಾನವನ ಮನಸ್ಸನ್ನು ತಟ್ಟಿದವು. ಆದರೆ ಉತ್ತರಗಳನ್ನು ನೀಡಬಲ್ಲ ಆ ಅಸ್ತ್ರ, ವಿಜ್ಞಾನ ಮಾನವನಿಗಿನ್ನೂ ಕರಗತವಾಗಿರಲಿಲ್ಲ.

ಒಂದು ಅಂಶ ಮಾನವ ಮೆದುಳಿಗೆ ಹೊಳೆಯಿತು. ಇವೆಲ್ಲಾ ಏಕೆಗಳಿಗೆ ಉತ್ತರ ಹುಡುಕುವಲ್ಲಿ ನಿರತವಾಗಿರುವ ಮಾನವ ಮಿದುಳಿಗೆ ಆ ವಿಚಾರ ಹೊಳೆಯಿತು. ಅದೂ ಸಕಾಲದಲ್ಲೇ, ವಾಸ್ತವಿಕ ಪರಿಸ್ಥಿತಿ ಪಕ್ವವಾದಾಗಲೇ ಹೊರತು ಖಂಡಿತಾ ಅದಕ್ಕಿಂತ ಮೊದಲಲ್ಲ.

ಈ ವಿಚಾರವಾದರೂ ಯಾವುದು? ಸಮಾಜದ ಬೆಳವಣಿಗೆಯ ಒಂದು ನಿರ್ದಿಷ್ಟ ಹಂತದಲ್ಲಿ ಮಾನವ ಯೋಚಿಸಲಾರಂಭಿಸಿದ: ಈ ಸಮಾಜದಲ್ಲಿ ಈ ವ್ಯವಸ್ಥೆ ಹೇಗೆ ಬಂದಿತು? ಸಮಾಜ ಇಷ್ಟೊಂದು ಶಿಸ್ತಿನಿಂದ ಇರುವುದಾದರೂ ಹೇಗೆ? ಏಕೆಂದರೆ ಕಾನೂನು ಮತ್ತು ವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿ ವಹಿಸಿಕೊಂಡ ವ್ಯಕ್ತಿಯೊಬ್ಬ ಮೇಲಿದ್ದು ಸಮಾಜವನ್ನು ನಿಯಂತ್ರಿಸುತ್ತಿದ್ದಾನೆ.–ಸಮಾಜದಲ್ಲಿ ಪ್ರತಿಯೊಂದನ್ನೂ ನಡೆಸಿಕೊಂಡು ಹೋಗುವ ವ್ಯಕ್ತಿಯೊಬ್ಬ ಇದ್ದು ಸಮಾಜ ಅದರಿಂದ ವ್ಯವಸ್ಥಿತವಾಗಿ ನಡೆಯುವುದರ ಹಾಗೆಯೇ, ಮಾಲೀಕರಾಗಿ, ಒಡೆಯರಾಗಿ ಒಂದು ಗುಂಪಿನ ಜನ ಇದ್ದು, ಇತರರು ಅವರನ್ನು ಒಡೆಯರಾಗಿ ಸ್ವೀಕರಿಸಿ ಅವರೇ ರಚಿಸಿದ ಕಾನೂನುಗಳನ್ನು ಅನುಸರಿಸುವಂತೆಯೇ ವಿಶ್ವವನ್ನು ನಡೆಸುವ, ಅದಕ್ಕೆ ಮಾರ್ಗದರ್ಶನ ನೀಡುವ ಒಂದು ದೈವ, ಒಬ್ಬ ವಿಶ್ವದೊಡೆಯ ಇರಲೇಬೇಕು. ಹೀಗೆ ಎರಡು ವಿಭಿನ್ನ ಪ್ರಘಟನೆಗಳ ನಡುವೆ ಹೋಲಿಕೆ ಅಥವಾ ಸಾಮ್ಯ ತರುವ ಪ್ರಕ್ರಿಯೆಯ ಮೂಲಕ

ಅಂದರೆ ತರ್ಕವನ್ನು ಹೋಲುವ ಪ್ರಕ್ರಿಯೆಯ ಮೂಲಕ, ಸಾಮಾನ್ಯ ಜ್ಞಾನವನ್ನು ಉಪಯೋಗಿಸಿ ಮಾನವ ಸರ್ವೇಸಾಮಾನ್ಯವಾಗಿ ನಡೆದುಕೊಳ್ಳುವ ಹಾಗೆ, ಅವನಲ್ಲಿ ದೇವರ ಕಲ್ಪನೆ ಉದಯಿಸಿತು. ದೇವರ ಕಲ್ಪನೆ ಉದಯಿಸುವ ಹಿಂದಿನ ವಾಸ್ತವಿಕ ಪರಿಸ್ಥಿತಿಯನ್ನು ನಿರ್ಮಿಸಿದ್ದೇ ಇದು. ಗುಲಾಮರು, ಗುಲಾಮರೊಡೆಯರಿಂದ, ಮಾಲೀಕರಿಂದ, ರಾಜರಿಂದ ಆಳಲ್ಪಟ್ಟು ಅವರಿಂದ ಶಿಸ್ತಿಗೆ ಒಳಪಟ್ಟಿದ್ದಾರೆ, ಅಂತೆಯೇ ಸಮಾಜದಲ್ಲಿ ವ್ಯವಸ್ಥೆಯಿದೆ ಎಂದು ಮಾನವ ಗಮನಿಸುವಂತಹ ವಾಸ್ತವಿಕ ಪರಿಸ್ಥಿತಿ ಏರ್ಪಟ್ಟಂತಹ ಕಾಲವದು. ಸಹಜವಾಗಿ ಈ ವಿಶ್ವ ವ್ಯವಸ್ಥಿತವಾಗಿ ನಡೆಯಬೇಕಾದರೆ ಅದನ್ನು ಮುನ್ನಡೆಸುವಂತಹವರು ಯಾರಾದರೂ ಇರಲೇಬೇಕು.

ವಿಜ್ಞಾನದ ಶೈಶವಾವಸ್ಥೆಯ ಈ ಕಾಲದಲ್ಲಿ ಸರಿಯಾದ ವೈಜ್ಞಾನಿಕ ಜ್ಞಾನದ ಕೊರತೆಯ ಕಾರಣದಿಂದ, ವರ್ಗ ವಿಭಜನೆ, ಮಾಲೀಕ ವರ್ಗದ ಉದಯ ಹಾಗೂ ಸಮಾಜದ ಮೇಲೆ ಅವರ ಆಳ್ವಿಕೆಯ ಹೇರುವಿಕೆಯ ಪರಿಣಾಮವಾಗಿ ಸಮಾಜದಲ್ಲಿ ದೇವರ ಕಲ್ಪನೆ ಉದಯವಾಯಿತು ಎಂಬುದನ್ನು ಇದರಿಂದ ನಾವು ತಿಳಿಯಬಹುದು. ಈ ವಿಶ್ವಕ್ಕೆ ಒಡೆಯ ಅಥವಾ ಭಗವಂತನಿದ್ದಾನೆ ಎಂಬ ವಿಚಾರ ಸಮಾಜದಲ್ಲಿ ಉದಯಿಸಿದ ಬಳಿಕ ಸಮಾಜದ ಆಳ್ವಿಕರು, ಮಾಲೀಕ ವರ್ಗವು ಅದನ್ನು ತಮ್ಮ ಸ್ವಂತ ವರ್ಗ ಹಿತಾಸಕ್ತಿಗಾಗಿ ಬಳಸಲು ಪ್ರಾರಂಭಿಸಿದರು. ಆ ಕಾಲದಿಂದೀಚೆಗೆ ಸಮಾಜದಲ್ಲಿ ವಸ್ತುವಾದ ಮತ್ತು ಭಾವನಾವಾದ ಅಥವಾ ಆಸ್ತಿಕವಾದ ಜೊತೆ ಜೊತೆಗೆ ಸಾಗುತ್ತಿವೆ.

## ಆದಿ ಮಾನವನ ಕಾಳಜಿ ವಸ್ತುವಿನ ಕುರಿತಾಗಿತ್ತು

ಮಾನವ ದೇವರ ಪ್ರತಿರೂಪ, ಅವನ ಆತ್ಮ ಪರಮಾತ್ಮನ ಪ್ರತಿಬಿಂಬ, ಆದ್ದರಿಂದಲೇ ಮಾನವ ಹುಟ್ಟಿನಿಂದಲೇ ಪರಮಾತ್ಮನ ಶೋಧದಲ್ಲಿ ಹಾಗೂ ಸರ್ವೇಶ್ವರನ ಧ್ಯಾನದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾನೆ ಎಂದು ನಂಬುವವರು ಇತಿಹಾಸದ ಜ್ಞಾನವಿಲ್ಲದವರು ಅಥವಾ ಭ್ರಮೆಗೆ ಶರಣು ಹೋದವರು. ಆದಿಕಾಲದಿಂದ ಮಾನವನ ಮನಸ್ಸಿನ ಬೆಳವಣಿಗೆಯ ಒಂದು ನಿರ್ದಿಷ್ಟ ಹಂತದವರೆಗೆ, ಇತಿಹಾಸದ ಒಂದು ಸುದೀರ್ಘ ಕಾಲದವರೆಗೆ ಮಾನವನು ದೇವರ ಬಗ್ಗೆ ಕಲ್ಪಿಸಿಕೊಂಡಿರಲಿಲ್ಲ, ಬದಲಿಗೆ ಅವನ ಎಲ್ಲಾ ಚಿಂತನೆ ಕೇವಲ ವಸ್ತುವಿಗೆ ಸಂಬಂಧಿಸಿದುದಾಗಿತ್ತು ಎಂದವರು ಅರಿತಿರುವರೆ? ಅವನು ಅರಿಯ ಬಯಸಿದ್ದು ವಸ್ತುವಿನ ಕುರಿತು. ತನ್ನ ಅಣತಿಗೆ ಒಳಪಡಿಸಲು ಹಾಗೂ ಹತೋಟಿಗೆ ತರಲು ಶ್ರಮಿಸಿದ್ದು ವಸ್ತುವನ್ನೇ. ಮತ್ತು ದೇವರ ಕಲ್ಪನೆ ಬಂದದ್ದು ಖಾಸಗಿ ಆಸ್ತಿಯ ಉಗಮದೊಂದಿಗೆ.

ವರ್ಗಗಳಾಗಿ ಸಮಾಜ ವಿಭಜಿತವಾಗಿ, ಮಾಲೀಕರು ಸೃಷ್ಟಿಯಾದ ಬಳಿಕ ಹಾಗೂ ಸಮಾಜದಲ್ಲಿ ಮಾಲೀಕರು ಶಿಸ್ತನ್ನು ತರುವ ಹೋಲಿಕೆಯೊಂದಿಗೆ ಈ ವಸ್ತು ಜಗತ್ತಿನ ವ್ಯವಸ್ಥಿತ ನಡವಳಿಕೆಗೆ ಜವಾಬ್ದಾರನಾಗಿರಬಹುದಾದ ದೇವರ ಕಲ್ಪನೆ ಹೇಗೆ ಬಂತು ಎಂಬುದನ್ನು ನಾನೀಗಾಗಲೇ ಚರ್ಚಿಸಿದ್ದೇನೆ. ಆದ್ದರಿಂದ ಭಾವನಾವಾದ ಮತ್ತು ಆಸ್ತಿಕವಾದದ ಉಗಮದ

ಹಿಂದೆ ಇದ್ದುದು ಅಂದಿನ ಸಾಮಾಜಿಕ ಪರಿಸ್ಥಿತಿ, ಮಾನವ ಚಿಂತನೆ ಮತ್ತು ವಿಜ್ಞಾನಗಳ ಶೈಶವಾವಸ್ಥೆ, ಉತ್ಪಾದನೆಯ ಪ್ರಾಥಮಿಕ ಹಂತ ಮತ್ತು ಉತ್ಪಾದನೆಯ ಕೊರತೆ. ದೇವರ ಬಗ್ಗೆ ಕಲ್ಪನೆ ಮಾಡಿಕೊಂಡವರು ಯಾರು ಅಥವಾ ಏನು? ಅದು ಮಾನವ ಮೆದುಳಲ್ಲದೆ ಇನ್ನೇನೂ ಅಲ್ಲ. ದೇವರ ಕಲ್ಪನೆ ಮಾನವ ಮೆದುಳಿನ ಉತ್ಪನ್ನ. ಆದ್ದರಿಂದ ವಸ್ತು ಅಥವಾ ವಸ್ತು ಪ್ರಪಂಚವನ್ನು ಸೃಷ್ಟಿಸಿದವ ದೇವನಲ್ಲ, ಅಥವಾ ನೈಜ ಜ್ಞಾನ, ಸರಿಯಾದ ದೃಷ್ಟಿ ಹಾಗೂ ಉನ್ನತ ಮಾನವ ಚಿಂತನೆಯ ಪರಿಣಾಮವಾಗಿ ದೈವದ ಚಿಂತನೆ ಅಥವಾ ಭಾವನಾವಾದ ಉದಯಿಸಲಿಲ್ಲ.

ವಸ್ತುವಿನಿಂದಲೇ ರಚಿಸಲ್ಪಟ್ಟ ಮಾನವ ಮೆದುಳು, ವಸ್ತುವಿನ ನಿಗೂಢತೆಯ ಶೋಧದಲ್ಲಿ ತೊಡಗಿದ್ದು, ವಿಜ್ಞಾನದ ಬೆಳವಣಿಗೆಯ ಪ್ರಾರಂಭಿಕ ಹಂತದಲ್ಲಿ ಇಂತಹ ಎಲ್ಲಾ ಪ್ರಶ್ನೆಗಳಿಗೆ ಉತ್ತರ ನೀಡುವಲ್ಲಿ ವಿಫಲವಾಗಿ ಮತ್ತು ಸಮಾಜದ ಇಂತಹ ಕೆಲವು ಪ್ರಘಟನೆಗಳಿಂದ ಸಾಮಾನ್ಯ ತಿಳುವಳಿಕೆಯ ಆಧಾರದ ಮೇಲೆ ಹೋಲಿಕೆಯನ್ನು ತಂದುಕೊಂಡು ಸಮಾಜದಲ್ಲಿ ಒಬ್ಬ ಒಡೆಯನಿರುವಂತೆ ದೇವರನ್ನು ವಿಶ್ವದ ಒಡೆಯ ಎಂದು ಮಾನವ ತಿಳಿದುಕೊಳ್ಳುವಂತೆ ಮಾಡಿತು. ಆದ್ದರಿಂದಲೇ ತದನಂತರ ರಾಜರುಗಳನ್ನು ದೇವರ ಪ್ರತಿನಿಧಿಗಳೆಂದು ಪರಿಗಣಿಸಲಾಗುತ್ತಿದ್ದುದನ್ನು ನಾವು ಕಾಣುತ್ತೇವೆ. ಆದ್ದರಿಂದ ಇತಿಹಾಸದ ಕೆಲವು ಅಪವಾದಗಳನ್ನು ಬಿಟ್ಟರೆ ಎಲ್ಲಾ ಧರ್ಮಗಳ ಶಾಸ್ತ್ರಗಳಲ್ಲಿ ರಾಜನ ವಿರುದ್ಧ ಹೋರಾಡುವುದೆಂದರೆ ದೇವರ ವಿರುದ್ಧ ದಂಗೆಯೇಳುವುದೆಂದು ಭಾವಿಸಲಾಗುತ್ತಿತ್ತು. ಕೆಲವೊಮ್ಮೆ ಇತಿಹಾಸದಲ್ಲಿ, ದೇವರ ರಾಜ್ಯದಲ್ಲಿ ಎಲ್ಲ ಮಾನವರೂ ಸಮಾನರಾದ್ದರಿಂದ ಗುಲಾಮರೊಡೆಯರು ದಬ್ಬಾಳಿಕೆ ಮತ್ತು ಅನ್ಯಾಯ ನಡೆಸಿ 'ಸಮಾನತೆ'ಯ ದೈವಿಕ ಪರಿಕಲ್ಪನೆಯನ್ನು ಭಂಗ ಮಾಡಿದ್ದಾರೆ ಹಾಗೂ ಧರ್ಮದ ವಿರುದ್ಧ ಹೋಗಿದ್ದಾರೆ ಎಂದು ಘೋಷಿಸುತ್ತಾ ಗುಲಾಮರೊಡೆಯರು ನಡೆಸುತ್ತಿದ್ದ ದಬ್ಬಾಳಿಕೆ ಮತ್ತು ಅನ್ಯಾಯದ ವಿರುದ್ಧದ ಹೋರಾಟದ ಅಸ್ತ್ರವಾಗಿ ಧರ್ಮವನ್ನು ಬಳಸಿಕೊಳ್ಳಲಾಯಿತು. ಗುಲಾಮರೊಡೆಯರ ವಿರುದ್ಧದ ಗುಲಾಮರ ಹೋರಾಟದಲ್ಲಿ ಕ್ರೈಸ್ತ ಹಾಗೂ ಇಸ್ಲಾಂ ಧರ್ಮವನ್ನು ಬಳಸಿದ ನಿದರ್ಶನಗಳೂ ಇವೆ. ಈ ಕೆಲವು ಅಪವಾದಗಳನ್ನು ಬಿಟ್ಟು ಬಹುತೇಕ ಎಲ್ಲಾ ಪ್ರಕರಣಗಳಲ್ಲಿ ಮಾಲೀಕ ವರ್ಗ ಧರ್ಮವನ್ನು ತನ್ನ ವರ್ಗ ಆಳ್ವಿಕೆ ಮತ್ತು ವರ್ಗ ಶೋಷಣೆಗೆ ಅನುಕೂಲಕರವಾಗಿ ಬಳಸಿಕೊಂಡಿತು. ತತ್ಪರಿಣಾಮವಾಗಿ ದೇವರ ಪ್ರತಿನಿಧಿಯಾದ ರಾಜನ ವಿರುದ್ಧ ಹೋರಾಡುವುದು ಅನಪೇಕ್ಷಣೀಯ ಎಂಬ ವಿಚಾರ ಸಮಾಜದಲ್ಲಿ ಪ್ರಚಲಿತವಿತ್ತು. ಆನಂತರದ ಕಾಲದಲ್ಲಿ ವಿಜ್ಞಾನದ ಪ್ರಗತಿ ಮತ್ತು ಪ್ರಜಾತಂತ್ರ ಮತ್ತು ಪ್ರಜಾತಾಂತ್ರಿಕ ಹಕ್ಕುಗಳ ವಿಚಾರಗಳು ಈ ಪರಿಕಲ್ಪನೆಗಳನ್ನು ಸಮಾಜದಿಂದ ಕಿತ್ತೊಗೆದವು. ಆದರೆ ಇದು ನಡೆದದ್ದು ಬಹಳ ಕಾಲದ ಬಳಿಕ, ಫ್ರೆಂಚ್ ಕ್ರಾಂತಿಯ ಸಂದರ್ಭದಲ್ಲಿ.

ಜಗತ್ತಿನಾದ್ಯಂತ ಸಾಮಂತಶಾಹಿಯು ವ್ಯಾಪಿಸಿದ್ದ ಕಾಲದಲ್ಲಿ ಅದರ ಗರ್ಭದಿಂದಲೇ ಬಂಡವಾಳವಾದವು ಜನ್ಮ ತಳೆಯಿತು. ಬಂಡವಾಳವಾದದ ಬೆಳವಣಿಗೆಗೆ ಉತ್ಪಾದನೆಯ ಬೆಳವಣಿಗೆಯನ್ನು ಖಾತ್ರಿಪಡಿಸಲು ಸ್ವಾತಂತ್ರ್ಯ, ಭ್ರಾತೃತ್ವ ಮತ್ತು ಸಮಾನತೆಗಳನ್ನು–ಸಮಾಜದಲ್ಲಿ ಸ್ಥಾಪಿಸಲು, ಜೀತ ಪದ್ಧತಿಯ ನಿರ್ನಾಮ ಹಾಗೂ ಸಾಮಂತಶಾಹಿ–ನಿರಂಕುಶಾಧಿಕಾರದ ನಿರ್ಮೂಲನೆಯು ಅಗತ್ಯವಾಯಿತು. ಆಗ ಸಮಾಜದಲ್ಲಿ ವಿಜ್ಞಾನದ ಪೋಷಣೆ ಮತ್ತು ಜ್ಞಾನದ ಅನಿರ್ಬಂಧಿತ ಶೋಧನೆ ಶುರುವಾದವು. ಇದು ಶುದ್ಧ ವಿಜ್ಞಾನ (exact science) ಮತ್ತು ತಂತ್ರಜ್ಞಾನದ ಆರಂಭಿಕ ಶಕವನ್ನು ಗುರುತಿಸಿತು. ಬಂಡವಾಳಶಾಹಿಯ ಉಗಮದೊಂದಿಗೆ ವಿಜ್ಞಾನ ನಾಗಾಲೋಟದಲ್ಲಿ ಪ್ರಗತಿಯನ್ನು ಸಾಧಿಸಿತು. ಅಲ್ಲಿಯವರೆಗೂ ಮೇಲೆ ಆಧರಿಸಲ್ಪಟ್ಟಿದ್ದ ಸಮಾಜವಾಗಿದ್ದ ಸಾಮಂತಶಾಹಿ ವ್ಯವಸ್ಥೆಯು, ವಿಜ್ಞಾನದ ಬೆಳವಣಿಗೆಗೆ ಒಂದು ಗಂಭೀರ ತಡೆಯಾಗಿತ್ತು, ಸತ್ಯದ ಶೋಧನೆಗೆ ತಡೆಯೊಡ್ಡಿತ್ತು, ಹಾಗೂ ಸತ್ಯದ ಬಾಯಿ ಮುಚ್ಚುವ ಮಟ್ಟಕ್ಕೂ ಹೋಗಿತ್ತು. ಭ್ರಮೆ ಮತ್ತು ಊಹೆಗಳ ಮೇಲೆ ರಚಿತವಾದ ಒಂದು ತತ್ವಜ್ಞಾನದ ಪರವಾಗಿ ವಾದಿಸುವ ಪ್ರಯತ್ನಗಳು ನಡೆದವು. ಇಂತಹ ಪರಿಕಲ್ಪನೆಗಳು ರಾಜ ಪ್ರಭುತ್ವದ ಮುಂದುವರಿಕೆಗೆ ಭೂಮಿಯನ್ನು ಹದ ಮಾಡಿದ್ದರಿಂದ ರಾಜರು ಮತ್ತು ಸಾಮಂತಶಾಹಿ ದೊರೆಗಳು ಅವುಗಳ ಶ್ರೀರಕ್ಷೆಗೆ ಕಟಿಬದ್ಧರಾಗಿ ನಿಂತರು. "ರಾಜ ದೇಶವನ್ನು ಆಳುತ್ತಾನೆ, ದೇವರು ವಿಶ್ವವನ್ನು. ರಾಜ ದೇವರ ಪ್ರತಿನಿಧಿಯಾಗಿದ್ದು ದೇವರ ಪುಟ್ಟ ಪ್ರತಿರೂಪನಾಗಿರುತ್ತಾನೆ. ರಾಜನಿಗೆ ಆಳುವ ಹಕ್ಕನ್ನು ನೀಡಿದ್ದು ಸ್ವತಃ ದೇವರೇ"–ಬಹುತೇಕ ಇಂತಹ ನಂಬಿಕೆಗಳೇ ಸಮಾಜವನ್ನು ಆಳಿದವು. ರಾಜ ಅಥವಾ ಒಡೆಯ ಬಂದದ್ದು ಯಾವಾಗ ಎಂದು ಯಾರೂ ಹಿಂದಿನ ಮಾನವ ಅಥವಾ ಸಮಾಜದ ಇತಿಹಾಸದಲ್ಲಿ ಹುಡುಕಲು ಹೋಗಲಿಲ್ಲ.

ಜನ್ಮದಿಂದಲೇ ರಾಜನ ತಂದೆ ರಾಜ, ಹಾಗೆಯೇ ಅವನ ತಾತ ಸಹ ಎಂಬುದನ್ನು ಜನರು ಕಂಡುಕೊಂಡರು. ಬಹುಶಃ ರಾಜನಿಗೆ ಅರಸೊತ್ತಿಗೆ ನೀಡಲು ಸರ್ವಶಕ್ತ ದೇವನೇ ಭೂಮಿಗೆ ಬಂದುದಾಗಿ ಮಾನವರು ತಿಳಿದುಕೊಂಡರು. ಇದೇ ಅವರ ನಂಬಿಕೆಯಾಗಿತ್ತು. ಬಹಳ ಕಾಲದ ಬಳಿಕ ಅವರು ಖಾಸಗಿ ಆಸ್ತಿ, ರಾಜ ಮತ್ತು ಅರಸೊತ್ತಿಗೆಯ ಉಗಮದ ಹಿಂದಿನ ಬಲಾತ್ಕಾರ ಮತ್ತು ಹಿಂಸೆಯ ಪಂಥವನ್ನು, ಅನ್ಯಾಯದ ಭಯಂಕರ ಇತಿಹಾಸವನ್ನು ಮರೆತುಬಿಟ್ಟರು. ಏಕೆಂದರೆ ಮಾನವ ಇತಿಹಾಸದ ಬೆಳವಣಿಗೆಯ ಈ ಕಾಲಘಟ್ಟವು ಕತ್ತಲಲ್ಲಿ ಮುಚ್ಚಿಹೋಗಿದ್ದು ಯಾವುದೇ ದಾಖಲೆಯನ್ನೂ ಸಹ ಉಳಿಸಿಲ್ಲ. ಅಂದು ಪ್ರಾಚೀನ ಹಸ್ತಪ್ರತಿಗಳು ಸಹ ಇದ್ದುವೇ ಎಂಬುದೇ ಇಂದಿಗೂ ಸಂಶೋಧನೆಯ ವಿಷಯವಾಗಿ ಉಳಿದಿದೆ. ಸಹಜವಾಗಿ ಸಮಾಜದಲ್ಲಿ ದೇವರ ಕಲ್ಪನೆ ಉದಯಿಸಿದಾಗ, ರಾಜರು ದೇವರ ಪ್ರತಿನಿಧಿಗಳಾಗಿ ಪರಿಗಣಿಸಲ್ಪಟ್ಟರು. ಆದ್ದರಿಂದಲೇ ಭಾವನಾವಾದಿ ತತ್ವಜ್ಞಾನ ಬೆಳೆದಿದ್ದೇ ಸಾಮಂತಶಾಹಿಯ ಕಾಲದಲ್ಲಿ ಎಂದು

ನಾನು ಹೇಳಿದ್ದು. ಗುಲಾಮಗಿರಿ ಮತ್ತು ಸಾಮಂತಶಾಹಿಯ ಕಾಲದಲ್ಲಿ ಭಾವನಾವಾದಿ ತತ್ವಜ್ಞಾನ ಬಹಳ ಮಟ್ಟಿಗೆ ಪ್ರಾಬಲ್ಯವನ್ನು ಪಡೆದಿತ್ತು. ವಸ್ತುವಾದಿ ತತ್ವಜ್ಞಾನ ಅದರ ಜೊತೆ ಜೊತೆಗೆ ಸಾಗುತ್ತಿದ್ದರೂ, ಅದು ಕುಂಟುತ್ತಿತ್ತು; ತಾನೆ ಸರ್ವಹರಾದಂತಿತ್ತು, ಎಲ್ಲವನ್ನೂ ಕಳಕೊಂಡಂತಿತ್ತು. ಸಮಾಜದ ಹಳೆಯ ಹದ್ದುಗಳು ವಸ್ತುವಾದಿಗಳನ್ನು ಹಿಂಸಿಸಿದರು ಹಾಗೂ ಅವರನ್ನು ಸಮಾಜಭ್ರಷ್ಟರನ್ನಾಗಿಸಿದರು. ಆದರೂ ವಸ್ತುವಾದಿಗಳಲ್ಲಿ ಅನೇಕ ಮೇಧಾವಿಗಳಿದ್ದು ಅವರು ಭಾವನಾವಾದದ ವಿರುದ್ಧ ಸೆಟೆದುನಿಂತರು ಮತ್ತು ಅದಕ್ಕಾಗಿ ಬಹಳ ಬೆಲೆತೆತ್ತರು. ಅರಸೊತ್ತಿಗೆ ಅವರಿಗೆ ಬೆಂಬಲ ನೀಡದೆ ಇದ್ದುದರಿಂದ ಅವರು ಉಪವಾಸವಿರಬೇಕಾಯಿತು, ಸಮಾಜ ಭ್ರಷ್ಟರಾಗಬೇಕಾಯಿತು. ಆದರೂ ಅವರು ಒಂದಿಂಚೂ ಅಲುಗಾಡಲಿಲ್ಲ.

## ಬಂಡವಾಳ ಹೊಸ ಸಾಧ್ಯತೆಗಳನ್ನು ತೆರೆದಿಟ್ಟಿತು

ಸಾಮಂತಶಾಹಿಯ ಗರ್ಭದಿಂದ ಜನಿಸಿದ ಬಂಡವಾಳ ತನ್ನೊಂದಿಗೆ ಅನೇಕ ಸಾಧ್ಯತೆಗಳನ್ನು ತಂದಿತು. ಅವು ಯಾವುವು? ಮೊದಲಿಗೆ ಕೈಗಾರಿಕಾ ಬೆಳವಣಿಗೆಗೆ ಸ್ವತಂತ್ರ ಕಾರ್ಮಿಕರು ಬೇಕಿತ್ತು. ಆದರೆ ಸಾಮಂತಶಾಹಿಯಲ್ಲಿ ಹೆಚ್ಚಿನ ಜನ ಜೀತದಾಳಾಗಿದ್ದರು; ಅವರು ಭೂಮಿಗೆ ಬಂಧಿಸಲ್ಪಟ್ಟಿದ್ದರು. ಭೂಒಡೆಯರು ಅವರನ್ನು ಜೀತದಾಳಾಗಿಸಿದ್ದರು. ಆದ್ದರಿಂದ ಜೀತದಾಳುಗಳು ಊಳಿಗಮಾನ್ಯ ದೊರೆಗಳ ಕೈಗಳಿಂದ, ಅವರ ಶೋಷಕ ಶೃಂಖಲೆಗಳಿಂದ ಬಿಡುಗಡೆ ಹೊಂದದ ವಿನಃ, ಭೂಮಿಯ ಬಂಧನದಿಂದ ಅವರು ಮುಕ್ತರಾಗಿ ಪ್ರತಿಯೊಬ್ಬರೂ ಸ್ವತಂತ್ರರಾಗದ ಹೊರತು ಅಂದಿನ ಬೃಹತ್ ಕೈಗಾರಿಕೆಗಳನ್ನು ಕಟ್ಟುವುದಾದರೂ ಹೇಗೆ ಸಾಧ್ಯವಿತ್ತು? ಎಲ್ಲಿಂದ ತಾನೇ ಶ್ರಮಿಕರ ನಿರಂತರ ಸರಬರಾಜು ಸಾಧ್ಯವಿತ್ತು? ಎರಡನೆಯದಾಗಿ ಬೃಹತ್ ಕೈಗಾರಿಕೆಗಳ ಬೆಳವಣಿಗೆಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ ಅತ್ಯವಶ್ಯಕವಾಗಿತ್ತು. ಇದಿಲ್ಲದೆ ಗಣಿಗಾರಿಕೆ, ನೌಕಾಯಾನ, ಸಾರಿಗೆ ವ್ಯವಸ್ಥೆ, ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಬೃಹತ್ ಕೈಗಾರಿಕೆಗಳನ್ನು ಕಟ್ಟಲಾಗದು. ಆಗ ಸಮಾಜದಲ್ಲಿ ಹೊರಹೊಮ್ಮಿದ ಕೈಗಾರಿಕಾ ಬೆಳವಣಿಗೆಗಾಗಿ ಬಂಡವಾಳಶಾಹಿ ವರ್ಗದಲ್ಲಿ ಒಂದು ನೈಜ ತಹತಹಿಕೆ ಹಾಗೂ ಅವಶ್ಯಕತೆ ಕಂಡು ಬಂದಿತು. ಬಂಡವಾಳವಾದವು ಆಗಿನ್ನೂ ವ್ಯಾಪಾರೀ ಬಂಡವಾಳವಾದದ ಹಂತದಲ್ಲಿತ್ತು. ವ್ಯಾಪಾರಿ ಬಂಡವಾಳವಾದದ ಬೆಳವಣಿಗೆಯ ಕಾಲಕ್ರಮದಲ್ಲಿ ಸಮಾಜದಲ್ಲಿ ಕೈಗಾರಿಕಾ ಬಂಡವಾಳ ಮತ್ತು ಬೃಹತ್ ಕೈಗಾರಿಕೆಗಳ ಹಂಬಲ ಬೆಳೆಯಿತು. ಇದನ್ನು ತಮ್ಮ ಅನುಕೂಲಕ್ಕಾಗಿ ಬಳಸಿಕೊಳ್ಳಲು ಬಂಡವಾಳಶಾಹಿಗಳು ಈ ಹಂಬಲಕ್ಕೆ ಬೆಂಬಲ ನೀಡಿದರು. ಎಲ್ಲಾ ಹಳೆಯ ಊಳಿಗಮಾನ್ಯ ವಿಚಾರಗಳು, ಮೌಲ್ಯ ಪರಿಪ್ರಜ್ಞೆ, ನೈತಿಕತೆ, ತತ್ವಜ್ಞಾನ ಮುಂತಾದವುಗಳ ವಿರುದ್ಧ ಸಿಡಿದೆದ್ದ ಸಮಾಜದ ಪ್ರಗತಿಪರ ಭಾಗವನ್ನು ಬಂಡವಾಳಶಾಹಿ ವರ್ಗ ಪ್ರತಿನಿಧಿಸಿತು.

ಕಲೆ, ಸಾಹಿತ್ಯ, ವಿಜ್ಞಾನ–ಪ್ರತಿಯೊಂದೂ ಹೊಸ ಹಂತವನ್ನು ಏರಿತು ಹಾಗೂ ಬೋಧಿಸಿತು: ಹಳತು ಮತ್ತು ಕೊಳೆತು ಹೋದ ಎಲ್ಲವನ್ನೂ ತುಂಡರಿಸು, ಹೊಸತು ಮತ್ತು ತಾಜಾತನವನ್ನು ಸ್ವಾಗತಿಸು ಹಾಗೂ ಸತ್ಯವನ್ನು ಕಂಡುಹಿಡಿ. ಹೀಗೆ ವಿಜ್ಞಾನದ ಮುನ್ನಡೆ ಶುರುವಾಯಿತು. ರಾಜರು ಮತ್ತು ಸಾಮ್ರಾಟರು ಈ ಮುನ್ನಡೆಯನ್ನು ತಡೆಹಿಡಿಯಲು ಯತ್ನಿಸಿದರು. ವಿಜ್ಞಾನದ ಧ್ಯೇಯ ಸಾಧನೆಯನ್ನು ಎತ್ತಿ ಹಿಡಿದ ಹರಿಕಾರರೆಂದರೆ ಬೂರ್ಜ್ವಾಜಿಗಳು. ಆದ್ದರಿಂದಲೇ ಆ ಕಾಲದ ಮಹಾನ್ ವಿಜ್ಞಾನಿ ನ್ಯೂಟನ್‌ರವರನ್ನು ಓರ್ವ ಮಹಾನ್ ಸಂತ ಎಂದು ಕರೆದವರು ಅವರೇ. ನ್ಯೂಟನ್ ದೇವರ ಆರಾಧಕರಾಗಿದ್ದಿಲ್ಲ–ಅವರು ವಿಜ್ಞಾನದ ವ್ಯಕ್ತಿಯಾಗಿದ್ದರು–ವಿಜ್ಞಾನದ ಅನ್ವೇಷಣೆಗೆ, ವೈಜ್ಞಾನಿಕ ಸತ್ಯ ಶೋಧನೆಗೆ ತಮ್ಮ ಇಡೀ ಜೀವನವನ್ನು ಮುಡಿಪಾಗಿಟ್ಟಿದ್ದರು. ಆದರೂ ಬೂರ್ಜ್ವಾಜಿಗಳು ಅವರನ್ನೊಬ್ಬ ಮಹಾನ್ ಸಂತ ಎಂದು ಕರೆದರು. ಏಕೆಂದರೆ ಅವರೊಂದು ಮಹಾನ್ ಕಾರ್ಯವನ್ನು ನಡೆಸಿದರು. ನ್ಯೂಟೋನಿಯನ್ ವಿಜ್ಞಾನ ಊಳಿಗಮಾನ್ಯ ಚಿಂತನೆ ಮತ್ತು ವಿಚಾರಗಳಿಗೆ ಮಾರಕ ಪೆಟ್ಟನ್ನು ಕೊಟ್ಟಿತೆಂಬುದನ್ನೂ ನಾವು ಬಲ್ಲೆವು. ನ್ಯೂಟೋನಿಯನ್ ವಿಜ್ಞಾನದಿಂದ ಹೊರಬಂದ ಸತ್ಯವೆಂದರೆ ಸಾಮ್ರಾಟರು ಮತ್ತು ರಾಜರು ದೇವರ ಪ್ರತಿನಿಧಿಗಳಲ್ಲ. ಇದೆಲ್ಲಾ ಬರಿಯ ಬೊಗಳೆ. ದೇವರು ಸ್ವತಃ ಇದ್ದಾನೆಯೇ ಎಂಬ ಪ್ರಶ್ನೆಯ ಕುರಿತು ಬಹಳ ದೊಡ್ಡ ಸಂದೇಹವಿತ್ತು. ಈ ವಸ್ತು ಜಗತ್ತಿನಲ್ಲೆಲ್ಲೂ ದೇವರ ಅಸ್ತಿತ್ವವನ್ನು ಹುಡುಕಲಾಗಲಿಲ್ಲ. ಅವನ ಇರುವಿಕೆ ಬಗ್ಗೆ ಯಾರೂ ಅರಿತಿರಲಿಲ್ಲ. ಬರಿಯ ಮಾನವನ ಕಲ್ಪನೆ ಹಾಗೂ ಭ್ರಮೆಯಲ್ಲಿ ದೇವರಿದ್ದಾನೆ ಎಂದು ನ್ಯೂಟೋನಿಯನ್ ವಿಜ್ಞಾನ ಘೋಷಿಸಿತು. ಅವನೇ ಇಲ್ಲದೆ ಹೋದ ಮೇಲೆ ಅವನ ಪ್ರತಿನಿಧಿ ಎಲ್ಲಿಂದ ಬಂದಾನು? ಈ ರೀತಿ ವಿಜ್ಞಾನವು ಹಳೆಯ ಚಿಂತನೆಗಳ ಬುಡವನ್ನೇ ಅಲುಗಾಡಿಸಿತು. ರಾಜನ ವಿರುದ್ಧ ಯುದ್ಧ ಹರಿಬಿಡಲು ಇದು ಹೊಸ ದಾರಿಯನ್ನು ತೆರೆಯಿತು–ಈ ಮಾರ್ಗದಲ್ಲಿ ಈಗ ಇನ್ನೇನೂ ಅಡ್ಡಿ ನಿಂತಿರಲಿಲ್ಲ. ಮಾನವನನ್ನು ಹೆಚ್ಚಾಗಿ ತಡೆಹಿಡಿಯುವುದೆಂದರೆ ಪಾಪ ಮತ್ತು ಪುಣ್ಯಗಳ ಆತಂಕ. ರಾಜನ ವಿರುದ್ಧ ಹೋಗುವುದೆಂದರೆ ಅದು ನರಕಕ್ಕೆ ಕೊಂಡೊಯ್ಯುವುದೆಂದು ಅಂದಿನವರೆಗಿನ ನಂಬಿಕೆಯಾಗಿತ್ತು. ರಾಜ ದೇವರ ಪ್ರತಿರೂಪವಾಗಿರುವುದರಿಂದ ರಾಜನ ವಿರುದ್ಧ ಹೋದವರಿಗೆ ನರಕವೇ ಗತಿ ಎಂದು ಶಾಸ್ತ್ರಗಳ ಪ್ರತಿಪಾದಕರಾದ ಚರ್ಚಿನ ಪಾದ್ರಿಗಳು, ಮಠಗಳ ಪಂಡಿತರು ಹಾಗೂ ಮಸೀದಿಯ ಮೌಲ್ವಿಗಳು ಪ್ರವಚಿಸುತ್ತಿದ್ದರು. ವಿಜ್ಞಾನದ ಬೆಳವಣಿಗೆಯು ಇಂತಹ ವಿಚಾರ ಮತ್ತು ನಂಬಿಕೆಗಳನ್ನು ನುಚ್ಚುನೂರು ಮಾಡಿತು. ಆದ್ದರಿಂದ ಉದಯೋನ್ಮುಖ ಬಂಡವಾಳಶಾಹಿಯ ಯುಗದಲ್ಲಿ ವಸ್ತುವಾದಿ ಚಿಂತನೆಗಳ ಉಕ್ಕುತ್ತಿರುವ ಅಲೆಯೊಂದು ಹೊಸದಾಗಿ ಪ್ರಾರಂಭವಾಗುತ್ತಾ ಅದು ಮತ್ತೊಮ್ಮೆ ವಸ್ತುವಾದದ ಬೆಳವಣಿಗೆಗೆ ದ್ವಾರ ತೆರೆದುದನ್ನು ಸಮಾಜದ ಬೆಳವಣಿಗೆಯ ಇತಿಹಾಸದಿಂದ ಕಾಣಬಹುದು. ವಿಜ್ಞಾನ ತನ್ನ

ವಿಜಯವನ್ನು ಎಲ್ಲೆಡೆ ಘೋಷಿಸಿತು. ಆ ಕಾಲದಲ್ಲಿ ಕರೆ ಧ್ವನಿಸಿತು: "ವಿಜ್ಞಾನ ಮತ್ತು ಜ್ಞಾನಶಾಸ್ತ್ರದ (epistemology) ಅಧ್ಯಯನದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ, ಸತ್ಯ ಶೋಧಿಸಿ, ಯಾವುದು ತಾರ್ಕಿಕವೋ ಅದನ್ನು ಸೂಕ್ಷ್ಮವಾಗಿ ಪರೀಕ್ಷಿಸಿ, ನಿಮ್ಮನ್ನು ಬದಲಾಯಿಸಿಕೊಳ್ಳಿ. ಹಳೆಯ ವಿಚಾರಗಳನ್ನು ಹೊಡೆದೋಡಿಸಿ ಹಾಗೂ ಅನ್ಯಾಯದ ವಿರುದ್ಧ ಎದ್ದು ನಿಲ್ಲಿ." ಇದು ನವೋದಯದ ಕರೆಯಾಗಿತ್ತು. ಫ್ರೆಂಚ್ ಮಹಾಕ್ರಾಂತಿಯ ಕರೆಯಾಗಿತ್ತು. ಈ ಕರೆ ಎಲ್ಲೆಡೆ, ತತ್ವಜ್ಞಾನ, ವಿಜ್ಞಾನ, ಕಲೆ, ಸಾಹಿತ್ಯಗಳ ಪ್ರತಿ ವಿಭಾಗದಲ್ಲೂ ಮಾರ್ದನಿಸಿತು.

ಈಗ ಇನ್ನೊಂದು ವಿಷಯಾಂಶವಿದೆ. ಬೂರ್ಜ್ವಾಸಿಗಳು ತಮ್ಮ ಉತ್ತುಂಗದ ಕಾಲದಲ್ಲಿ ವಸ್ತುವಾದದಲ್ಲಿ ವಿಶ್ವಾಸವುಳ್ಳವರಾಗಿದ್ದರೆಂಬುದು ನಿಸ್ಸಂಶಯವೇ ಸರಿ. ಆದರೆ ಅದು ಮಾರ್ಕ್ಸ್‌ವಾದಿಗಳು ಬದ್ಧವಾಗಿರುವಂತಹ ವಸ್ತುವಾದವಾಗಿರಲಿಲ್ಲ, ಬದಲಿಗೆ ಅದು ಭಾವನಾವಾದದ ತುಣುಕುಗಳು ಬೆರೆತುಕೊಂಡಿರುವಂತಹ ವಸ್ತುವಾದವಾಗಿತ್ತು. ದ್ವಂದ್ವಾತ್ಮಕ ವಸ್ತುವಾದ ಹಾಗೂ ಬೂರ್ಜ್ವಾಜಿಗಳು ಒಂದೊಮ್ಮೆ ಎತ್ತಿ ಹಿಡಿದ ವಸ್ತುವಾದಗಳಲ್ಲಿನ ವಸ್ತುವಿನ ಪರಿಕಲ್ಪನೆಗಳಲ್ಲಿ ಮಹತ್ತರ ವ್ಯತ್ಯಾಸವಿದೆಯೆಂಬುದನ್ನು ಎಲ್ಲರೂ ಬಲ್ಲರು. ಬೂರ್ಜ್ವಾಜಿಗಳ ವಸ್ತುವಾದಿ ಪರಿಕಲ್ಪನೆ ಭಾವನಾವಾದದ ಪ್ರಭಾವದಿಂದ ಸಂಪೂರ್ಣವಾಗಿ ಮುಕ್ತವಾಗಿರಲಿಲ್ಲ. ಆದರೂ ಅವರ ಚಿಂತನೆಗಳು ಅಥವಾ ದೃಷ್ಟಿಕೋನ ಅವಶ್ಯವಾಗಿ ವಸ್ತುವಾದಿಯಾಗಿದ್ದವು ಎಂಬುದನ್ನು ಅಲ್ಲಗಳೆಯಲಾಗದು ಅಷ್ಟೇ ಅಲ್ಲದೆ, ಬಂಡವಾಳವಾದದ ಉಗಮದ ಪ್ರಾರಂಭದ ಹಂತದಿಂದ ಒಂದು ಸುದೀರ್ಘ ಕಾಲದವರೆಗೂ ಈ ವಸ್ತುವಾದಿ ಪರಿಕಲ್ಪನೆಯು ಸಮಾಜದ ಮೇಲೆ ಮಹತ್ತರ ಪ್ರಭಾವ ಬೀರುತ್ತಾ ಪ್ರಚಲಿತ ಭಾವನಾವಾದಿ ಚಿಂತನೆಗಳಿಗೆ ಒಂದು ತೀವ್ರ ಪ್ರಹಾರವನ್ನು ನೀಡಿದ್ದರ ಕುರಿತು  ನಾನೀಗಾಗಲೇ ನಿಮಗೆ ಹೇಳಿದ್ದೇನೆ. ಅವರು ವಿಜ್ಞಾನದ ಬಗ್ಗೆ ಒಲವು  ಹೊಂದಿದ್ದರು. ಅಂದಿನ ಬಂಡವಾಳಶಾಹಿ ವರ್ಗವು ವೈಜ್ಞಾನಿಕ ವಿವೇಚನಾ ಶಕ್ತಿಯನ್ನು, ತರ್ಕವನ್ನು ಹಾಗೂ ನೂತನ ಬೂರ್ಜ್ವಾ ನೀತಿ ಮತ್ತು ನೈತಿಕತೆಯ ಪರಿಜ್ಞಾನದ ಆಧಾರದಲ್ಲಿ ಪ್ರತಿಯೊಂದನ್ನು ನಿರ್ಧರಿಸುವ ಕ್ರಮವನ್ನು ಬೆಳೆಸಿಕೊಳ್ಳುವುದಕ್ಕೆ ಶ್ರೀರಕ್ಷೆಯಾಗಿ ನಿಂತಿತ್ತು. ಏಕೆಂದರೆ ಬಂಡವಾಳಶಾಹಿ ಸಮಾಜವನ್ನು ಕಟ್ಟುವ ಸಲುವಾಗಿ ಅವರು ಅಂದಿನ ಪ್ರತಿಗಾಮಿ ಶಕ್ತಿಗಳ ವಿರುದ್ಧ, ರಾಜರು ಮತ್ತು ಜೀತ ಪದ್ಧತಿಯ ವಿರುದ್ಧ ಸಮರ ಸಾರಬೇಕಿತ್ತು. ಜೀತದಾಳುಗಳನ್ನು ಮುಕ್ತಗೊಳಿಸಬೇಕಿತ್ತು. ಆದ್ದರಿಂದ ಅವರು ವೈಯಕ್ತಿಕತೆ, ವ್ಯಕ್ತಿ ಸ್ವಾತಂತ್ರ್ಯದ ಘೋಷಣೆಯನ್ನು ಎತ್ತಿದರು. ಹೀಗೆ ಹೋರಾಡುತ್ತಾ ಅವರು ಇಂದು ನಾವು ಕಾಣುವ ಸಂಸದೀಯ ವ್ಯವಸ್ಥೆಗೆ ಬುನಾದಿ ಹಾಕಿದರು–ಅವರು ಕೈಗಾರಿಕಾ ಬೆಳವಣಿಗೆ, ಉತ್ಪಾದನಾ ಬೆಳವಣಿಗೆ ಮತ್ತು ಬಂಡವಾಳವಾದದ  ಪ್ರಗತಿಯನ್ನು ಸಾಧಿಸಿದರು. ಅದಕ್ಕಾಗಿ ಅವರು ಇನ್ನೊಂದು ಕಾರ್ಯವನ್ನು ನಡೆಸಬೇಕಿತ್ತು. ಅದೆಂದರೆ ಅವರು ಪ್ರತಿಯೊಬ್ಬ ವ್ಯಕ್ತಿಯನ್ನು ವೈಯಕ್ತಿಕವಾಗಿ ಮುಕ್ತಗೊಳಿಸಬೇಕಿತ್ತು ಹಾಗೂ ಕಾನೂನಿನ

ಕಣ್ಣಿನಲ್ಲಾದರೂ ಎಲ್ಲರನ್ನೂ ಸಮಾನರನ್ನಾಗಿಸಬೇಕಿತ್ತು. ಆದರೂ ಆ ವ್ಯವಸ್ಥೆಯಲ್ಲಿ ಮಾನವ ಸಂಪೂರ್ಣವಾಗಿ ಸ್ವತಂತ್ರನಾಗಲಿಲ್ಲ ಎಂಬುದಂತೂ ನಿಜ. ಜೀತದಿಂದ ಅವರು ಮುಕ್ತರಾದರೂ ಬಂಧನದಿಂದ ಅವರು ಮುಕ್ತರಾಗಲಿಲ್ಲ. ಅವರು ವೇತನ ಗುಲಾಮರ ಮಟ್ಟಕ್ಕೆ ಇಳಿಸಲ್ಪಟ್ಟರು. ಅಂದರೆ ಗಿರಣಿ ಮತ್ತು ಕಾರ್ಖಾನೆಗಳಲ್ಲಿ ಗುಲಾಮರಾದರು. ಇದು ನಡೆಯುವುದು ಹೇಗೆ ಸಾಧ್ಯವಾಯಿತು? ಇದು ಏಕೆ ನಡೆದಿದ್ದು ಎಂದರೆ, ಅವರು ಇನ್ನೆಲ್ಲಿಗೆ ಹೋಗಬಹುದಿತ್ತು, ಹೇಗೆ ಜೀವನ ನಡೆಸಬಹುದಿತ್ತು? ಭೂಮಾಲೀಕರ ಸೆರೆಯಿಂದ ಅವರು ಮುಕ್ತರಾದರೂ, ಬರಿಯ ಅಸ್ತಿತ್ವಕ್ಕಾಗಿ ಅವರು ಗಿರಣಿ ಮತ್ತು ಕಾರ್ಖಾನೆಗಳ ಮಾಲೀಕರ ಹಿಂದೆ ಓಡಬೇಕಾಯಿತು. ಹೀಗೆ ಬೂರ್ಜ್ವಾಜ಼ಿಗಳಿಂದ ಮುಕ್ತರಾದವರೇ ಬೂರ್ಜ್ವಾಜ಼ಿಗಳಿಂದಲೇ ಹೆಚ್ಚುಕಮ್ಮಿ ಅರೆ ಗುಲಾಮರ ಮಟ್ಟಕ್ಕೆ ಇಳಿಸಲ್ಪಟ್ಟರು. ಅಂದರೆ, ಮಾಲೀಕರು ನಿರ್ಧರಿಸಿದ ವೇತನ ಎಷ್ಟಿದ್ದರೂ, ಅಷ್ಟಕ್ಕಾಗಿ ಕೆಲಸ ಮಾಡುವ ಬಲವಂತಕ್ಕೆ ಒಳಗಾದರು. ಏಕೆಂದರೆ ಬಂಡವಾಳವಾದದ ನಿಷ್ಠುರ ನಿಯಮವೆಂದರೆ ನಿರುದ್ಯೋಗವನ್ನು, ನಿರುದ್ಯೋಗಿಗಳ ಸೈನ್ಯವನ್ನು ಸೃಷ್ಟಿಸುವುದು. ಹೀಗೆ ಅಗ್ಗದ ಶ್ರಮವನ್ನು ಉಪಯೋಗಿಸಿಕೊಳ್ಳುವ ಅವಕಾಶ ಮಾಲೀಕರಿಗೆ ಒದಗಿ ಬಂತು. ಆದ್ದರಿಂದ ಬೂರ್ಜ್ವಾಜ಼ಿಗಳು ಸಮಾಜವನ್ನು ಹೆಚ್ಚು ಮುಂದಕ್ಕೆ ಕೊಂಡೊಯ್ಯಲಾಗಲಿಲ್ಲ. ಕಾಲಕ್ರಮದಲ್ಲಿ ಬಂಡವಾಳಶಾಹಿ ವರ್ಗ ತನ್ನ ಮೊದಲಿನ ಚೈತನ್ಯ ಕಳೆದುಕೊಂಡಿತು  ಮತ್ತು ಪ್ರತಿಗಾಮಿಯಾಯಿತು. ಅಂದರೆ ತನ್ನ ಉದಯಕಾಲದಲ್ಲಿ ವಿಜ್ಞಾನ ಮತ್ತು ವಿಜ್ಞಾನದ ಶೋಧ, ಪ್ರಯೋಗಸಿದ್ಧ ಸತ್ಯ, ತರ್ಕ ಮತ್ತು ವಿವೇಚನಾಶಕ್ತಿಗಳಿಗೆ ಒತ್ತುಕೊಟ್ಟ ಬೂರ್ಜ್ವಾಜ಼ಿ, ತದನಂತರದ ಕಾಲದಲ್ಲಿ ಬಂಡವಾಳವಾದ ಮರಣಾಸನ್ನವಾಗಿ, ಪ್ರತಿಗಾಮಿಯಾದಾಗ, ಬೂರ್ಜ್ವಾಜ಼ಿ ತಾನೇ ಪಟ್ಟಭದ್ರ ಹಿತಾಸಕ್ತಿಗಳನ್ನು ಪ್ರತಿನಿಧಿಸಿದಾಗ, ಬೂರ್ಜ್ವಾಜಿಯು ತನ್ನ ಪ್ರಾರಂಭದ ದಿನಗಳ ಕ್ರಾಂತಿಕಾರಿ ಗುಣಲಕ್ಷಣಗಳನ್ನು ಕಳೆದುಕೊಂಡು, ವಿಜ್ಞಾನ ಹಾಗೂ ವೈಜ್ಞಾನಿಕ ತರ್ಕಗಳಿಂದ ದೂರ ಸರಿಯಿತು, ಮತ್ತು  ಭಾವನಾವಾದಿ ತತ್ವಶಾಸ್ತ್ರ ಮತ್ತು ಭಾವನಾವಾದಿ ಚಿಂತನೆಗಳನ್ನು ಪೋಷಿಸಲು ಪ್ರಾರಂಭಿಸಿತು ಹಾಗೂ ವಿಜ್ಞಾನದ ಪ್ರಗತಿಯನ್ನು ಸ್ಥಗಿತಗೊಳಿಸಿತು. ಬೂರ್ಜ್ವಾಸಿಯು ತನ್ನ ವರ್ಗ ಆಳ್ವಿಕೆ ಮತ್ತು ಶೋಷಣೆಗಳನ್ನು ಸ್ಥಾಪಿಸಿದ ಬಳಿಕ, ಅದು ಇನ್ನೆಷ್ಟು ಮಾತ್ರಕ್ಕೂ ಸಮಾಜವನ್ನು ಮುಂದೆ ಕೊಂಡೊಯ್ಯಲು ಸಾಧ್ಯವಾಗದಂತಹ ಪರಿಸ್ಥಿತಿ ಉದ್ಭವಿಸಿತು. ಅಲ್ಪಸ್ವಲ್ಪ ಕೈಗಾರಿಕೀಕರಣವನ್ನು ಅವರು ತರುವುದು ಸಾಧ್ಯವಾದರೂ, ಅದು ಬಿಕ್ಕಟ್ಟನ್ನೇ ತರುತ್ತಾ, ಇನ್ನೂ ಆಳವಾದ ಬಿಕ್ಕಟ್ಟಿಗೆ  ಎಡೆಮಾಡಿಕೊಟ್ಟಿತು.

## ಮರಣಾಸನ್ನ ಬಂಡವಾಳವಾದ ವಿಜ್ಞಾನದ ಪ್ರಗತಿಗೆ ತಡೆಹಾಕುತ್ತದೆ

ಬಂಡವಾಳವಾದವು ಜನರಿಗೆ ಇನ್ನೇನು ಒಳಿತನ್ನೂ ಕೊಡಲಾಗದೆ, ಮಾನವತೆಗೆ ಅದರ ವಿಮುಕ್ತಿಯ ಹಾದಿಯನ್ನು ತೋರಿಸಲಾಗದೆ, ಶೋಷಣೆಯ ಶಾಪದ ಹೊರತು

ಇನ್ನೇನನ್ನೂ ನೀಡಲಾಗದೆ ಹೋದ ಕಾಲವದಾಗಿತ್ತು. ಆದ್ದರಿಂದ ಬಂಡವಾಳವಾದವು ಜನಜೀವನದ ಮೇಲೆ ಒಂದು ಹೆಣಭಾರವಾಗಿ ಹೋಯಿತು. ಎಷ್ಟೊಂದು ವಿಚಿತ್ರ ನೋಡಿ! ಬಂಡವಾಳಶಾಹಿ ವರ್ಗವು ತನ್ನ ಉದಯದ ಕಾಲದಲ್ಲಿ ಸಾಮಂತಶಾಹಿ–ನಿರಂಕುಶ (absolutism), ಸಂಕುಚಿತ ಊಳಿಗಮಾನ್ಯ ಮನೋಧರ್ಮ ಹಾಗೂ ದೃಷ್ಟಿಕೋನ, ಧಾರ್ಮಿಕ ಅಂಧತ್ವ ಹಾಗೂ ಕುರುಡುತನ (bigotry) ಗಳ ವಿರುದ್ಧ ಹೋರಾಡಿತು, ಭಾವನಾವಾದಿ ತತ್ವಜ್ಞಾನದ ವಿರುದ್ಧ ಹೋರಾಡಿ, ವಸ್ತುವಾದವನ್ನು ಸ್ಥಾಪಿಸಲು ಪ್ರಯತ್ನಿಸಿತು ಮತ್ತು ವಿಜ್ಞಾನದ ಯಶಸ್ವಿ ಮುನ್ನಡೆಯನ್ನು ಸ್ಥಾಪಿಸಲು ಯತ್ನಿಸಿ ಅದನ್ನು ಸಾಧಿಸಿತು. ಅದೇ ಬಂಡವಾಳಶಾಹಿ ವರ್ಗವು, ತದನಂತರದ ಕಾಲದಲ್ಲಿ ಪಟ್ಟಭದ್ರ ಹಿತಾಸಕ್ತಿಗಳಾದ ಊಳಿಗಮಾನ್ಯ ಒಡೆಯರಂತೆಯೇ ವಸ್ತುವಾದಿ ಚಿಂತನೆಯಿಂದ ವಿಮುಖವಾಗಿ ಭಾವನಾವಾದದೆಡೆಗೆ ವಾಲಿತು. ಈಗವರು ಸರ್ವಶಕ್ತನ ಹೆಸರನ್ನು ಜಪಿಸುತ್ತಿದ್ದಾರೆ. ಇಂದು ಭಾವನಾವಾದಕ್ಕೆ ಅಂಟಿಕೊಂಡಿರುವವರೂ ಅವರೇ. ಇಂದು ವಿಭಿನ್ನ ವಿಧಗಳಿಂದ ವಿಜ್ಞಾನದ ಕುರಿತು ತಪ್ಪು ಕಲ್ಪನೆಗಳನ್ನು ಹುಟ್ಟಿಸುವಲ್ಲಿ ಅವರೆಲ್ಲಾ ನಿರತವಾಗಿದ್ದಾರೆ. ವಿಜ್ಞಾನವು ಮಾನವತೆಗೆ ಒಂದು ಶಾಪ ಹಾಗೂ ವರ, ಎರಡೂ ಹೌದು ಎಂದು ಬೋಧಿಸುವವರೂ ಅವರೇ. ಆದರೆ ಅವರು ವಿಜ್ಞಾನವನ್ನು ಸಂಪೂರ್ಣವಾಗಿ ತಿರಸ್ಕರಿಸಲಾರರು, ಏಕೆಂದರೆ ಬಂಡವಾಳಶಾಹಿ ಕೈಗಾರಿಕಾ ಉತ್ಪಾದನೆ ಎಂತಹ ಹಂತವನ್ನು ತಲುಪಿದೆಯೆಂದರೆ ಬೂರ್ಜ್ವಾಜಿಗೆ ವಿಜ್ಞಾನವು ತಾಂತ್ರಿಕ ಬೆಳವಣಿಗೆಗಾಗಿ ಅನಿವಾರ್ಯವಾಗಿ ಬಿಟ್ಟಿದೆ. ಆದ್ದರಿಂದ ಬಂಡವಾಳಶಾಹಿಗಳು ತಮ್ಮ ವರ್ಗ ಹಿತಾಸಕ್ತಿಯನ್ನು ಕಾಪಾಡುವಷ್ಟರ ಮಟ್ಟಿಗೆ ವಿಜ್ಞಾನ ಮತ್ತದರ ಬೆಳವಣಿಗೆಗೆ ನೆರವು ನೀಡುತ್ತಿದ್ದಾರೆ. ಇನ್ನೊಂದರ್ಥದಲ್ಲಿ ಹೀಗೆ ಮಾಡುವುದೆಂದರೆ ವಿಜ್ಞಾನದ ಪ್ರಗತಿಗೆ ತಡೆ ಹಾಕುವುದಾಗಿದೆ. ಪ್ರಾರಂಭದಲ್ಲಿ ಬೂರ್ಜ್ವಾಜಿಗಳು ವಿಜ್ಞಾನದ ಮುನ್ನಡೆಗೆ ಶ್ರೀರಕ್ಷೆ ಮತ್ತು ಶಕ್ತಿ ನೀಡುತ್ತಾ ಅದರೊಟ್ಟಿಗೇ ನಿಂತಂತೆ ಈಗ ಮಾಡಲಾರರು. ಬದಲಿಗೆ, ಸಾಧ್ಯವಾದರೆ ಅದರ ಬೆಳವಣಿಗೆಗೆ ತಡೆ ಒಡ್ಡಲು ಅವರು ಪ್ರಯತ್ನಿಸುವರು. ಮರಣಾಸನ್ನ ಬಂಡವಾಳವಾದದ ಕಾಲದಲ್ಲಿ ವಿಜ್ಞಾನದ ಪ್ರಗತಿ ಬಂಡವಾಳವಾದಕ್ಕೆ ಬೆದರಿಕೆಯೊಡ್ಡುತ್ತಾ ಅದರ ಉಳಿವಿಗೇ ಹೆಚ್ಚೆಚ್ಚು ಬಿಕ್ಕಟ್ಟನ್ನು ಮತ್ತು ಗಂಡಾಂತರವನ್ನು ತರುತ್ತಿದೆ.

## ಲಾಭವನ್ನು ಗರಿಷ್ಠಗೊಳಿಸುವುದರ ಮೇಲಾಧಾರಿತ ಉತ್ಪಾದನೆ ಬಿಕ್ಕಟ್ಟಿನ ಮೂಲಕಾರಣ

ಈ ಬಿಕ್ಕಟ್ಟು ಏಕೆ? ಇದು ನಿಸ್ಸಂದೇಹವಾಗಿ ಒಂದು ಸಂಬಂಧಿತ ಪ್ರಶ್ನೆಯೇ ಆಗಿದೆ. ಮಾನವತಾವಾದಿ ನೈತಿಕತೆ ಮತ್ತು ನೀತಿಗಳ ಮೇಲೆ ಆಧಾರಿತವಾದ ಜೀವನದ ಹೊಸ ಮೌಲ್ಯಗಳನ್ನು ಸ್ಥಾಪಿಸಲು ಹಾಗೂ ಸಾಮಾಜಿಕ ಪ್ರಗತಿಗೆ ನೆರವಾಗಲು, ವಿಜ್ಞಾನವನ್ನು

ತನ್ನ ಹೋರಾಟದ ಅಸ್ತ್ರವನ್ನಾಗಿಸಿಕೊಂಡು ಸತ್ಯಾನ್ವೇಷಣೆಗೆ ತನ್ನನ್ನು ಮುಡಿಪಾಗಿಟ್ಟ, ಒಂದೊಮ್ಮೆ ಸಮಾಜವನ್ನು ಮುನ್ನಡೆಸಿದ ಮತ್ತು ಸಾಮಂತಶಾಹಿ ನಿರಂಕುಶ ಪ್ರಭುತ್ವದ (absolutism) ವಿರುದ್ಧ ಕ್ರಾಂತಿಯನ್ನು ನಡೆಸಿದ, ಎಲ್ಲಾ ಹಳೆಯ ಧಾರ್ಮಿಕ ನೀತಿ ಮತ್ತು ಮೌಲ್ಯಗಳ ವಿರುದ್ಧ ಸಂಘರ್ಷ ನಡೆಸಿದ ಬಂಡವಾಳವಾದ–ನಂತರದ ಕಾಲಘಟ್ಟದಲ್ಲಿ ಜೀವನದ ಎಲ್ಲಾ ಸ್ತರಗಳಲ್ಲಿ ತದ್ವಿರುದ್ಧವಾದ ಹಾಡನ್ನು ಹಾಡುತ್ತಿರುವುದೇಕೆ? ಏಕೆಂದರೆ, ಇಷ್ಟೆಲ್ಲಾ ಆದಾಗ್ಯೂ ಶ್ರಮವನ್ನು ಶೋಷಣೆಯಿಂದ ಮುಕ್ತಗೊಳಿಸಲು, ಮಾಲೀಕರ ಶೋಷಣೆಯ ಕಪಿಮುಷ್ಟಿ ಮತ್ತು ಕಬಂಧಬಾಹುಗಳಿಂದ ಮುಕ್ತಗೊಳಿಸಲು ಬೂರ್ಜ್ವಾಜಿಗೆ ಸಾಧ್ಯವಾಗದೆ ಹೋಯಿತು. ಉತ್ಪಾದನೆಯ ಮೂಲಗಳ ಮೇಲೆ ಖಾಸಗಿ ಒಡೆತನವಿರುವ ಒಂದು ಸಮಾಜದಲ್ಲಿ ಉತ್ಪಾದನೆಯ ಹಿಂದಿನ ಪ್ರಚೋದಕ ಶಕ್ತಿ ಬರಿಯ ಲಾಭಗಳಿಕೆ ಮಾತ್ರವಲ್ಲ ಬದಲಿಗೆ ಗರಿಷ್ಠ ಲಾಭಗಳಿಕೆಯಾಗಿದೆ. ಆದರೆ ಕಾರ್ಖಾನೆಯಲ್ಲಿ ಶ್ರಮಿಸುವ ಕಾರ್ಮಿಕರನ್ನು ಶೋಷಿಸದೆ, ಜನರನ್ನು ಶೋಷಿಸದೆ, ಮಾಲೀಕರು ಈ ಲಾಭವನ್ನು ಗಳಿಸಲಾರರು. ಹೀಗೆ ಕಾಲಕ್ರಮೇಣ ಜನಸಾಮಾನ್ಯರು ಹೆಚ್ಚೆಚ್ಚು ವಂಚಿತರಾಗುತ್ತಾ, ದಿವಾಳಿಯಾದರು. ಹಾಗೂ ಒಂದೆಡೆಯಲ್ಲಿ ಸ್ಪರ್ಧೆಯನ್ನು ತಾಳಲಾರದೆ ಹೆಚ್ಚಿನ ಮಾಲೀಕರು ಸಣ್ಣ ಮಾಲೀಕರಾಗೇ ಉಳಿದರು ಅಥವಾ ಆ ಮಟ್ಟಕ್ಕೆ ಇಳಿಸಲ್ಪಟ್ಟರು ಹಾಗೂ ಇನ್ನೊಂದೆಡೆ ಸಾಮಾಜಿಕ ಸಂಪತ್ತಿನ ಬಹುಪಾಲು ಕೆಲವೇ ಕೆಲ ಮಾಲೀಕರ ಕೈಗಳಲ್ಲಿ ಸಂಗ್ರಹಿತವಾಯಿತು. ಬಂಡವಾಳವಾದದ ಬೆಳವಣಿಗೆಯ ಕಾಲಗತಿಯಲ್ಲಿ ಇಂತಹ ಒಂದು ಪರಿಸ್ಥಿತಿ ಸಮಾಜದಲ್ಲಿ ಉದ್ಭವಿಸಿದಾಗ, ಅಂದರೆ ಬಂಡವಾಳವಾದ ಏಕಸ್ವಾಮ್ಯ ಬಂಡವಾಳವಾದವಾಗಿ ಪರಿವರ್ತಿತವಾದಾಗ ಅದರ ಬಿಕ್ಕಟ್ಟು ಬಹಳ ತೀವ್ರಗೊಂಡಿತು. ಅದು ಯಾವುದಕ್ಕೆ ಎಡೆ ಮಾಡಿಕೊಟ್ಟಿತು? ಸಮಸ್ಯೆಯ ಗುಣಲಕ್ಷಣವನ್ನು ನಾವು ಸ್ಪಷ್ಟವಾಗಿ ಅರಿಯಬೇಕು. ಜನಸಾಮಾನ್ಯರ ಅವಶ್ಯಕತೆಗಳೇನೇ ಇರಲಿ, ಬಂಡವಾಳಶಾಹಿ ಶೋಷಣೆಯ ಪ್ರಭಾವದಿಂದ ಅವರ ಕೊಳ್ಳುವ ಶಕ್ತಿ ಅವರ ಕನಿಷ್ಠ ಅವಶ್ಯಕತೆಗಳಿಗಿಂತ ಕಡಿಮೆಯೇ ಇರುತ್ತದೆ ಎಂಬುದು ನಿಮಗೆಲ್ಲಾ ಗೊತ್ತು. ಆದರೆ ವಿಜ್ಞಾನ ಮತ್ತು ತಂತ್ರಜ್ಞಾನದ ಅತ್ಯದ್ಭುತ ಬೆಳವಣಿಗೆಯಿಂದ ಸಮಾಜದ ಉತ್ಪಾದನೆ ಅಥವಾ ಉತ್ಪಾದನಾ ಸಾಮರ್ಥ್ಯ ಉನ್ನತ ಸ್ಥಾನ ತಲುಪಿತು. ತತ್ಪರಿಣಾಮವಾಗಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅತಿ ಉತ್ಪಾದನೆಯ ಸಮಸ್ಯೆ ಕಾಣಿಸಿಕೊಂಡಿತು. ಅತಿ ಉತ್ಪಾದನೆಯ ನೈಜ ಅರ್ಥವೇನು? ಮಾರುಕಟ್ಟೆಯ ಬೇಡಿಕೆಗೆ ಹೋಲಿಸಿದರೆ ಉತ್ಪಾದನೆ ಹೆಚ್ಚು ಅಂದರೆ ಉತ್ಪಾದನೆಯು ಮಾರುಕಟ್ಟೆಯ ಬೇಡಿಕೆಯನ್ನು ಅತ್ಯಧಿಕವಾಗಿ ಮೀರುತ್ತದೆ. ಈ ಬೇಡಿಕೆ ಜನರ ನೈಜ ಅವಶ್ಯಕತೆಯೆಂದರ್ಥವೇ? ಇಲ್ಲ, ಖಂಡಿತ ಇಲ್ಲ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಈ ಬೇಡಿಕೆಯು ಜನರ ನೈಜ ಅವಶ್ಯಕತೆಗಳನ್ನು ಪ್ರತಿಬಿಂಬಿಸುವುದಿಲ್ಲ ಬದಲಿಗೆ ಇದು ಸಮಾಜದ ಜನರೆಲ್ಲರ ಕೊಳ್ಳುವ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ. ಉತ್ಪಾದನೆ ಈ ಬೇಡಿಕೆಗಿಂತ

ಮುಂದಿದ್ದರೆ ಅದನ್ನು ನಾವು ಅತಿ ಉತ್ಪಾದನೆ ಎನ್ನುತ್ತೇವೆ. ಆಗ ಬಿಕ್ಕಟ್ಟೊಂದು ಉದ್ಭವಿಸುತ್ತದೆ. ಮತ್ತದರಿಂದ ರಿಟ್ರೆಂಚ್‌ಮೆಂಟ್‌ನ ಕೊಡಲಿ ಜನರ ಮೇಲೆರಗುತ್ತದೆ. ಹೀಗೆ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಾ ಹೋಗುತ್ತದೆ ಮತ್ತು ತತ್ಪರಿಣಾಮವಾಗಿ ಹೊಸ ಹೊಸ ಸಮಸ್ಯೆಗಳು ಬಂಡವಾಳಶಾಹಿ ಸಮಾಜದಲ್ಲಿ ಕಾಣಿಸಿಕೊಳ್ಳುತ್ತವೆ. ಹೊಸ ಯಂತ್ರಗಳ ಅಳವಡಿಕೆಯಿಂದ ಹೆಚ್ಚೆಚ್ಚು ಕಾರ್ಮಿಕರು ವಜಾ (ರಿಟ್ರೆಂಚ್) ಆಗುತ್ತಾರೆ. ನಿರುದ್ಯೋಗಿ ಕಾರ್ಮಿಕರು ಹೋರಾಟಕ್ಕೆ ಇಳಿಯುತ್ತಾರೆ. ವಾಸ್ತವದಲ್ಲಿ ಕಾರ್ಮಿಕರು ಏಕೆ ನಿರುದ್ಯೋಗಿಗಳಾಗುತ್ತಾರೆ? ನಿರುದ್ಯೋಗ ಹೊಸ ಯಂತ್ರಗಳ ಕಾರಣದಿಂದಾಗಲೀ  ಅಥವಾ ವಿಜ್ಞಾನದ ಬೆಳವಣಿಗೆಯಿಂದಾಗಲೀ ಬರುವುದಿಲ್ಲ. ವಾಸ್ತವದಲ್ಲಿ, ಲಾಭವನ್ನು ಗರಿಷ್ಠಗೊಳಿಸುವ ಪ್ರಚೋದಕ ಶಕ್ತಿಯ ಮೇಲೆ ಆಧಾರಿತ ಸಮಾಜವೇ  ನಿರುದ್ಯೋಗದ ಈ ಸಮಸ್ಯೆಗೆ ಹೊಣೆ. ಬಂಡವಾಳಶಾಹಿ ವರ್ಗವು ಗರಿಷ್ಠ ಲಾಭ ಗಳಿಸುವ ಆಸಕ್ತಿಯಲ್ಲಿ ಈ ಹೊಸ ಯಂತ್ರವನ್ನು ಬಳಸುವುದರಿಂದ ಮತ್ತು ಇಡೀ ಉತ್ಪಾದನಾ ವ್ಯವಸ್ಥೆಯನ್ನು ನಡೆಸುವುದರಿಂದ ಕಾರ್ಮಿಕರು ರಿಟ್ರೆಂಚ್ ಆಗುತ್ತಾರೆ. ಆದರೆ ಬಂಡವಾಳಶಾಹಿಗಳು ಈ ವಾಸ್ತವಾಂಶವನ್ನು ಮುಚ್ಚಿಡುತ್ತಾರೆ ಹಾಗೂ ವಿಜ್ಞಾನದ ವಿರುದ್ಧ ಒಂದು ಮನೋಭ್ರಾಂತಿಯನ್ನು ಸೃಷ್ಟಿಸಲು ನಿರುದ್ಯೋಗಕ್ಕೆ ವಿಜ್ಞಾನವೇ ಹೊಣೆ ಎಂಬಂತೆ ನಟಿಸುತ್ತಾರೆ. ಮೌಢ್ಯದ ಕಾರಣದಿಂದ, ನಿಜವಾದ ಸಮಸ್ಯೆಯನ್ನು ಸರಿಯಾಗಿ ಗ್ರಹಿಸಲು ವಿಫಲವಾಗಿ ಜನಸಾಮಾನ್ಯರು ಬಹಳೊಮ್ಮೆ ವಿಜ್ಞಾನವೇ ತಮ್ಮ ಶತ್ರು ಎಂದು ತಪ್ಪಾಗಿ  ಪರಿಗಣಿಸುತ್ತಾರೆ.

## ಜನರ ಶತ್ರು  ಬಂಡವಾಳವಾದ, ವಿಜ್ಞಾನವಲ್ಲ

ಉದಾಹರಣೆಗೆ ಒಂದು ಕ್ರೇನ್ ಎಂಜಿನ್ ಅನ್ನು ಅಳವಡಿಸಿದಾಗ ಬಹಳಷ್ಟು ಸಲ ಕಾರ್ಮಿಕರು ಅದು ತಮ್ಮ ವೈರಿಯೆಂದು ತಿಳಿಯುತ್ತಾರೆ – ಅದನ್ನು ನುಚ್ಚುನೂರುಗೊಳಿಸಲು ಬಯಸುತ್ತಾರೆ. ಏಕೆ ಹೀಗೆ? ಏಕೆಂದರೆ ಕ್ರೇನ್‌ನ ಅಳವಡಿಕೆಯ ಬಳಿಕ ಲೋಡಿಂಗ್ ಮತ್ತು ಅನ್‌ಲೋಡಿಂಗ್ (ಸಾಮಾನನ್ನು ಎತ್ತಿಡುವ, ತೆಗೆದಿಡುವ ಕೆಲಸ ಮಾಡುವ) ಕಾರ್ಮಿಕರ ಸಂಖ್ಯೆಯನ್ನು ಕಡಿತಗೊಳಿಸಲಾಗುತ್ತದೆ. ಗರಿಷ್ಠ ಲಾಭಗಳಿಸುವ ಉದ್ದೇಶ ಹೊಂದಿದ ಮಾಲೀಕರು ಕೆಲಸವಿಲ್ಲದಿರುವ ಕಾರ್ಮಿಕರಿಗೆ ವೇತನ ನೀಡಲಾಗದ್ದರಿಂದ ಕೆಲ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡುತ್ತಾರೆ. ಕ್ರೇನ್ ಅಳವಡಿಕೆಯು  ಶ್ರಮದ ವೆಚ್ಚವನ್ನು, ಮತ್ತದರಿಂದ ಉತ್ಪಾದನೆಯ ವೆಚ್ಚವನ್ನು ಕಡಿತಗೊಳಿಸಿತು ಹಾಗೂ ಮಾಲೀಕರ ಲಾಭವನ್ನು ಹೆಚ್ಚಿಸಿತು. ಆದರೆ ಅದರ ಒಟ್ಟಾರೆ ಪರಿಣಾಮವೆಂದರೆ ಕಾರ್ಮಿಕರ ವಜಾಗೊಳಿಸುವಿಕೆ (ರಿಟ್ರೆಂಚ್‌ಮೆಂಟ್) ಯಲ್ಲದೆ ಇನ್ನೇನೂ ಅಲ್ಲ.  ಇಂತಹ ಅನುಭವದಿಂದ ಕಾರ್ಮಿಕರು ತಮ್ಮನ್ನು ನಿರುದ್ಯೋಗಿಯನ್ನಾಗಿಸಿದ್ದು ಇದೇ ಯಂತ್ರವೆಂದು ಭಾವಿಸುತ್ತಾರೆ. ಈ ರೀತಿಯ ಆಲೋಚನೆ ತಪ್ಪು. ಏಕೆಂದರೆ ಅವರನ್ನು

ನಿರುದ್ಯೋಗಿಯನ್ನಾಗಿಸಿದ್ದು ಈ ಯಂತ್ರವಲ್ಲ. ಯಂತ್ರವಿರುವುದು ಅವರ ಜೀವನಕ್ಕೆ ಸೌಕರ್ಯ ತರಲೆಂದು. ಹಿಂದೆ ಕಾರ್ಮಿಕನು ಅತ್ಯಂತ ಪ್ರಯಾಸಕರ ಶ್ರಮವಹಿಸಿ, ಭುಜಗಳ ಮೇಲೆ ಭಾರವಾದ ಹೊರೆ ಹೊರುತ್ತಾ, ಎಣ್ಣೆ ಜಿಗುಟು, ಕೊಳೆ ಮೆತ್ತಿಕೊಂಡು ತನ್ನ ಹೊಟ್ಟೆ ಹೊರೆದುಕೊಳ್ಳಬೇಕಿತ್ತು. ಆದರೆ ಯಂತ್ರ ಅವನು ಇದೇ ಕೆಲಸವನ್ನು ಒಂದು ಕುರ್ಚಿಯ ಮೇಲೆ ಕುಳಿತು ಕೇವಲ ಒಂದು ಗುಂಡಿಯನ್ನು ಒತ್ತುವ ಮೂಲಕ ಮಾಡುವುದನ್ನು ಸಾಧ್ಯವಾಗಿಸುತ್ತದೆ. ಯಂತ್ರ ಅವನಿಗೆ ಈ ಸೌಕರ್ಯವನ್ನು ತರಬಲ್ಲದೇ ವಿನಃ ನಿರುದ್ಯೋಗವನ್ನಲ್ಲ! ಕಾರ್ಮಿಕ ನಿರುದ್ಯೋಗಿಯಾಗಲು ಕಾರಣವೆಂದರೆ ಕ್ರೇನ್ ಮಾಲೀಕರ ಹಿತಾಸಕ್ತಿಯಲ್ಲಿ ಅವರ ಲಾಭದ ಹಿತ್ತಾಸಕ್ತಿಯಲ್ಲಿ ಬಳಕೆಯಾದದ್ದರಿಂದ. ಬಂಡವಾಳಶಾಹಿ ಉತ್ಪಾದನೆಯ ಪ್ರಮುಖ ಉದ್ದೇಶವು ಜನತೆಗೆ ಉದ್ಯೋಗ ನೀಡುವುದಲ್ಲ, ಉತ್ತಮ ಯಂತ್ರಗಳನ್ನು ಬಳಸಿ ಅವರ ಜೀವನಕ್ಕೆ ಸೌಕರ್ಯ ತರುವುದೂ ಅಲ್ಲ. ಬದಲಿಗೆ ಉತ್ಪಾದನೆಯ ವೆಚ್ಚವನ್ನು ಕಡಿತಗೊಳಿಸಿ ತನ್ಮೂಲಕ ಗರಿಷ್ಠ ಲಾಭವನ್ನು ಗಳಿಸುವುದೇ ಆಗಿದೆ. ಲಾಭವನ್ನು ಗರಿಷ್ಠವಾಗಿಸುವ ಉದ್ದೇಶದಿಂದ ಉತ್ಪಾದನೆ ನಡೆಯುವುದರಿಂದಲೇ ಎಲ್ಲಾ ಬಂಡವಾಳಶಾಹಿ ದೇಶಗಳಲ್ಲಿ ಕಾರ್ಮಿಕರು ವಜಾ (ರಿಟ್ರೆಂಚ್) ಆಗುವುದು. ಉತ್ಪಾದನೆಯು ಬಂಡವಾಳಶಾಹಿಗಳಿಗೆ ಗರಿಷ್ಠ ಲಾಭಗಳಿಸಲು ನಡೆಯದೆ ಜನತೆಯ ಅವಶ್ಯಕತೆಗಳನ್ನು ಪೂರೈಸುವ ಉದ್ದೇಶಕ್ಕಾಗಿ ನಡೆದಿದ್ದರೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ ಎಂಬುದನ್ನು ಕಾರ್ಮಿಕರು ಅರ್ಥ ಮಾಡಿಕೊಳ್ಳಲೇಬೇಕು. ಆದ್ದರಿಂದ ಯಂತ್ರಗಳ ಬಳಕೆಯನ್ನು – ನಿರ್ದಿಷ್ಟವಾಗಿ ಹೇಳಬೇಕೆಂದರೆ ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆಯನ್ನು ಬಂಡವಾಳಶಾಹಿ ಶೋಷಣೆಯಿಂದ, ಗರಿಷ್ಠ ಲಾಭಗಳಿಕೆಯ ಉದ್ದೇಶದಿಂದ ಅಥವಾ ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ಬಂಡವಾಳಶಾಹಿ ವರ್ಗದ ಕಪಿಮುಷ್ಟಿಯಿಂದ ಮುಕ್ತಗೊಳಿಸಬೇಕು. ಕಾರ್ಮಿಕರು ಇದನ್ನು ಸಾಧಿಸಲಾದರೆ, ಯಂತ್ರಗಳು ಅವರ ಜೀವನದಲ್ಲಿ ಸೌಕರ್ಯ ಮತ್ತು ಸಂತೋಷವನ್ನು ತರುತ್ತವೆ. ಯಂತ್ರಗಳು ಇಲ್ಲದಿರುವಾಗ ವಹಿಸಬೇಕಾದ ಅಮಾನವೀಯ ಶ್ರಮವನ್ನು ಯಂತ್ರಗಳ ನೆರವಿನಿಂದ ಅತಿಯಾಗಿ ತಗ್ಗಿಸಬಹುದು ಹಾಗೂ ಉತ್ಪಾದನೆಯನ್ನು ಹೆಚ್ಚಿಸಬಹುದು ಹಾಗೂ ಹೆಚ್ಚು ಆರಾಮವನ್ನು ತಂದುಕೊಳ್ಳಬಹುದು. ಯಂತ್ರಗಳು ಅವರಿಗೆ ಹೆಚ್ಚಿನ ಸೌಕರ್ಯ, ಇನ್ನೂ ಹೆಚ್ಚಿನ ತೃಪ್ತಿ ಮತ್ತು ಸಂತೋಷ ತರುತ್ತವೆ. ಆದ್ದರಿಂದ ಯಂತ್ರಗಳು ಅವರ ವೈರಿಗಳಲ್ಲ. ಅವರ ವೈರಿ ಬಂಡವಾಳವಾದ. ಸಮಾಜದ ಎಲ್ಲಾ ಸಮಸ್ಯೆಗಳ ಅಂದರೆ ಅತಿ ಉತ್ಪಾದನೆಯ ಸಮಸ್ಯೆ, ರಿಟ್ರೆಂಚ್‌ಮೆಂಟ್ ಮತ್ತು ನಿರುದ್ಯೋಗದ ಸಮಸ್ಯೆ, ಜೀವನಾವಶ್ಯಕ ಸಾಮಗ್ರಿಗಳ ಬೆಲೆ ಏರಿಕೆಯ ಸಮಸ್ಯೆ ಮುಂತಾದ ಎಲ್ಲಾ ಸಮಸ್ಯೆಗಳ ಮೂಲದಲ್ಲಿರುವುದು ಬಿಕ್ಕಟ್ಟುಪೀಡಿತ ಬಂಡವಾಳವಾದ. ಬಂಡವಾಳವಾದದ ಪ್ರಮುಖ ಉದ್ದೇಶ ಬಂಡವಾಳಶಾಹಿ ವರ್ಗಕ್ಕೆ ಲಾಭವನ್ನು ಗರಿಷ್ಠವನ್ನಾಗಿಸುವುದೇ ಆಗಿರುವುದರಿಂದ ಒಂದು ಬಂಡವಾಳಶಾಹಿ ವ್ಯವಸ್ಥೆಯಲ್ಲಿ

ಹಾಗೂ ಬಹಳೊಮ್ಮೆ ಬಂಡವಾಳಶಾಹಿ ವರ್ಗ ಅಥವಾ ಅದರಿಂದ ನಡೆಸಲ್ಪಡುವ ರಾಜ್ಯವು ಹೆಚ್ಚುವರಿ ಉತ್ಪಾದನೆಯನ್ನು ತ್ಯಜಿಸುತ್ತದೆ ಅಥವಾ ನಾಶಮಾಡುತ್ತದೆ ಹೊರತು ಬಡ ಜನತೆಗೆ ಸಾಮಗ್ರಿಗಳನ್ನು ಕಡಿಮೆ ಬೆಲೆಗೆ ಮಾರುವುದಿಲ್ಲ. ಎಷ್ಟು ವಿಚಿತ್ರ! ಒಮ್ಮೆ ಅಮೆರಿಕಾದಲ್ಲಿ ಟನ್‌ಗಟ್ಟಲೆ ಹತ್ತಿಯನ್ನು ಸಾಗರದಲ್ಲಿ ಎಸೆಯಲಾಯಿತೇ ವಿನಃ ಜನತೆಗೆ ಅದನ್ನು ಕಡಿಮೆ ಬೆಲೆಗೆ ಮಾರಲಿಲ್ಲ. ನಮ್ಮ ದೇಶದಲ್ಲೂ ಸಹ ಕಳೆದ ಮಹಾಯುದ್ಧದ ಕಾಲದಲ್ಲಿ ಅನೇಕ ಜೀಪುಗಳು ಮತ್ತು ಟ್ರಕ್‌ಗಳನ್ನು ಬೇಕಂತಲೇ ನಿರುಪಯುಕ್ತ ಸಾಮಾಗ್ರಿಯನ್ನಾಗಿಸಿ ಆ ತುಣುಕುಗಳನ್ನು ಮಾರಲಾಯಿತು. ಕೆಲವು ಅಧಿಕಾರಿಗಳು ವೈಯಕ್ತಿಕವಾಗಿ ಒಂದೆರೆಡು ಜೀಪುಗಳನ್ನು ಗುಪ್ತವಾಗಿ ಕಡಿಮೆ ಬೆಲೆಗೆ ಮಾರಿದುದು ನಿಜವಾದರೂ ಅದು ಬೇರೆಯೇ ಕತೆ. ಆದರೆ ಹೆಚ್ಚುವರಿ ಸಾಮಾಗ್ರಿಗಳನ್ನು ನಾಶಮಾಡಿದರು ಅಥವಾ ಸಾಗರಕ್ಕೆ ಎಸೆದರೇ ವಿನಃ ಅದನ್ನು ಕಡಿಮೆ ಬೆಲೆಗೆ ಮಾರುಕಟ್ಟೆಯಲ್ಲಿ ಮಾರಲಿಲ್ಲ ಏತಕ್ಕಾಗಿ? ಚಾಲ್ತಿಯಲ್ಲಿರುವ ಕೈಗಾರಿಕೆಗಳಿಗೆ ಹಾಗೂ ನಡೆಯುತ್ತಿರುವ ವ್ಯಾಪಾರಕ್ಕೆ ತೊಂದರೆ ಆಗುತ್ತದೆ ಎಂದು ಮಾರಾಟ ಮಾಡಲಿಲ್ಲ. ಬಂಡವಾಳಶಾಹಿ ವರ್ಗ ಹೀಗೆ ಮಾಡುವುದು ಶಕ್ಯವಿಲ್ಲ. ಜೀಪುಗಳನ್ನು ಕಡಿಮೆ ಬೆಲೆಗೆ ಮಾರಿದರೆ ಟಾಟಾ ಮತ್ತು ಬಿರ್ಲಾರ ಕೈಗಾರಿಕೆಗಳು ನಡೆಯುವುದು ಎಂತು? ಫೋರ್ಡ್ ಕಂಪೆನಿ ದಿವಾಳಿಯಾಗುತ್ತದೆ! ಒಂದು ಜೀಪು ಕಡಿಮೆ ಬೆಲೆಗೆ ಸಿಕ್ಕರೆ ಅದಕ್ಕೆ ಹೆಚ್ಚು ತೆತ್ತು ಕೊಳ್ಳುವವರು ಯಾರು? ಸ್ವಲ್ಪವಾದರೂ ಲಾಭ ಇಲ್ಲದೆ ಅಥವಾ ಉತ್ಪಾದನೆಯ ವೆಚ್ಚಕ್ಕೆ ಒಂದು ಲಾಭಾಂಶವನ್ನು ಸೇರಿಸದೆ ಮಾಲೀಕರು ತಮ್ಮ ಉತ್ಪನ್ನಗಳನ್ನು ಮಾರಲಾರರು. ಮಾಲೀಕರು ನಿಗದಿ ಪಡಿಸಿದ ಬೆಲೆಗೆ ಕೊಳ್ಳುವ ಅನುಕೂಲತೆ ಇರುವವರ ಬೇಡಿಕೆಗಿಂತ ಸರಕುಗಳ ಉತ್ಪಾದನೆ ಹೆಚ್ಚಾದರೆ ಅದು ಅತಿ ಉತ್ಪಾದನೆಗೆ ಎಡೆಮಾಡಿಕೊಡುತ್ತದೆ, ಹಾಗೂ ಇದರ ಪ್ರತಿಫಲವೇ ಬಿಕ್ಕಟ್ಟು. ಅವರ ಉಳಿವಿಗೇ ವಿಜ್ಞಾನದ ಮುನ್ನಡೆ ಮತ್ತು ತಂತ್ರಜ್ಞಾನದ ಬೆಳವಣಿಗೆ ಬೆದರಿಕೆಯೊಡ್ಡುವಂತಿರುವಾಗ, ಇನ್ನೂ ಹೆಚ್ಚು ಹೆಚ್ಚು ಉತ್ಪಾದನೆಗಾಗಿ ಅವರು ವಿಜ್ಞಾನ–ತಂತ್ರಜ್ಞಾನದ ಬೆಳವಣಿಗೆಯನ್ನು ಮುಂದುವರಿಸುವುದಾದರೂ ಹೇಗೆ ಸಾಧ್ಯ? ಆದ್ದರಿಂದಲೇ ಅವರು ಉತ್ಪಾದನೆಯನ್ನು ಹೆಚ್ಚಿಸಲು ಅಣುಶಕ್ತಿಯನ್ನು ಬಳಸುವುದು ಸಾಧ್ಯವಿಲ್ಲ. ವಿದ್ಯುಚ್ಛಕ್ತಿಯ ಬಳಕೆಯೊಂದೇ ಅತಿಉತ್ಪಾದನೆಯ ಬಿಕ್ಕಟ್ಟನ್ನು ತರುತ್ತಿರುವಾಗ ತನ್ನ ಬಳಕೆಯಿಂದ ಬೃಹತ್ ಪ್ರಮಾದವನ್ನೇ ತರಲಿರುವ ಅಣುಶಕ್ತಿಯನ್ನು ಅವರು ಬಳಸುವುದಾದರೂ ಹೇಗೆ ಸಾಧ್ಯ? ಆದ್ದರಿಂದಲೇ ಅವರು ಎಲ್ಲೆಡೆ ವಿದ್ಯುತ್‌ಶಕ್ತಿಯನ್ನು ಸಹ ಬಳಸುತ್ತಿಲ್ಲ ಬದಲಿಗೆ ಕಲ್ಲಿದ್ದಲು ಅಥವಾ ಇಂತಹುದೇ ಬೇರೆ ಇಂಧನವನ್ನು ಬಳಸುವ ಹಂತಕ್ಕೆ ಹಿಂದಿರುಗುತ್ತಿದ್ದಾರೆ. ಅಂದರೆ ಅವರು ವಿದ್ಯುತ್ ಶಕ್ತಿಯ ಸಂಪೂರ್ಣ ಉಪಯೋಗವನ್ನು ಸಹ ಮಾಡುತ್ತಿಲ್ಲ. ಏಕೆಂದರೆ ಅವರು ಹಾಗೆ ಮಾಡಿದರೆ ಆಗ ಉತ್ಪಾದನಾ ಶಕ್ತಿ ಎಷ್ಟು ಹೆಚ್ಚುತ್ತದೆ ಎಂದರೆ ಉತ್ಪಾದನೆ ಮಾರುಕಟ್ಟೆಯಲ್ಲಿನ ಬೇಡಿಕೆಯನ್ನು ಎಷ್ಟೋಪಾಲು ಮೀರಿ

ಹೋಗುತ್ತದೆ. ಬಂಡವಾಳವಾದ ಜನಸಾಮಾನ್ಯರ ರಕ್ತ ಹೀರಿಬಿಟ್ಟಿದೆ. ಆದ್ದರಿಂದ ಅವಶ್ಯಕ ಕೊಳ್ಳುವ ಶಕ್ತಿ ಉಳ್ಳವರು ಅಂದರೆ ಮಾರುಕಟ್ಟೆ ಬೆಲೆಗೆ ಸಾಮಾಗ್ರಿಗಳನ್ನು ಕೊಳ್ಳುವ ಸಾಮರ್ಥ್ಯವುಳ್ಳ ಜನ ಕೆಲವೇ ಕೆಲವರು ಇದ್ದಾರೆ. ಮಾನವ ಶಕ್ತಿಗೆ ಕೊರತೆಯಿಲ್ಲ, ಅವಶ್ಯಕತೆಗಳಿಗೆ ಸೀಮೆಯಿಲ್ಲ, ಕೊರತೆಯಿರುವುದೆಂದರೆ ಜನತೆಯ ಕೊಳ್ಳುವ ಶಕ್ತಿಯೊಂದೇ. ಇದನ್ನೇ ನಾವು ಬಂಡವಾಳವಾದದ ಮೊದಲ ಪ್ರಮುಖ ಸಮಸ್ಯೆಯೆನ್ನುವುದು.

ಎರಡನೇ ಸಮಸ್ಯೆಯೆಂದರೆ ಲಾಭನಷ್ಟಗಳ ತರ್ಕಬದ್ಧಗೊಳಿಸುವಿಕೆ (rationalization)ಯ ಸಮಸ್ಯೆ. ಮಾಲೀಕರು ಲಾಭ ಗಳಿಸುವ ದೃಷ್ಟಿಯಿಂದ ಗಿರಣಿ ಮತ್ತು ಕಾರ್ಖಾನೆಗಳನ್ನು ನಡೆಸುತ್ತಾರೆ. ಖಂಡಿತ ಅವರು ಯಾವುದೇ ಔದಾರ್ಯದ ಉದ್ದೇಶದಿಂದ– ಜೀವನೋಪಾಯಕ್ಕಾಗಿ ಉದ್ಯೋಗ ನೀಡಲು, ಹಾಗೂ ನಿರುದ್ಯೋಗದ ಸಮಸ್ಯೆಗೆ ಕೊನೆಹಾಕಲು–ಇದನ್ನು ಮಾಡುವುದಿಲ್ಲ. ಲಾಭಗಳಿಸುವ ದೃಷ್ಟಿಯಿಂದ ಅವರು ಕೈಗಾರಿಕೆಗಳ ಒಡೆಯರಾಗಿದ್ದಾರೆ. ಹೊಸ ಯಂತ್ರದ ಅಳವಡಿಕೆಯಿಂದ ವೆಚ್ಚವು ತಗ್ಗಿ ಹೆಚ್ಚು ಗಳಿಸಲು ನೆರವಾಗುತ್ತದೆ ಎಂದವರು ಕಂಡುಕೊಂಡರೆ ಅವರು ಅವಶ್ಯಕತೆಗಿಂತ ಹೆಚ್ಚಿನ ಕಾರ್ಮಿಕರನ್ನು ಕೆಲಸಕ್ಕಿರಿಸಿಕೊಳ್ಳುವುದಿಲ್ಲ. ತತ್ಪರಿಣಾಮವಾಗಿ ನಿರುದ್ಯೋಗ ಇನ್ನಷ್ಟು ಉಲ್ಬಣಿಸುತ್ತದೆ ಲಾಭನಷ್ಟಗಳ ತರ್ಕಬದ್ಧಗೊಳಿಸುವಿಕೆ (rationalization)ಯ ಈ ಕ್ರಮ ಕಾರ್ಮಿಕರ ವಜಾಗೊಳಿಸುವಿಕೆಗೆ (ರಿಟ್ರೆಂಚ್‌ಮೆಂಟ್) ಎಡೆಮಾಡಿಕೊಡುತ್ತದೆ. ಸಹಜವಾಗಿ ಚಳುವಳಿಗಳು ಪ್ರಾರಂಭವಾಗುತ್ತವೆ ಹಾಗೂ ಕಾರ್ಮಿಕರ ಬೇಡಿಕೆಗಳನ್ನು ಎತ್ತಿಹಿಡಿಯುವ ಘೋಷಣೆಗಳು ಏಳುತ್ತವೆ. ಇದು ಸ್ವಯಂವೇದ್ಯ. ಬರಿಯ ಭಾಷಣಗಳನ್ನು ಉಣಿಸಿ ಎಷ್ಟು ದಿನ ಜನತೆಯನ್ನು ಉಪವಾಸ ಕೆಡವಲು ಸಾಧ್ಯ? ಇದು ಬಂಡವಾಳಶಾಹಿ ವರ್ಗ ಮತ್ತವರ ಸರ್ಕಾರದ ಮುಂದಿರುವ ಸಮಸ್ಯೆಯಂತೂ ಹೌದು. ಈ ಕೋನದಿಂದ ತೀರ್ಮಾನಿಸಿದರೆ ವಿಜ್ಞಾನ ಅವರಿಗೊಂದು ಶಾಪವೆಂದು ಬೇರೆ ಹೇಳಬೇಕಿಲ್ಲ. ಆದ್ದರಿಂದ ಸಮಾಜದಲ್ಲಿ ಇನ್ನೂ ಏನು ಅಲ್ಪ ಸ್ವಲ್ಪ ವಿಜ್ಞಾನದ ಶೋಧವಿದೆ ಅದನ್ನು ಲಾಭಕ್ಕಾಗಿ ಮತ್ತು ಬಂಡವಾಳಶಾಹಿ ವರ್ಗ ಶೋಷಣೆಯ ಹಿತಾಸಕ್ತಿಗಾಗಿ ಬಳಸಲಾಗುತ್ತದೆ.

ನಾವು ಪ್ರತಿಪಾದಿಸುತ್ತಿರುವ ಸಮಾಜವಾದಿ ಕ್ರಾಂತಿ ಅಥವಾ ಬಂಡವಾಳಶಾಹಿ ರಾಜ್ಯ ಯಂತ್ರದ ಕ್ರಾಂತಿಕಾರಿ ಕಿತ್ತೊಗೆತ ಎಂದರೇನು? ಹಾಗೆಂದರೆ ವಿಮುಕ್ತಿ–ಬಂಡವಾಳಶಾಹಿ ವರ್ಗದ ಶೋಷಣೆ ಮತ್ತು ದಬ್ಬಾಳಿಕೆಯಿಂದ ಕಾರ್ಮಿಕರು ಮತ್ತು ಶ್ರಮಿಕ ಜನತೆಯ ವಿಮುಕ್ತಿ, ಬಂಡವಾಳಶಾಹಿಗಳ ಲಾಭೋದ್ದೇಶದಿಂದ ಕಲೆ, ವಿಜ್ಞಾನ, ಸಾಹಿತ್ಯ ಇತ್ಯಾದಿಗಳ ವಿಮುಕ್ತಿ, ಕಡೆಯದಾದರೂ ಕಡೆಗಣಿಸಲಾಗದುದೆಂದರೆ ಪುರುಷಪ್ರಧಾನ ಪ್ರಾಬಲ್ಯತೆ ಮತ್ತು ದಬ್ಬಾಳಿಕೆಯಿಂದ ಮಹಿಳೆಯರ ವಿಮುಕ್ತಿ. ಎಲ್ಲರನ್ನೂ ಎಲ್ಲಾ ತರದ ಬಂಧನ ಮತ್ತು

ಶೋಷಣೆಯಿಂದ ವಿಮುಕ್ತಿಗೊಳಿಸುವುದು ನಮ್ಮ ಅವಶ್ಯಕತೆ. ಮಹಿಳೆಯರಿಗೆ ಕುಟುಂಬ ಜೀವನದ ಬಂಧನ ಮತ್ತು ದಾಸ್ಯದಿಂದ ಬಿಡುಗಡೆ ಬೇಕು. ಈಗ ಏನೋ ಒಂದು ರೀತಿಯ ಶ್ರಮ ವಿಭಜನೆ ಇದೆ. ಮಹಿಳೆಯರು ಗೃಹಕೃತ್ಯಗಳಲ್ಲಿ ತೊಡಗಿರುತ್ತಾರೆ ಹಾಗೂ ಪುರುಷರು ಸಂಪಾದಿಸುತ್ತಾರೆ. ಇಂದು ನಮ್ಮ ದೇಶದಲ್ಲಿ ಶ್ರಮ ವಿಭಜನೆ ಈ ರೀತಿ ಆಗಿಹೋಗಿದೆ. ಜೀವನ ಮತ್ತು ಸಮಾಜದಲ್ಲಿ ವಿಜ್ಞಾನ ಒದಗಿಸಿರುವ ಆಧುನಿಕ ಸೌಲಭ್ಯಗಳನ್ನು ಬಳಸಿಕೊಂಡು ಕುಟುಂಬಗಳನ್ನು ಹೊಸದಾಗಿ ಯೋಜಿಸಬಹುದು. ಮಹಿಳೆಯರು ಸಹ ಸಂಪಾದಿಸಲು ತೊಡಗುವ ದಿನವೊಂದು ಬರಬಹುದು ಮತ್ತು ಸಹಜವಾಗಿ ಗೃಹಕೃತ್ಯಗಳಿಂದ ಹಿಡಿದು ಮಕ್ಕಳನ್ನು ನೋಡಿಕೊಳ್ಳುವ ಹಾಗೂ ಅವರನ್ನು ಶಿಶುವಿಹಾರಗಳಲ್ಲಿ ಬೆಳೆಸುವ ಕೆಲಸಗಳವರೆಗೆ, ಎಲ್ಲವನ್ನೂ ಪುರುಷ, ಮಹಿಳೆಯರಿಬ್ಬರೂ ಸಮಾನವಾಗಿ ಹಂಚಿಕೊಳ್ಳಬೇಕಾಗುತ್ತದೆ. ಆಗ ಮಾತ್ರವೇ ಮಹಿಳೆಯರು ಕುಟುಂಬ ಜೀವನದ ದಾಸ್ಯ ಮತ್ತು ಬಂಧನದಿಂದ ಬಿಡುಗಡೆ ಹೊಂದಲು ಸಾಧ್ಯ. ಆದರೀಗ ಇವೆಲ್ಲಾ ಆಗದ ಮಾತು. ಮತ್ತಿನ್ನೇನು? ಆರ್ಥಿಕ ದಬ್ಬಾಳಿಕೆ ಮತ್ತು ಪುರುಷರ ದಬ್ಬಾಳಿಕೆಯಿಂದ ಮಹಿಳೆಯರ ವಿಮುಕ್ತಿ ಆಗಬೇಕಾಗಿದೆ. ಪರಸ್ಪರ ಗೌರವ ಮತ್ತು ಪ್ರೇಮದ ಸ್ವಾತಂತ್ರ್ಯದ ಮೇಲೆ ಪುರುಷ ಮತ್ತು ಮಹಿಳೆಯರ ನಡುವಣ ವಿನೂತನ ಸಂಬಂಧ ಮತ್ತು ಸಮಾನ ಹಕ್ಕುಗಳ ಆಧಾರದ ಮೇಲೆ ಸಮಾಜವನ್ನು ಸ್ಥಾಪಿಸಲು ಮಹಿಳೆಯರ ವಿಮುಕ್ತಿ ಅನಿವಾರ್ಯ.

ಆದ್ದರಿಂದಲೇ ನಾನು ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಶೋಷಣೆಯಿಂದ ಕಾರ್ಮಿಕರು, ರೈತರು ಮತ್ತು ಶ್ರಮಿಕ ಜನತೆಯ ಇತರ ವರ್ಗಗಳಿಗೆ ವಿಮುಕ್ತಿಯ ಅವಶ್ಯಕತೆ ಇದೆಯೆಂದು ಹೇಳುತ್ತಿರುವುದು. ವಿಜ್ಞಾನವು ಬಂಡವಾಳದ ಆಳ್ವಿಕೆಯಿಂದ ವಿಮುಕ್ತಿಯನ್ನು ಬಯಸುತ್ತದೆ. ಸಮಾಜವಾದಕ್ಕಾಗಿಯ–ಸರ್ವವ್ಯಾಪಿ ವಿಮುಕ್ತಿಗಾಗಿಯ, ಎಲ್ಲರ ವಿಮುಕ್ತಿಗಾಗಿಯ ಈ ಹೋರಾಟವನ್ನು ಕಟ್ಟುವುದೇ ನಮ್ಮ ಧ್ಯೇಯ. ಆದ್ದರಿಂದ ಸಮಾಜವಾದವನ್ನು ಸ್ಥಾಪಿಸುವ ಸಲುವಾಗಿಯ ಹೋರಾಟ ಬರಿಯ ಕಾರ್ಮಿಕರ ಮತ್ತು ರೈತರ ಹೋರಾಟವಾಗಿರದೆ ಅದು ಮಹಿಳೆಯರ ಹೋರಾಟವೂ ಹೌದು, ಅದು ಶ್ರಮಿಕ ಜನತೆಯ ಎಲ್ಲಾ ವಿಭಾಗಗಳ ಒಂದು ಹೋರಾಟ. ಸಮಾಜವಾದವನ್ನು ಸ್ಥಾಪಿಸುವ ಸಲುವಾಗಿಯ ಹೋರಾಟ. ಬಂಡವಾಳವಾದದ ಬಂಧನದಿಂದ ವಿಜ್ಞಾನವನ್ನು ಮುಕ್ತಗೊಳಿಸಿ ಅದನ್ನು ಮಾನವತೆಯ ಒಳಿತಿಗಾಗಿ ಬಳಸುವ ಹೋರಾಟ. ಆದರೆ ಮಾಲೀಕ ವರ್ಗ, ಪಟ್ಟಭದ್ರ ಹಿತಾಸಕ್ತಿಗಳು ಸಮಾಜದ ಪ್ರಗತಿಗೆ ಅಡ್ಡಿ ಒಡ್ಡುತ್ತವೆ. ಏಕೆಂದರೆ ಇಂದವರು ಮಾಡುತ್ತಿರುವಂತೆ, ಉಳಿದವರನ್ನು ವಂಚಿಸಿ ಸಮಾಜದ ಎಲ್ಲಾ ಸಂಪತ್ತನ್ನು ದೋಚಿಕೊಂಡು ಸಾಕಷ್ಟು ಸುಖಪಡಬಹುದು ಹಾಗೂ ವಿಲಾಸದ ಜೀವನ ನಡೆಸಬಹುದು. ಅಂಥ ಅವರು ಒಂದು ಹೊಸ ಸಮಾಜವನ್ನು ಆಕಾಂಕ್ಷಿಸುವುದಾದರೂ ಹೇಗೆ? ಆದರೆ ವಂಚಿತರಾದವರು, ಅಪಮಾನಕ್ಕೊಳಗಾದವರು, ಹಸಿವಿನ ವೇದನೆ ಬಲ್ಲವರು,

ಈ ಸಾಮಾಜಿಕ ವ್ಯವಸ್ಥೆಯನ್ನು ಕಿತ್ತೊಗೆಯುವ ಮಹತ್ತರ ಅವಶ್ಯಕತೆಯನ್ನು ಅರಿಯುವವರು ಅವರೇ.

## ಸತ್ಯವನ್ನು ಅರಿಯುವ ಹೆಚ್ಚಿನ ಅವಶ್ಯಕತೆ ಇರುವುದು ಕಾರ್ಮಿಕ ವರ್ಗಕ್ಕೆ

ನಾವಿಂದು ಬಂಡವಾಳಶಾಹಿ ಸಮಾಜದಲ್ಲಿ ಕಾಣುತ್ತಿರುವುದೇನು? ಗರಿಷ್ಠ ಲಾಭಗಳಿಕೆಯ ಉದ್ದೇಶದ ಬಂಡವಾಳಶಾಹಿ ಶೋಷಣೆಯಿಂದ ವಿಜ್ಞಾನ ಮತ್ತು ಉತ್ಪಾದನಾ ವ್ಯವಸ್ಥೆಯನ್ನು ಮುಕ್ತಗೊಳಿಸಲು ಹಾಗೂ ಅದನ್ನು ಸಾಮಾಜಿಕ ಅವಶ್ಯಕತೆಯನ್ನು ಪೂರೈಸಲು ಬಳಸಲು ಬಂಡವಾಳವಾದದ ವಿರುದ್ಧ ಕಾರ್ಮಿಕರ, ರೈತರ ಹಾಗೂ ಕೆಳ ಮಧ್ಯಮವರ್ಗದ ಜನತೆಯ ಚಳುವಳಿಗಳು ಬಲ ಪಡೆದು ವೃದ್ಧಿಯಾಗುತ್ತಿವೆ. ಕಾರ್ಮಿಕ ವರ್ಗ ಅಂದರೆ ಲಕ್ಷಾಂತರ ಶ್ರಮಿಕ ಜನತೆ ಉತ್ಪಾದನಾ ವ್ಯವಸ್ಥೆಯ ಮೇಲೆ ಖಾಸಗಿ ಮಾಲೀಕತ್ವದ ಬದಲಿಗೆ ಸಾಮಾಜಿಕ ಮಾಲೀಕತ್ವವನ್ನು ಸ್ಥಾಪಿಸುವಲ್ಲಿ ನಿರತರಾಗಿದ್ದಾರೆ. ಅದಕ್ಕಾಗಿಯೇ ಅವರು ಪ್ರಸ್ತುತ ವ್ಯವಸ್ಥೆಯನ್ನು ಛಿದ್ರಗೊಳಿಸಲು ಬಯಸುತ್ತಾರೆ. ಆದರೆ ವಿಜ್ಞಾನ ಇದುವರೆಗೂ ಅನಾವರಣಗೊಳಿಸಿರುವ ಸತ್ಯವೆಂದರೆ, ವಿಜ್ಞಾನ ಮತ್ತು ಉತ್ಪಾದನಾ ವ್ಯವಸ್ಥೆಯ ಅನಿರ್ಬಂಧಿತ ಬೆಳವಣಿಗೆಗೆ ಪ್ರಸಕ್ತ ವ್ಯವಸ್ಥೆಯು ಅಸಮರ್ಪಕವಾಗಿದ್ದು, ಅದನ್ನು ಕಿತ್ತೊಗೆದು ಅದರ ಸ್ಥಾನದಲ್ಲಿ ಹೊಸತೊಂದನ್ನು ಕಟ್ಟುವ ಅವಶ್ಯಕತೆ ಉಂಟಾಗಿದೆ. ಅದಕ್ಕಾಗಿಯೆ ಅವರು ವಿಶ್ವವನ್ನು ಇನ್ನೂ ಹೆಚ್ಚು ಹೆಚ್ಚಾಗಿ ಅರಿತುಕೊಳ್ಳಲು ವಿಜ್ಞಾನದ ಅನಿರ್ಬಂಧಿತ ಬೆಳವಣಿಗೆಯ ಪರವಾಗಿ ನಿಲ್ಲುತ್ತಾರೆ. ಆಳವಾದ ಸತ್ಯ ಶೋಧನೆಯಲ್ಲಿ ತೊಡಗುತ್ತಾರೆ. ಮತ್ತು ಜ್ಞಾನದ ಅನ್ವೇಷಣೆ ಮಾಡುತ್ತಾರೆ. ಸತ್ಯದ ಹೆಚ್ಚು ಹೆಚ್ಚಿನ ಅನಾವರಣಕ್ಕಾಗಿ ವಿಜ್ಞಾನದ ನಿರಂತರ ಪ್ರಗತಿ ಸಾಗಲಿ, ಅದರಿಂದ ವಿಫುಲ ಉತ್ಪಾದನೆ ನಡೆಯಲಿ, ಜನತೆ ತಮ್ಮ ಅಗತ್ಯಗಳನ್ನು ಹೆಚ್ಚೆಚ್ಚು ಅನುಭವಿಸಲಿ ಹಾಗೂ ತೃಪ್ತಿ ಪಡೆಯಲಿ, ವಿಜ್ಞಾನದ ಕೊಡುಗೆ ಮನೆ ಮನೆಯನ್ನೂ ತಲುಪಲಿ–ಇದೇ ಕಾರ್ಮಿಕವರ್ಗದ ಹಂಬಲ ಮತ್ತು ಕರೆ. ಒಂದು ಸಮಾಜವಾದಿ ಸಮಾಜದಲ್ಲಿ ಉತ್ಪಾದನೆ ಲಾಭೋದ್ದೇಶದಿಂದ ಅಥವಾ ಮಾಲೀಕವರ್ಗ ಹಿತಾಸಕ್ತಿಯನ್ನು ಪೂರ್ಣಗೊಳಿಸುವ ಉದ್ದೇಶದಿಂದ ಮುಕ್ತವಾಗಿರುವುದರಿಂದ ಅಲ್ಲಿ ಹೆಚ್ಚುವರಿ ಉತ್ಪಾದನೆ ಇರುವುದಿಲ್ಲ. ಆದ್ದರಿಂದ ಅವರಿಗೆ ವಿಜ್ಞಾನದ ಪ್ರಗತಿಯನ್ನು ತಡೆಯುವ ಅವಶ್ಯಕತೆ ಇರುವುದಿಲ್ಲ. ಅದಕ್ಕಾಗಿಯೇ ಕಾರ್ಮಿಕವರ್ಗ ವಿಜ್ಞಾನವನ್ನು ಬಂಡವಾಳಶಾಹಿಯ ಕಪಿಮುಷ್ಟಿ ಮತ್ತು ಕಬಂಧಬಾಹುಗಳಿಂದ ಸಂಪೂರ್ಣವಾಗಿ ಮುಕ್ತಗೊಳಿಸಲು ಬಯಸುತ್ತದೆ. ಆದರೆ ಇದಕ್ಕಾಗಿ ಹೆಚ್ಚಾಗಿ ಕಷ್ಟಪಡಬೇಕಾದದ್ದು ಕಾರ್ಮಿಕವರ್ಗವೇ. ಅಸತ್ಯವನ್ನು ಅತಿಯಾಗಿ ದ್ವೇಷಿಸುವುದು ಮತ್ತು ಸತ್ಯವನ್ನು ಹೆಚ್ಚಾಗಿ ಪ್ರೀತಿಸುವುದು ಇದೇ ಕಾರ್ಮಿಕವರ್ಗವೇ. ಕಾರ್ಮಿಕರ, ಶ್ರಮಿಕ ಜೀವಿಗಳ ಸತ್ಯದ ಹಂಬಲ ಮತ್ತು ಜ್ಞಾನದಾಹ ಎಲ್ಲರಿಗಿಂತ ಹೆಚ್ಚು. ಏಕೆಂದರೆ ಜ್ಞಾನರಹಿತವಾಗಿ, ಈ

ಅಸ್ತ್ರವಿಲ್ಲದೆ, ಮಾನವ ಅಜ್ಞಾತವಾದುದರ ಬಗ್ಗೆ ಬೆಳಕು ಚೆಲ್ಲಲಾರ, ಅದನ್ನು ಅನಾವರಣಗೊಳಿಸಲಾರ. ಸಾಮಾಜಿಕ-ಆರ್ಥಿಕ ಸಮಸ್ಯೆಗಳ ಬಗೆಗಿನ ಎಲ್ಲಾ ಮಿಥ್ಯೆಗಳನ್ನು ನಿಗೂಢವನ್ನು, ಸಮಾಜದಲ್ಲಿ ಬಂಡವಾಳಶಾಹಿ ವರ್ಗ ಹೆಣೆದ ಗೊಂದಲಮಯ ಜಾಲ ಮತ್ತು ಕುತಂತ್ರಗಳನ್ನು ಜ್ಞಾನದ ನೆರವಿನಿಂದ ಮಾತ್ರ ಬೆಳಕಿಗೆ ತರುವುದು ಸಾಧ್ಯ. ಕಾರ್ಮಿಕವರ್ಗ ಜ್ಞಾನದ ಹಣತೆಯನ್ನು ಬೆಳಗಿಸಬೇಕಾಗುತ್ತದೆ ಮತ್ತು ಈ ಹಣತೆಯನ್ನು, ಜ್ಞಾನದ ಜ್ಯೋತಿಯನ್ನು ಉರಿಸುವುದು ವಿಜ್ಞಾನ, ವಿಜ್ಞಾನವೊಂದೇ. ಆದ್ದರಿಂದ ಇಂದಿನ ಜಗತ್ತಿನಲ್ಲಿ ವಿಜ್ಞಾನದ ನೈಜ ಉಪಾಸಕರು ಕಾರ್ಮಿಕರಲ್ಲದೆ, ಬೂರ್ಜ್ವಾಜಿಗಳಲ್ಲ. ಬೂರ್ಜ್ವಾಜಿಗಳು ತಮ್ಮ ಉತ್ತುಂಗದ ಕಾಲದಲ್ಲಿ ಇದ್ದಿದ್ದಕ್ಕಿಂತ ಹೆಚ್ಚಾಗಿ, ಇಂದಿನ ಕಾರ್ಮಿಕರು ವಿಜ್ಞಾನದ ಪ್ರೇಮಿಗಳಾಗಿದ್ದಾರೆ. ಈ ವಿಜ್ಞಾನವು ಕೇವಲ ತಂತ್ರಜ್ಞಾನದ ಅಂಶಗಳಲ್ಲ. ಬದಲಿಗೆ ಅದು ಜ್ಞಾನಶಾಸ್ತ್ರ (epistemology), ಮನುಷ್ಯನ ಚಿಂತನಾ ಸಾಮರ್ಥ್ಯ, ಮನೋಧರ್ಮ ಮತ್ತು ದೃಷ್ಟಿಕೋನಗಳಿಗೆ ಒತ್ತುಕೊಡುತ್ತದೆ. ಏಕೆಂದರೆ ಕಾರ್ಮಿಕವರ್ಗದ ಮನೋಧರ್ಮ ಮತ್ತು ದೃಷ್ಟಿಕೋನಗಳು ವೈಜ್ಞಾನಿಕ ವಾದುವುಗಳಾಗಿವೆ. ಇದಕ್ಕೆ ವ್ಯತಿರಿಕ್ತವಾಗಿ ಮೊದಲ ಹಂತದಲ್ಲಿ ಬೂರ್ಜ್ವಾಜಿಯ ಮನೋಧರ್ಮವು ಭಾವನಾವಾದಿ ಚಿಂತನೆಯನ್ನಾಧರಿಸಿ ಮುನ್ನಡೆಸಲ್ಪಟ್ಟ ಸಮಾಜದ ಮೇಲ್‌ರಚನೆಯಲ್ಲಿ ಬೆಳೆಯಿತು ಹಾಗೂ ಅವರ ವಿಜ್ಞಾನ ಪ್ರಪಂಚವೂ ಅದರ ಆಧಾರದಲ್ಲೇ ಬೆಳೆಯಬೇಕಾಯಿತು. ಆಧುನಿಕ ವಿಜ್ಞಾನದ ಅನ್ವೇಷಣೆಯ ನಮ್ಮ ಹಂಬಲ, ನಮ್ಮ ಕಾತರ ಜೀವನದ ಇಂದಿನ ವಸ್ತು ಪರಿಸ್ಥಿತಿ ಮತ್ತು ವಾಸ್ತವಿಕತೆಯಲ್ಲಿ ಬೆಳೆದಿದೆ. ತತ್ಪರಿಣಾಮವಾಗಿ ನಮಗೆ, ಅಂದರೆ ಕಾರ್ಮಿಕರಿಗೆ ವಸ್ತುವಾದಿ ಚಿಂತನೆ ಇನ್ನೂ ಮುಂದಕ್ಕೆ ಪ್ರಗತಿ ಹೊಂದಿದ್ದು ಇನ್ನೂ ಹೆಚ್ಚಿನ ಪರಿಪೂರ್ಣತೆಯನ್ನು ತಲುಪಿದೆ. ಮಾರ್ಕ್ಸ್‌ವಾದದ ತಾತ್ವಿಕ ಆಧಾರವಾದ ದ್ವಂದ್ವಾತ್ಮಕ ವಸ್ತುವಾದವು ಭಾವನಾವಾದಿ ತತ್ವಜ್ಞಾನದ ಪ್ರಭಾವದಿಂದ ಮುಕ್ತವಾಗಿ ಬೆಳೆದಿದೆ.

## ಮಾರ್ಕ್ಸ್‌ವಾದ ಮಾತ್ರವೇ ಏಕೈಕ ನೈಜ ವಸ್ತುವಾದಿ ತತ್ವಜ್ಞಾನವಾಗಿದೆ

ಆದ್ದರಿಂದ ಕೇವಲ ಮಾರ್ಕ್ಸ್‌ವಾದ ಮಾತ್ರವೇ ವಿಶ್ವದಲ್ಲಿನ ವಸ್ತುವಾದಿ ತತ್ವಜ್ಞಾನವಲ್ಲ ಎಂಬ ಅಂಶ ಸ್ಪಷ್ಟವಾಗಿದೆ. ಮಾರ್ಕ್ಸ್‌ವಾದದ ಹೊರತಾಗಿ ಇತರ ಅನೇಕ ವಸ್ತುವಾದಿ ತತ್ವಜ್ಞಾನಗಳು ಯುರೋಪು ಮಾತ್ರವಲ್ಲ ನಮ್ಮ ದೇಶದಲ್ಲೂ ಕಾಣಿಸಿಕೊಂಡವು. ಆದರೆ ದ್ವಂದ್ವಾತ್ಮಕ ವಸ್ತುವಾದ ಮತ್ತು ಇತರೆ ವಸ್ತುವಾದಿ ತತ್ವಜ್ಞಾನಗಳ ನಡುವೆ ಒಂದು ಮೂಲಭೂತ ಅಂತರವಿದೆ. ಮಾರ್ಕ್ಸ್‌ವಾದದ ಹೊರತಾಗಿ ಇನ್ಯಾವುದೇ ಇತರ ವಸ್ತುವಾದಿ ತತ್ವಜ್ಞಾನವು ಭಾವನಾವಾದದ ಪ್ರಭಾವದಿಂದ ಮುಕ್ತವಾಗಿಲ್ಲ. ಇವುಗಳ ಮೂಲ ಸಿದ್ಧಾಂತ, ಮೂಲ ಚಿಂತನಾ ಪ್ರಕ್ರಿಯೆ ಅಥವಾ ರಚನೆ ವಸ್ತುವಾದಿಯಾಗಿದ್ದರೂ ಇವು ಭಾವನಾವಾದದ ಪ್ರಭಾವದಿಂದ ಸಂಪೂರ್ಣವಾಗಿ ಮುಕ್ತವಾಗಿರುವುದು ಸಾಧ್ಯವಾಗಲಿಲ್ಲ. ಈ ತತ್ವಜ್ಞಾನಗಳಿಗೆ ಈ ವಸ್ತುವಾದಿ ವಿಶ್ವದ ವೈಜ್ಞಾನಿಕ

ನಿಯಮಗಳು ಮತ್ತು ನಿಗೂಢತೆಗಳನ್ನು ಸರಿಯಾಗಿ ಅರಿಯುವುದು ಸಾಧ್ಯವಾಗಲಿಲ್ಲ. ಇವುಗಳನ್ನು ತಿಳಿಯುವುದು ಈ ಸಿದ್ಧಾಂತಗಳಿಗೆ ಯಾಕೆ ಸಾಧ್ಯವಾಗಲಿಲ್ಲವೆಂದರೆ ಈ ನಿಯಮಗಳನ್ನು ತಿಳಿಯಲು ಮಾನವನಿಗೆ ಸಾಧ್ಯವಾಗುವಂತಹ ಹಂತಕ್ಕೆ ಆ ದಿನಗಳಲ್ಲಿ ವಿಜ್ಞಾನ ಬೆಳೆದಿರಲಿಲ್ಲ. ವಿಜ್ಞಾನದ ಬೆಳವಣಿಗೆಯು ಒಂದು ನಿರ್ದಿಷ್ಟ ಹಂತವನ್ನು ತಲುಪುವವರೆಗೆ ಓರ್ವ ಮೇಧಾವಿಗೂ ಸಹ ವಸ್ತುವಾದಿ ವಿಶ್ವದ ಬೆಳವಣಿಗೆಯ ಸಾಮಾನ್ಯ ನಿಯಮಗಳನ್ನು ತಿಳಿಯುವುದು ಸಹ ಶಕ್ಯವಿರಲಿಲ್ಲ. ಈ ಕಾರ್ಯ ಸಾಧಿಸುವುದು ಮಾರ್ಕ್ಸ್‌ರವರಿಗೆ ಮಾತ್ರ ಸಾಧ್ಯವಾದದ್ದು ಏಕೆಂದರೆ ಅವರಿಗಿಂತ ಮುಂಚೆ ಅವರ ಮಟ್ಟದ ಮೇಧಾವಿ ಈ ಪ್ರಪಂಚದಲ್ಲಿ ಹುಟ್ಟಿರಲಿಲ್ಲ ಎಂದರೆ ತಪ್ಪಾಗುತ್ತದೆ. ಇದು ತರ್ಕಬದ್ಧವಲ್ಲ. ಅಂದಿನ ಪ್ರಜಾತಾಂತ್ರಿಕ ಚಿಂತನೆ ಮತ್ತು ವಿಚಾರಗಳು, ಬೂರ್ಜ್ವಾಜಿಗಳ ಮಾನವತಾವಾದಿ ಚಿಂತನೆಗಳೊಂದಿಗೆ ಕಾರ್ಮಿಕವರ್ಗದ ಹುಟ್ಟು, ವಿಜ್ಞಾನದ ಬೆಳವಣಿಗೆ, ಇವು ಮಾರ್ಕ್ಸ್‌ವಾದಿ ತತ್ವಜ್ಞಾನದ ಹೊರಹೊಮ್ಮುವಿಕೆಗೆ ದಾರಿ ಮಾಡಿಕೊಟ್ಟವು ಎಂಬುದು ಸುಸ್ಪಷ್ಟವಾಗಿದೆ. ಮಾರ್ಕ್ಸ್‌ವಾದ ಅಥವಾ ದ್ವಂದ್ವಾತ್ಮಕ ವಸ್ತುವಾದ ಅಸ್ತಿತ್ವಕ್ಕೆ ಬಂದುದು ಈ ಹಿನ್ನೆಲೆಯಲ್ಲಿ.

ಮಾರ್ಕ್ಸ್‌ವಾದದ ಹೊರತಾಗಿ ಮಿಕ್ಕೆಲ್ಲಾ ವಸ್ತುವಾದಿ ತತ್ವಜ್ಞಾನಗಳು ಒಂದು ಅರ್ಥದಲ್ಲಿ ಭಾವನಾವಾದಗಳೇ ಆಗಿವೆ ಎಂದು ಈ ಹಿಂದೆಯೇ ನಾನು ಹೇಳಿದ್ದೇನೆ. ಏಕೆ? ಮಿಕ್ಕೆಲ್ಲಾ ವಸ್ತುವಾದಿ ತತ್ವಜ್ಞಾನಗಳು ಒಂದು ಅರ್ಥದಲ್ಲಿ ವಸ್ತುವಾದಿಯಾಗಿದ್ದರೂ ಸತ್ಯವನ್ನು ಸಮಗ್ರವಾಗಿ ಅರಿಯಲು ವಿಫಲವಾಗಿ ಕುರುಡುಶಾಸ್ತ್ರಗಳ ಮಟ್ಟಕ್ಕೆ ಇಳಿದು ಸತ್ಯವನ್ನು ಅಮರ, ಅಪರಿವರ್ತನಾಶೀಲ ಹಾಗೂ ವ್ಯಕ್ತಿನಿಷ್ಠತೆಯ (subjectively) ಕಠೋರ ಹಂದರದ ಒಳಗೆ ಕ್ರಿಯಾಶೀಲವೆಂಬಂತೆ ಮಾಡಿವೆ.

ಅವು ವಸ್ತುವಿನ ವಸ್ತುವಾದಿ ಅಸ್ತಿತ್ವವನ್ನು ನಂಬಿದರೂ ಅವುಗಳ ಚಿಂತನೆಗಳು ವ್ಯಕ್ತಿನಿಷ್ಠವಾಗಿದ್ದವು ಹಾಗೂ ಪ್ರಯೋಗಾತ್ಮಕ ಸತ್ಯವನ್ನು ಆಧರಿಸಿರಲಿಲ್ಲ. ದೇವರ ವಿಚಾರ ಹೇಗೆ ಅಸತ್ಯವೋ ಹಾಗೆಯೇ ಫಲರಹಿತವಾಗಿರುವಂತೆಯೇ ಅವರ ವಸ್ತುವಿನ ಪರಿಕಲ್ಪನೆಯೂ ಸಹ ವ್ಯಕ್ತಿನಿಷ್ಠ ಮತ್ತು ಅಪರಿವರ್ತನೀಯ ಚಿಂತನೆಗಳನ್ನು ಆಧರಿಸಿದ್ದರಿಂದ ತಪ್ಪಾಗಿತ್ತು ಮತ್ತು ಸೃಜನಶೀಲತೆಯಿಂದ ಹೊರತಾಗಿತ್ತು. ನಾನು ದೇವರ ಪರಿಕಲ್ಪನೆಯನ್ನು ಮಿಥ್ಯೆ ಅಥವಾ ನಿಷ್ಫಲ ಎಂದು ಕರೆಯುವುದು ಏಕೆ? ಏಕೆಂದರೆ ಇದು ವಸ್ತುವಾದಿ ವಾಸ್ತವತೆಗೆ ಸಂಬಂಧವಿಲ್ಲದ್ದು ಮತ್ತು ಇದು ನಿಷ್ಪ್ರಯೋಜಕ. ಏಕೆಂದರೆ ಇದರಿಂದ ಯಾವುದೇ ಫಲ ದೊರಕದು. ಉದಾಹರಣೆಗೆ ನನಗೆ ಸರ್ವಶಕ್ತ ದೇವರಲ್ಲಿ ನಂಬಿಕೆಯಿಲ್ಲ. ಆದರೆ ವಸ್ತುವಿನ ಕುರಿತಾದ ನನ್ನ ಚಿಂತನೆ ಅಸತ್ಯ ಎಂದುಕೊಳ್ಳೋಣ. ಆಗಲೂ, ದೇವರನ್ನು ನಾನು ನಂಬದಿದ್ದರೂ ನಾನು ಭಾವನಾವಾದಿ ಯಾಗಬಹುದು. ದೇವರಲ್ಲಿನ ನಂಬಿಕೆ ಅಥವಾ ಭಾವನಾವಾದಿ ಪರಿಕಲ್ಪನೆಗಳಿಂದ ಸಮಾಜದ ಬೆಳವಣಿಗೆ ಮತ್ತು ಪ್ರಗತಿಯಲ್ಲಿ ಸಕಾರಾತ್ಮಕವಾಗಿ

ಏನನ್ನಾದರೂ ಸಾಧಿಸುವುದು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ತಪ್ಪು ವಸ್ತುವಾದಿ ಪರಿಕಲ್ಪನೆಗಳಿಂದಲೂ ಯಾವುದೇ ಫಲ ದೊರಕದು. ಆದ್ದರಿಂದಲೇ ಈ ವಸ್ತುವಾದಿ ತತ್ವಜ್ಞಾನಗಳು ವಾಸ್ತವದಲ್ಲಿ ಭಾವನಾವಾದಗಳೇ ಆಗಿರುತ್ತವೆ. ನಿಜ ಹೇಳಬೇಕೆಂದರೆ ಇವುಗಳನ್ನು ಈ ತತ್ವಜ್ಞಾನಗಳೇ ಶಾಶ್ವತವಾಗಿರಿಸಿರುವ ಒಂದು ಕುರುಡು ನಂಬಿಕೆ ಅಥವಾ ಕಠೋರ ನಿಯಮದ ಪರಿಣಾಮವೆನ್ನಬಹುದೇನೋ. ಹೇಗೆ ಭಾವನಾವಾದದ ಉಗಮದ ಬಳಿಕ ಭಾವನಾವಾದಿಗಳು ದೇವರ ಅಸ್ತಿತ್ವವನ್ನು ಅಂಗೀಕರಿಸಿ, ದೇವರ ಪರಿಕಲ್ಪನೆಯನ್ನಾಧರಿಸಿ, ಅರ್ಥಾತ್ ನಿಖರವಾಗಿ ಭಾವನಾವಾದಿ ಪರಿಕಲ್ಪನೆಗಳನ್ನಾಧರಿಸಿ ಅವರ ನೀತಿ–ನೈತಿಕತೆ, ತಪ್ಪು–ಒಪ್ಪುಗಳ ಪರಿಜ್ಞಾನಗಳನ್ನು ನಿರ್ಮಿಸಿ ಈ ವಿಚಾರಗಳನ್ನು ಅಮರ ಹಾಗೂ ಪರಿವರ್ತನಾತೀತ ಗೊಳಿಸಿದರೋ, ಹಾಗೆಯೇ ಒಂದು ವೇಳೆ ಯಾವುದೇ ವಸ್ತುವಾದಿ ತತ್ವಶಾಸ್ತ್ರವೂ ಸಹ ದೇವರಲ್ಲಿ ನಂಬದೆಯೂ ಅಂತಹ ಪರಿವರ್ತನಾತೀತ ಪರಿಕಲ್ಪನೆಗಳನ್ನು ಒಪ್ಪಿಕೊಂಡು 'ಇವೆಲ್ಲವೂ ಚಿರಂತನ' ಎಂಬುದಾಗಿ ಸಾರಿದರೇ ಅದು ನಮಗೆ ಸತ್ಯ ಹಾಗೂ ವಾಸ್ತವತೆಯ ಕಡೆಗಿನ ದಾರಿತೋರಬಲ್ಲದೆ? ಇಂತಹ ವಸ್ತುವಾದ ಎಂದೆಂದಿಗೂ ಇರುವಂತಹ ದೇವರನ್ನು ನಿರಾಕರಿಸಿದರೂ ಭಾವನಾವಾದದ ಇನ್ನೊಂದು ಹೆಸರೇ ಆಗಿರುತ್ತದೆ.

## ಇತರ ವಸ್ತುವಾದಿ ತತ್ವಜ್ಞಾನಗಳ ಇತಿಮಿತಿಗಳು

ಈ ಕಾರಣದಿಂದ ಯುರೋಪಿನ ಫ್ಯೂರ್‌ಬ್ಯಾಕ್ ಹಾಗೂ ಬಲು ಹಿಂದೆಯೇ ನಮ್ಮ ದೇಶದ ಚಾರ್ವಾಕರನ್ನೊಳಗೊಂಡಂತೆ ಇತರ ಅನೇಕ ತತ್ವಜ್ಞಾನಿಗಳು ವಸ್ತುವಾದದ ಪ್ರಚಾರ ನಡೆಸಿದರೂ, ಅವರಿಗೆ ಭಾವನಾವಾದದ ಪ್ರಭಾವದಿಂದ ಬಿಡಿಸಿಕೊಳ್ಳಲು ಆಗಲಿಲ್ಲ. ಆದಿಯಲ್ಲಿ ಮಾನವನ ಚಿಂತನೆ ವಸ್ತುವಾದಿಯಾಗಿದ್ದರೂ ವಸ್ತುವಿನ ಬಗ್ಗೆ ಒಂದು ಸರಿಯಾದ, ಸಮಗ್ರ ಚಿಂತನೆಯನ್ನು ಬೆಳೆಸಿಕೊಳ್ಳುವಲ್ಲಿ ವಿಫಲನಾದುದರಿಂದ ಭಾವನಾವಾದ ಅಸ್ತಿತ್ವಕ್ಕೆ ಬಂದಿತು. ಆ ಕಾಲದಲ್ಲಿ ಮಾನವನಿಗೆ ತನ್ನನ್ನು ಕಾಡುವ ಅಸಂಖ್ಯಾತ ಪ್ರಶ್ನೆಗಳ ಬಗ್ಗೆ ಒಂದು ಸರಿಯಾದ ವಿಚಾರ ಮತ್ತು ಜ್ಞಾನ ಪಡೆಯುವುದು ಸಾಧ್ಯವಿರಲಿಲ್ಲ ಎಂದು ನಾನು ಈಗಾಗಲೇ ಚರ್ಚಿಸಿದ್ದೇನೆ. ಆದ್ದರಿಂದ ಅವನು ಅರಿಯಲು ಮತ್ತು ಚಿಂತನೆಮಾಡಲು ಬಯಸಿದ್ದು ವಸ್ತುವಿನ ಕುರಿತಾದರೂ ಮತ್ತು ಮಾನವನ ಮನಸ್ಸಿನಲ್ಲಿ ವಸ್ತುವಿಗೆ ಅತೀತ ಶಕ್ತಿಯ ಪರಿಕಲ್ಪನೆ ಬೆಳೆಯದೆ ಇದ್ದರೂ ಅವುಗಳ ಇತಿಮಿತಿ ಮತ್ತು ದೌರ್ಬಲ್ಯಗಳಿಂದಾಗಿ ಮನುಷ್ಯನ ಬುದ್ಧಿ, ವಿಜ್ಞಾನ ಮತ್ತು ಉತ್ಪಾದನೆಗಳು ಎಷ್ಟು ಹಿಂದುಳಿದಿದ್ದವೆಂದರೆ ವಸ್ತುವಿನ ಮತ್ತು ಅದರ ನಿಯಮಗಳ ಕುರಿತು ಮಾನವನ ವಿಚಾರ ತೀರಾ ಬಡವಾಗಿದ್ದು, ಹಿಂದುಳಿದಿದ್ದುದರಿಂದ ಅದು ಸತ್ಯದ ಹತ್ತಿರವೂ ತಲುಪಲಾಗಲಿಲ್ಲ. ಇಂತಹ ವಾಸ್ತವಿಕ ಪರಿಸ್ಥಿತಿಯಲ್ಲಿ ಭಾವನಾವಾದ ಜನ್ಮ ತಳೆಯಿತು ಹಾಗೂ ಭಾವನಾವಾದದ ಕೈಯಲ್ಲಿ ವಸ್ತುವಾದ ಸೋತುಹೋಯಿತು.

## ಮನಸ್ಸು ಮತ್ತು ವಸ್ತುವಿನ ನಡುವಣ ಪರಸ್ಪರ ಸಂಬಂಧ

17 ಮತ್ತು 18ನೇ ಶತಮಾನದ ಅನೇಕ ವಸ್ತುವಾದಿಗಳು ಸಹ ಹೀಗೆಯೇ ಅನೇಕ ತಪ್ಪುಗಳನ್ನು ಮಾಡಿದರು. ನಾವು ಮನಸ್ಸೆಂದು ಕರೆಯುವಂತಹುದು ಏನೂ ಇಲ್ಲವೆಂದು ಅವರು ಭಾವಿಸುತ್ತಿದ್ದರು. ಅದು ಬರಿಯ ದೈಹಿಕ ಕ್ರಿಯೆ–ವಸ್ತುವಿನ ಕ್ರಿಯೆ ಎಂದು ಭಾವಿಸುತ್ತಿದ್ದರು. ಮನಸ್ಸಿನ ಕುರಿತಾದ ಅವರ ವಿಚಾರ ಯಾಂತ್ರಿಕವಾಗಿತ್ತು. ಮನಸ್ಸೂ ಸಹ ಒಂದು ಅಸ್ತಿತ್ವವುಳ್ಳ ಅಂಶವಾಗಿ (entity) ವಸ್ತುವಿನ ಮೇಲೆ ಪರಿಣಾಮ ಬೀರಬಲ್ಲದು ಎಂಬುದನ್ನು ಅವರು ಸ್ವೀಕರಿಸಿರಲಿಲ್ಲ. ಅವರು ಮನಸ್ಸನ್ನು ಶರೀರ ಕ್ರಿಯೆಯ (physiology) ಉತ್ಪನ್ನ ಮಾತ್ರ ಅಂದರೆ ಯಾವುದೇ ಮಾನಸಿಕ ಚಟುವಟಿಕೆ ಅಥವಾ ಬುದ್ಧಿಶಕ್ತಿ ಇಲ್ಲದ ಬರಿಯ ಶಾರೀರಿಕ ಪ್ರತಿಕ್ರಿಯೆ ಮಾತ್ರ ಎಂದು ತಿಳಿದಿದ್ದರು. ಶಾರೀರಿಕ ರೋಗ ಮಾನವನ ಮಾನಸಿಕ ಸ್ಥಿತಿಯ ಮೇಲೆ ಪ್ರಭಾವ ಬೀರುವಂತೆ ಮಾನಸಿಕ ರೋಗದಿಂದ ಮಾನವ ಶಾರೀರಿಕವಾಗಿ ರೋಗಕ್ಕೊಳಗಾಗಬಹುದು ಎಂಬುದನ್ನು ಅವರು ಅರ್ಥಮಾಡಿಕೊಂಡಿರಲಿಲ್ಲ. ಮನಸ್ಸಿಗೂ ಒಂದು ಸಾಪೇಕ್ಷವಾದ ಸ್ವಾತಂತ್ರ್ಯವಿದೆ ಎಂಬುದನ್ನು ಗಮನಿಸುವಲ್ಲಿ, ಅರ್ಥಮಾಡಿಕೊಳ್ಳುವಲ್ಲಿ ಅವರು ವಿಫಲರಾಗಿದ್ದರು. ನಿಸ್ಸಂದೇಹವಾಗಿ ಮನಸ್ಸು ಶರೀರದಿಂದ ಪ್ರತ್ಯೇಕ ಅಸ್ತಿತ್ವವನ್ನು ಹೊಂದಿಲ್ಲ ಅಥವಾ ಮನಸ್ಸನ್ನು ಶರೀರದಿಂದ ಬೇರೆ ಮಾಡಲಾಗದು, ಎರಡೂ ಒಂದಕ್ಕೊಂದು ಸಂಬಂಧಿಸಿವೆ. ಇವೆಲ್ಲವೂ ಸರಿ. ಆದರೆ ಮನಸ್ಸಿಗೆ ಅದರದೆ ಆದ ಕ್ರಿಯೆಗಳಿವೆ. ಚಟುವಟಿಕೆಗಳಿವೆ. ತನ್ನದೇ ವಿಶಿಷ್ಟ ಗುಣಲಕ್ಷಣಗಳಿವೆ, ಮತ್ತು ಈ ದೃಷ್ಟಿಕೋನದಿಂದ ಅದಕ್ಕೆ ಸಾಪೇಕ್ಷವಾದರೂ ಸ್ವತಂತ್ರ ಅಸ್ತಿತ್ವವಿದೆ. ಇದನ್ನು ನಾವು ಮನಸ್ಸಿನ ಸಾಪೇಕ್ಷ ಸ್ವಾತಂತ್ರ್ಯ ಎನ್ನುತ್ತೇವೆ. ಈ ವಿಚಾರವನ್ನು 19ನೇ ಶತಮಾನದ ವಸ್ತುವಾದಿಗಳು ಅರ್ಥಮಾಡಿಕೊಳ್ಳಲಿಲ್ಲ. ಏಕೆಂದರೆ ದೇಹಕ್ರಿಯಾಶಾಸ್ತ್ರ (physiology) ಮತ್ತು ಮನಃಶಾಸ್ತ್ರಗಳು ವಿಜ್ಞಾನವಾಗಿ ಇನ್ನೂ ಬೆಳೆದಿರಲಿಲ್ಲ, ಅಷ್ಟೊಂದು ಮುನ್ನಡೆ ಸಾಧಿಸಿರಲಿಲ್ಲ. ಇಂದಿನ ವಿಜ್ಞಾನ ಅನಾವರಣಗೊಳಿಸಿರುವ ಜೀವಿಗಳ ಅನೇಕ ವೈಚಿತ್ರ್ಯಗಳು ಅಂದು ತಿಳಿದಿರಲಿಲ್ಲ. ತತ್ಫಲವಾಗಿ ವಿಜ್ಞಾನದ ಬೆಳವಣಿಗೆಯ ಆ ಹಂತದಲ್ಲಿ ಮನಸ್ಸಿನ ಎಲ್ಲಾ ಸಂಕೀರ್ಣತೆಗಳು ಮತ್ತು ಕ್ರಿಯಾಶೀಲತೆಗಳೊಂದಿಗೆ ಅದರ ಅನೇಕ ಹೊಳಹುಗಳನ್ನು ಮಾನವನಿಗೆ ಅರಿಯುವುದು ಸಾಧ್ಯವಾಗಿರಲಿಲ್ಲ. ಆದ್ದರಿಂದ ಇದು ಹಲವು ಸಮಸ್ಯೆಗಳಿಗೆ, ಗೊಂದಲಗಳಿಗೆ ಎಡೆಮಾಡಿಕೊಟ್ಟಿತು.

## ಆದರ್ಶ ಸದಾ ಚಲನಶೀಲ

ಉದಾಹರಣೆಯಾಗಿ ಫ್ಯೂರ್‌ಬ್ಯಾಕ್ ದೇವರ ಅಸ್ತಿತ್ವವನ್ನು ಸ್ವೀಕರಿಸಲಿಲ್ಲ; ಅವರು ಹೆಗೆಲ್‌ರವರ ನಿರುಪಾಧಿ ವಿಚಾರ (absolute idea)ವನ್ನೂ ಸಹ ತಿರಸ್ಕರಿಸಿದ್ದರು. ಅವರು ಈ ವಸ್ತು ಜಗತ್ತನ್ನು ಒಂದು ವಸ್ತುವಾದಿ ದೃಷ್ಟಿಕೋನದಿಂದ ವಿವರಿಸಿದ್ದರು. ವಸ್ತು ಜಗತ್ತು ದ್ವಂದ್ವಾತ್ಮಕ

ಪ್ರಕ್ರಿಯೆಯನ್ನು ಅನುಸರಿಸಿ ಬದಲಾಗುತ್ತಿದೆ ಎಂಬುದನ್ನು ಅವರು ಒಪ್ಪಿಕೊಂಡಿದ್ದರು. ಆದರೆ ಅಂತಿಮವಾಗಿ ಅವರು ತೀರ್ಮಾನಿಸಿದ್ದೇನು? ಮನುಕುಲ ಮತ್ತು ಮಾನವ ಸಮಾಜದಲ್ಲಿ ಕೆಲವು ಆದರ್ಶಗಳು, ಕೆಲವು ನೈತಿಕ ನಿಯಮಗಳು, ಕೆಲವು ನೀತಿಸೂತ್ರಗಳು ಅಂದರೆ ಕೆಲವು ಮಾನವೀಯಸಾರ (human essence) ಶಾಶ್ವತ ಎಂದವರು ಪ್ರತಿಪಾದಿಸಿದರು. ಮಾನವತಾವಾದದ ಪರಿಕಲ್ಪನೆಯ ಆಧಾರದಲ್ಲಿ ಕೆಲವು ಸೂತ್ರ. ಆದರ್ಶ, ನೀತಿಗಳು ಅಪರಿವರ್ತನೀಯ ಹಾಗೂ ಶಾಶ್ವತ ಎಂದವರು ಘೋಷಿಸಿದರು. ಮನುಕುಲದ ಪ್ರಗತಿಗಾಗಿ, ಸಮಾಜದ ಬದಲಾವಣೆ ಮತ್ತು ಬೆಳವಣಿಗೆಗಾಗಿ ಈ ಶಾಶ್ವತ ಸೂತ್ರಗಳು ಅವಶ್ಯಕ ಎಂದವರು ವಾದಿಸಿದರು. ಸಮಾಜದ ಪ್ರಗತಿಯೊಂದಿಗೆ, ಅದರ ವಾಸ್ತವಿಕ ಅಗತ್ಯತೆಗಳನ್ನು ಎದುರಿಸಲು ಮತ್ತು ಅವುಗಳಿಗೆ ಪೂರಕವಾಗಿ ನೀತಿ, ನೈತಿಕತೆ ಮತ್ತು ಆದರ್ಶಗಳು ಬದಲಾಗುತ್ತವೆ, ಅವು ಬದಲಾಗುವುದು ಖಂಡಿತ ಎಂಬ ಸತ್ಯವನ್ನು ಫ್ಯೂರ್‌ಬ್ಯಾಕ್ ಗ್ರಹಿಸಲಿಲ್ಲ. ಇದನ್ನು ಗ್ರಹಿಸಲು ಅವರು ವಿಫಲರಾದ್ದರಿಂದ ಅವರು ನೀತಿ ಮತ್ತು ನೈತಿಕತೆಯನ್ನು ಶಾಶ್ವತವೆಂದು ತಿಳಿದರು. ಇಲ್ಲಿ ಅವರು ವಸ್ತುವಾದದಿಂದ ದೂರವಾದರು. ಆದರ್ಶಗಳಿಗೂ ಉಗಮ ಮತ್ತು ನಾಶ ಉಂಟು, ಅವು ಮಾನವನ ಅವಶ್ಯಕತೆಗಳಿಗೆ ಅನುಗುಣವಾಗಿ ಮತ್ತು ಸಮಾಜದ ಒಳಗಿನ ದ್ವಂದ್ವಗಳು ಹಾಗೂ ಮಾನವನ ಮನಸ್ಸು ಮತ್ತು ಅದರ ಪರಿಸರದ ನಡುವಣ ಸಂಘರ್ಷ ಮತ್ತು ದ್ವಂದ್ವಗಳನ್ನು ಅನುಸರಿಸಿ ಬದಲಾಗುತ್ತವೆ ಎಂಬುದನ್ನು ಫ್ಯೂರ್‌ಬ್ಯಾಕ್ ಅರಿಯದೇ ಹೋದರು. ಆದರ್ಶಗಳೂ ಹುಟ್ಟುತ್ತವೆ ಹಾಗೂ ಒಂದು ನಿರ್ದಿಷ್ಟ ಸಮಾಜದಲ್ಲಿ, ಒಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ ಅರಳುತ್ತವೆ ಮತ್ತು ಹೊಸ ಆದರ್ಶಗಳಿಗೆ ಜನ್ಮ ನೀಡಿದಂತಹ ಹೊಸ ಸಮಾಜದಲ್ಲಿ ಅವು ಕೊಳೆತು ಹೋಗುತ್ತವೆ ಎಂಬುದನ್ನು ಅವರು ತಿಳಿಯದೇ ಹೋದರು.

ಹಾಗಾಗಿ, ಒಂದು ಆದರ್ಶವೂ ಸಹ ಬದಲಾಗುತ್ತದೆ, ಅದು ಚಲನಶೀಲ. ಈ ಚಲನಶೀಲ, ಸದಾ ಬದಲಾಗುತ್ತಿರುವ ವಿಶ್ವದಲ್ಲಿ ಬದಲಾವಣೆ ಮತ್ತು ಬೆಳವಣಿಗೆಗಳಿಗೂ ಒಂದು ನಿರ್ದಿಷ್ಟ ಪ್ರಕ್ರಿಯೆ ಎಂಬುದಿದೆ. ಫ್ಯೂರ್‌ಬ್ಯಾಕ್‌ರವರು ವಸ್ತುವಾದಿ ವಿಶ್ವವನ್ನು ಅರ್ಥೈಸಿಕೊಳ್ಳುವಲ್ಲಿ ದ್ವಂದ್ವಾತ್ಮಕ ವಸ್ತುವಾದಿ ದೃಷ್ಟಿಕೋನವನ್ನು ಸ್ವೀಕರಿಸಿದರೂ ಸಹ ಅವರು ಈ ವಸ್ತುನಿಷ್ಠ ಸತ್ಯವನ್ನು ನಿರಾಕರಿಸಿದರು. ತತ್ಪರಿಣಾಮವಾಗಿ ವಸ್ತುವಾದಿ ತತ್ವಜ್ಞಾನವನ್ನು ಬೋಧಿಸುತ್ತಿದ್ದರೂ ಸಹ ಅವರು ವಾಸ್ತವದಲ್ಲಿ ಭಾವನಾವಾದಿಗಳೇ ಆಗಿ ಹೋದರು.

ಮಾರ್ಕ್ಸ್‌ರವರು ಫ್ಯೂರ್‌ಬ್ಯಾಕ್‌ರವರನ್ನೂ, ಅವರ ಮಾನವತಾವಾದವನ್ನೂ ತಿರಸ್ಕರಿಸಿ ದ್ವಂದ್ವಾತ್ಮಕ ವಸ್ತುವಾದವನ್ನು ಒಂದು ಸಂಪೂರ್ಣ ಹಾಗೂ ಸಮಗ್ರ ತತ್ವಜ್ಞಾನವನ್ನಾಗಿ ಅಂದರೆ ವಿಜ್ಞಾನಗಳ ವಿಜ್ಞಾನವನ್ನಾಗಿ, ಸಾಮಾಜಿಕ ವಿಜ್ಞಾನಗಳಿಗೆ ಪೂರಕವಾಗಿರುವ ಒಂದು ವೈಜ್ಞಾನಿಕ ಚಿಂತನಾ ಪ್ರಕ್ರಿಯೆ ಮತ್ತು ವಿಶ್ಲೇಷಣೆಯನ್ನಾಗಿ ಪ್ರತಿಪಾದಿಸಿದರು. ಫ್ಯೂರ್‌ಬ್ಯಾಕ್‌ರವರು

ಆ ಒಂದು ತಪ್ಪನ್ನು ಮಾಡಿರದೆ ಹೋಗಿದ್ದರೆ ಅವರು ಇತಿಹಾಸದಲ್ಲಿ ಮಾರ್ಕ್ಸ್‌ರವರಿಗಿರುವ ಸ್ಥಾನವನ್ನು ಪಡೆಯಬಹುದಾಗಿತ್ತು ಹಾಗೂ ವಿಶ್ವಾದ್ಯಂತ ಮಾರ್ಕ್ಸ್‌ವಾದಿ ಆಂದೋಲನದ ಉಜ್ವಲತೆ ಮತ್ತು ಮೌಲ್ಯದೊಂದಿಗೆ ಅವರ ಹೆಸರು ಬೆರೆತು ಹೋಗಿರುತ್ತಿತ್ತು. ಆದರೆ ಹಾಗಾಗಲಿಲ್ಲ. ಮಾರ್ಕ್ಸ್‌ರವರು ಫ್ಯೂರ್‌ಬ್ಯಾಕ್ ಎಸಗಿದ ತಪ್ಪನ್ನು ಮಾಡಲಿಲ್ಲ. ಅವರ ಹಾಗೆ ಜಾರಲಿಲ್ಲ. ಮಾರ್ಕ್ಸ್‌ರವರು ಇಡೀ ವಿಷಯವನ್ನು ಸಮತೋಲನದಿಂದ ನೋಡಿ ಅದನ್ನು ಸಮನ್ವಯಗೊಳಿಸಿದರು. ಹೀಗೆ ಅವರು ವಿಜ್ಞಾನ ಮತ್ತು ವಸ್ತುವಾದದ ಭದ್ರನೆಲೆಯಲ್ಲಿ ಮಾರ್ಕ್ಸ್‌ವಾದಿ ತತ್ವಜ್ಞಾನವನ್ನು ಸ್ಥಾಪಿಸಿದರು.

## ವಸ್ತುವಾದದ ಸಮಕ್ಷಮ ಭಾವನಾವಾದದ ಬೆಳವಣಿಗೆ

ಹಾಗಾಗಿ ನಾವು ಕಾಣುತ್ತಿರುವುದೇನು? ವರ್ಗವಿಭಜಿತ ಸಮಾಜದ ಉಗಮದಿಂದಲೂ ಭಾವನಾವಾದಿ ಹಾಗೂ ವಸ್ತುವಾದಿ ಚಿಂತನೆಗಳೆರಡೂ ಜೊತೆಜೊತೆಯಲ್ಲಿ ಸಾಗಿ, ಬೆಳೆದು ಬಂದವು. ಪುರಾತನ ಭಾವನಾವಾದ ತನ್ನ ಬೆಳವಣಿಗೆಯ ಗತಿಯಲ್ಲಿ ಒಂದು ಹಂತದಿಂದ ಇನ್ನೊಂದಕ್ಕೆ ಸಾಗಿತು. ಒಂದೊಮ್ಮೆ ಹಿಂದೂ ಧರ್ಮದಲ್ಲಿ 33 ಕೋಟಿ ದೇವತೆಗಳ ಅಸ್ತಿತ್ವದ ಕಲ್ಪನೆಯಾಗಿತ್ತು. ಆದರೆ ಕಾಲಕ್ರಮೇಣ ಏಕದೈವವಾದದಲ್ಲಿ ನಂಬಿಕೆ ಬೆಳೆಯಿತು. ಅಂದರೆ ಒಬ್ಬನೇ ದೇವರಲ್ಲಿ ನಂಬಿಕೆ, ಆದೂ ನಿರಾಕಾರ ಸರ್ವಶಕ್ತ ಬ್ರಹ್ಮ. ಅಷ್ಟೇ ಅಲ್ಲ ಇಂದು ವೈಜ್ಞಾನಿಕ ನಿಗೂಢತೆಗೆ (mysticism) ಮೊರೆಹೋಗುವ ಆದರೆ ದೇವರ ಸಾಂಪ್ರದಾಯಿಕ ಕಲ್ಪನೆಗಳನ್ನು ನಂಬದ ಭಾವನಾವಾದಿಗಳು ಇದ್ದಾರೆ. ಭಾವನಾವಾದ ತನ್ನ ಬೆಳವಣಿಗೆಯ ಗತಿಯಲ್ಲಿ ಈ ಹಂತವನ್ನು ತಲುಪಿದೆ. ವಸ್ತುವಾದಿ ಚಿಂತನೆಯೂ ಹೇಗೆ ಬೆಳೆಯಿತು ಎಂಬುದನ್ನು ಈಗ ನೋಡಿ. ಪುರಾತನ ವಸ್ತುವಾದಿ ಚಿಂತನೆ ಕ್ರಮೇಣವಾಗಿ ಪ್ರಗತಿ ಹೊಂದುತ್ತಾ–ವಿಭಿನ್ನ ದೇಶಗಳಲ್ಲಿ ವಿಭಿನ್ನವಾಗಿ ಬೆಳೆಯುತ್ತಾ–17ನೇ ಹಾಗೂ 18ನೇ ಶತಮಾನಗಳಲ್ಲಿ ಯಾಂತ್ರಿಕ ವಸ್ತುವಾದದ ಹಂತವನ್ನು ತಲುಪಿತು. ನಾನು ಈಗಾಗಲೇ ಚರ್ಚೆ ಮಾಡಿರುವಂತೆ ನ್ಯೂಟೋನಿಯನ್ ಭೌತಶಾಸ್ತ್ರವು ವಿಜ್ಞಾನದ ಬೆಳವಣಿಗೆಗೆ ಬಹಳಷ್ಟು ನೆರವಾದರೂ ಕೆಲವೊಂದು ಇತಿಮಿತಿಗಳ ಕಾರಣದಿಂದ ಹಾಗೂ ವಸ್ತುವಿನ ಗುಣಲಕ್ಷಣವನ್ನು ಅದು ಸರಿಯಾಗಿ ಗ್ರಹಿಸದಿದ್ದುದರಿಂದ ವಸ್ತುವಾದಿ ಚಿಂತನೆಯನ್ನು ಭಾವನಾವಾದದ ಪ್ರಭಾವದಿಂದ ಬಿಡಿಸಲು ಅದಕ್ಕೆ ಸಾಧ್ಯವಾಗಲಿಲ್ಲ. ತತ್ಪರಿಣಾಮವಾಗಿ ಯಾಂತ್ರಿಕ ವಸ್ತುವಾದ ತನ್ನ ಹೆಜ್ಜೆಯೂರಿತು. ಆದರೆ ತದನಂತರದ ಕಾಲದಲ್ಲಿ ವಸ್ತುವಿನ ಹೊಸ ಪರಿಕಲ್ಪನೆಯ ಆಧಾರದಲ್ಲಿ ವಿಜ್ಞಾನದ ಇನ್ನೂ ಹೆಚ್ಚಿನ ಬೆಳವಣಿಗೆಯ ಪರಿಣಾಮವಾಗಿ ಹಾಗೂ ಬೂರ್ಜ್ವಾ ಮತ್ತು ಕಾರ್ಮಿಕ ವರ್ಗದ ನಡುವಣ ವರ್ಗ ಸಂಘರ್ಷದ ಹಿನ್ನೆಲೆಯಲ್ಲಿ ಅದರಲ್ಲೂ ವಿಶಿಷ್ಟವಾಗಿ ಜೀವಶಾಸ್ತ್ರಗಳ ಕ್ಷೇತ್ರದಲ್ಲಿ ಡಾರ್ವಿನ್‌ರವರ ಕೊಡುಗೆಯನ್ನನುಸರಿಸಿ ವಸ್ತುವಾದಿ ತತ್ವಜ್ಞಾನವು ಯಾಂತ್ರಿಕ ಹಂತವನ್ನು ದಾಟಿ ದ್ವಂದ್ವಾತ್ಮಕ ವಸ್ತುವಾದದ ಪ್ರಸಕ್ತ ಎತ್ತರವನ್ನು ತಲುಪಿದೆ.

## ದ್ವಂದ್ವಾತ್ಮಕ ವಸ್ತುವಾದವೇ ಒಂದು ವಿಜ್ಞಾನ

ಹೀಗೆ ನಾವು ಈ ವಸ್ತು ಜಗತ್ತಿನ ಕೆಲ ಸಾಮಾನ್ಯ ಸತ್ಯಗಳ ಬಗ್ಗೆ ತಿಳಿದುಕೊಂಡೆವು. ಮಾನವನು ಈ ಸತ್ಯಗಳನ್ನು, ವಸ್ತು ಜಗತ್ತಿನ ಬೆಳವಣಿಗೆಯ ಸಾಮಾನ್ಯ ತತ್ವಗಳನ್ನು ಮತ್ತು ನಿಯಮಗಳನ್ನು ತಿಳಿಯಲು ಇಚ್ಛಿಸಿದ. ಮೊದಲಿನಿಂದಲೂ ವಸ್ತುವಾದಿಗಳು, ಭಾವನಾವಾದಿಗಳು ಎಲ್ಲರೂ ತಿಳಿಯಲು ಬಯಸಿದ್ದು, ತಿಳಿಯಲು ಪ್ರಯತ್ನಿಸಿದ್ದು ಈ ಸತ್ಯಗಳನ್ನೇ. ಆದರೆ ಅವರ ಎಲ್ಲಾ ಪ್ರಯತ್ನಗಳ ಮೂಲಕ ಅವರು ಪಡೆದಿದ್ದು ತುಣುಕು ತುಣುಕಾಗಿ ಪಾರ್ಶ್ವ ಜ್ಞಾನವನ್ನು ಮಾತ್ರ, ಇಡಿಯ ಸತ್ಯವನ್ನಲ್ಲ–ಇದಕ್ಕಾಗಿ ಅವರು ಫಾಂಟಿಸಿ(ಅವಾಸ್ತವಿಕ ಕಲ್ಪನೆಗಳು)ಯ ಮೊರೆಹೋದರು. ಆದರೆ ವೈಜ್ಞಾನಿಕ ಪ್ರಯೋಗಗಳು, ಪರಿಶೀಲನೆ, ವಸ್ತುನಿಷ್ಠ ಅನುಭವ ಹಾಗೂ ಪ್ರಯೋಗಜನ್ಯ ಸತ್ಯಗಳ ಆಧಾರದಲ್ಲಿ ವಸ್ತುವಿನ ಅಸ್ತಿತ್ವದ ಪರಿ ಏನು, ಅದನ್ನು ನಿಯಂತ್ರಿಸುವ ನಿಯಮಗಳಾವುವು ಹಾಗೂ ವಿಶ್ವವೇ ಹೇಗೆ ಬದಲಾಗುತ್ತದೆ ಎಂಬುವುಗಳನ್ನು ಸರಿಯಾಗಿ ಅರಿವಿಗೆ ತಂದುಕೊಂಡಂತಹ ಮೊದಲ ತತ್ವಜ್ಞಾನವೇ ದ್ವಂದ್ವಾತ್ಮಕ ವಸ್ತುವಾದ. ದ್ವಂದ್ವಾತ್ಮಕ ವಸ್ತುವಾದದ ಯಾವುದೇ ತೀರ್ಮಾನಗಳು ಭ್ರಾಮಕ ವಿಚಾರಗಳಿಂದ ಬಂದವುಗಳಲ್ಲ–ವೈಜ್ಞಾನಿಕ ಪ್ರಯೋಗ ಮತ್ತು ಪರಿಶೀಲನೆಗಳ ಮೂಲಕ ಹೊರಹೊಮ್ಮಿದ ವೈಜ್ಞಾನಿಕ ಸತ್ಯಗಳ ಸುಸಂಬಂಧೀಕರಣ, ಸಮನ್ವಯೀಕರಣ ಹಾಗೂ ಸಂಯೋಜಿಕರಣದ (integration) ಆಧಾರದ ಮೇಲೆ ಅದರ ದಾರ್ಶನಿಕ ರಚನೆಯ ಸೃಷ್ಟಿಯಾಗಿದೆ.

ವಿಜ್ಞಾನದ ವಿಭಿನ್ನ ಶಾಖೆಗಳಾದ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಜೀವಶಾಸ್ತ್ರ, ಸಮಾಜಶಾಸ್ತ್ರ, ಆರ್ಥಿಕಶಾಸ್ತ್ರ ಇವೆಲ್ಲವುಗಳ ಪ್ರಯೋಗಜನ್ಯ ನಿರ್ದಿಷ್ಟ ಸತ್ಯ ಅಥವಾ ಜ್ಞಾನಗಳ ಸಮನ್ವಯೀಕರಣ ಹಾಗೂ ಸಂಯೋಜನೆಯಿಂದ ಬೆಳೆದ ಸಾಮಾನ್ಯ ಸತ್ಯಗಳೇ ದ್ವಂದ್ವಾತ್ಮಕ ವಸ್ತುವಾದದ ಆಧಾರ. ಆದ್ದರಿಂದ ದ್ವಂದ್ವಾತ್ಮಕ ವಸ್ತುವಾದವೇ ಒಂದು ವಿಜ್ಞಾನ. ಈ ಅಂಶದ ಬಗ್ಗೆ ನಾನು ಸ್ವಲ್ಪ ವಿಶದವಾಗಿ ಹೇಳಲು ಬಯಸುತ್ತೇನೆ. ಭೌತಶಾಸ್ತ್ರ ಏನನ್ನು ಮಾಡುತ್ತದೆ? ಭೌತಶಾಸ್ತ್ರ ವಸ್ತುವಿನ ಭೌತ ಅಂಶದ ಬಗ್ಗೆ, ಶಕ್ತಿಗಳ ಬಗ್ಗೆ ಅಧ್ಯಯನ ನಡೆಸುತ್ತದೆ, ಮಾಹಿತಿ ನೀಡುತ್ತದೆ. ರಸಾಯನಶಾಸ್ತ್ರದ ಕೆಲಸವೇನು? ಅದು ವಸ್ತುವಿನ ರಾಸಾಯನಿಕ ಅಂಶಗಳ ಬಗ್ಗೆ, ರಾಸಾಯನಿಕ ಕ್ರಿಯೆಗಳನ್ನು ನಿಯಂತ್ರಿಸುವ ನಿಯಮಗಳ ಬಗ್ಗೆ ಅಧ್ಯಯನ ನಡೆಸುತ್ತದೆ, ಮಾಹಿತಿ ನೀಡುತ್ತದೆ. ಹೀಗೆ ವಿಜ್ಞಾನದ ವಿಭಿನ್ನಶಾಖೆಗಳು ವಸ್ತುವನ್ನು ನಿಯಂತ್ರಿಸುವ ವಿವಿಧ ನಿಯಮಗಳ ಬಗ್ಗೆ ಅದರ ಗುಣಲಕ್ಷಣಗಳ ಬಗ್ಗೆ ತಮ್ಮದೇ ರೀತಿಯಲ್ಲಿ ತಿಳಿಯುವ ಪ್ರಯತ್ನದಲ್ಲಿವೆ. ನಾನು ವಿಜ್ಞಾನ ಎಂದು ಕರೆಯುತ್ತಿರುವ ದ್ವಂದ್ವಾತ್ಮಕ ವಸ್ತುವಾದ ಮಾಡುತ್ತಿರುವುದೇನು? ಅದು ಯಾವುದರ ಅಧ್ಯಯನ ಮಾಡುತ್ತದೆ? ವಿಜ್ಞಾನದ ವಿಭಿನ್ನ ಶಾಖೆಗಳಾದ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಇತ್ಯಾದಿಗಳು ಬದ್ಧತೆ ಹೊಂದಿರುವ

ವಸ್ತುಗಳ ಸಾಮಾನ್ಯ ನಿಯಮಗಳನ್ನೇ ಮಾರ್ಕ್ಸ್‌ವಾದ ಅಥವಾ ದ್ವಂದ್ವಾತ್ಮಕ ವಸ್ತುವಾದ ಅಧ್ಯಯನ ಮಾಡುತ್ತದೆ. ಇದನ್ನೇ ಬೇರೆ ಪದಗಳಲ್ಲಿ ಹೇಳಬೇಕೆಂದರೆ ಮಾರ್ಕ್ಸ್‌ವಾದ ಅಥವಾ ದ್ವಂದ್ವಾತ್ಮಕ ವಸ್ತುವಾದವು ವಸ್ತು ಜಗತ್ತಿನ ಸಂಪೂರ್ಣ ಚಟುವಟಿಕೆಯನ್ನು ನಿಯಂತ್ರಿಸುವ ಸಾಮಾನ್ಯ ನಿಯಮಗಳ ಅಧ್ಯಯನ ನಡೆಸುತ್ತದೆ. ಹೀಗೆ ವಸ್ತು ಪ್ರಪಂಚದ ನಿರ್ದಿಷ್ಟ ಅಂಶಗಳ ಬಗ್ಗೆ ವಿಜ್ಞಾನದ ವಿಭಿನ್ನ ಶಾಖೆಗಳು ಅಧ್ಯಯನ ನಡೆಸುತ್ತವೆ. ಮತ್ತು ಅರಿಯಲು ಪ್ರಯತ್ನಿಸುತ್ತವೆ ಹಾಗೂ ದ್ವಂದ್ವಾತ್ಮಕ ವಸ್ತುವಾದ ಈ ನಿರ್ದಿಷ್ಟ ಸತ್ಯಗಳನ್ನು ಸಮನ್ವಯೀಕರಿಸಿ ಸಾಮಾನ್ಯ ಸತ್ಯಗಳನ್ನು ಕಂಡುಕೊಳ್ಳುತ್ತದೆ–ವಸ್ತು ಪ್ರಪಂಚ ಹಾಗೂ ವಿಜ್ಞಾನದ ಎಲ್ಲಾ ಚಟುವಟಿಕೆಗಳನ್ನು ನಿಯಂತ್ರಿಸುವ, ನಡೆಸುವ ಹಾಗೂ ಮಾರ್ಗದರ್ಶನ ಮಾಡುವ ಸಾಮಾನ್ಯ ಸತ್ಯಗಳನ್ನು ಗ್ರಹಿಸುತ್ತದೆ. ಆದ್ದರಿಂದ ದ್ವಂದ್ವಾತ್ಮಕ ವಸ್ತುವಾದದ ಧ್ಯೇಯವೆಂದರೆ ಯಾವುದನ್ನು ತಿರಸ್ಕರಿಸಿ ಈ ವಸ್ತು ಪ್ರಪಂಚ ಅಸ್ತಿತ್ವದಲ್ಲಿ ಇರಲಾಗದೋ ಅಥವಾ ಚಲಿಸಲಾಗದೋ ಅಂತಹ ಈ ಮೂಲಭೂತ ಸೂತ್ರಗಳನ್ನು ಅಥವಾ ಸಾಮಾನ್ಯ ಸತ್ಯಗಳನ್ನು ಗ್ರಹಿಸುವುದಾಗಿದೆ. ವಿಜ್ಞಾನದ ನಿರ್ದಿಷ್ಟ ಶಾಖೆಗಳಾದ ಭೌತಶಾಸ್ತ್ರ ಹಾಗೂ ರಸಾಯನ ಶಾಸ್ತ್ರಗಳು ವಸ್ತು ಜಗತ್ತಿನಲ್ಲಿರುವ ನಿರ್ದಿಷ್ಟ ನಿಯಮಗಳು ಹಾಗೂ ಚಟುವಟಿಕೆಗಳ ಬಗ್ಗೆ ಅಧ್ಯಯನ ನಡೆಸಿದರೆ ದ್ವಂದ್ವಾತ್ಮಕ ವಸ್ತುವಾದವು ಈ ಎಲ್ಲಾ ಶಾಖೆಗಳ ಎಲ್ಲಾ ಸಾಮಾನ್ಯ ನಿಯಮಗಳ ಬಗ್ಗೆ ಅಧ್ಯಯನ ನಡೆಸುತ್ತದೆ ಮತ್ತು ತನ್ಮೂಲಕ ವಸ್ತು ಜಗತ್ತನ್ನು ನಿಯಂತ್ರಿಸುವ ಮೂಲಭೂತ ನಿಯಮಗಳ ಬಗ್ಗೆ ಅಧ್ಯಯನ ನಡೆಸುತ್ತದೆ. ಆದ್ದರಿಂದ ದ್ವಂದ್ವಾತ್ಮಕ ವಸ್ತುವಾದ ಮಾತ್ರವೇ ಸಂಪೂರ್ಣವಾಗಿ ವಿಜ್ಞಾನವನ್ನಾಧರಿಸಿದ ತತ್ವಶಾಸ್ತ್ರವಾಗಿದೆ ಹಾಗೂ ಅದೇ ವಿಜ್ಞಾನವಾಗಿದೆ. ದ್ವಂದ್ವಾತ್ಮಕ ವಸ್ತುವಾದ ಮತ್ತು ಮಿಕ್ಕೆಲ್ಲಾ ತತ್ವಜ್ಞಾನಗಳಿಗೂ ಇರುವ ಮೂಲಭೂತ ಅಂತರ ಇದೇ.

ನಾವು ವಿಜ್ಞಾನ ಮತ್ತು ದ್ವಂದ್ವಾತ್ಮಕ ವಸ್ತುವಾದದಿಂದ ಒಂದು ಅತ್ಯಂತ ನಿರ್ದಿಷ್ಟ ತೀರ್ಮಾನಗಳಿಗೆ ಬಂದಿದ್ದೇವೆ. ಈ ವಸ್ತು ಪ್ರಪಂಚದ ಹೊರಗೆ ಏನೂ ಅಸ್ತಿತ್ವದಲ್ಲಿ ಇಲ್ಲ. ಯಾರೊಬ್ಬರಿಗೂ ಈ ವಿಶ್ವದ ಹೊರಗೆ ಅಥವಾ ವಸ್ತುವಿಗೆ ಸಂಬಂಧಿಸದ ಏನನ್ನಾದರೂ ತೋರಿಸುವುದು ಅಸಾಧ್ಯ. ದೇವರ ಪರಿಕಲ್ಪನೆ ಅಥವಾ ಚಿಂತನೆಯೂ ಸಹ ತಪ್ಪು ಮತ್ತು ದೋಷಪೂರಿತ ಎಂದು ನಾನು ಈಗಾಗಲೇ ತೋರಿಸಿದ್ದೇನೆ. ಆದರೆ ನೈಜ ವಿಜ್ಞಾನದ ಅನುಪಸ್ಥಿತಿಯಲ್ಲಿ ಇಷ್ಟರವರೆಗೆ ದೇವರು, ಈ ವಿಶ್ವದ ಸೃಷ್ಟಿಯ ಕರ್ತ ಎಂಬ ಭಾವನೆಯಿತ್ತು. ಆದರೆ ಇಂದು ದೇವರ ಈ ತಪ್ಪು ಪರಿಕಲ್ಪನೆ ಒಂದು ನಿರ್ದಿಷ್ಟ ವಸ್ತುಸ್ಥಿತಿಯಲ್ಲಿ ಸಮಾಜದಲ್ಲಿ ಉದ್ಭವಿಸಿತು ಎಂದು ವಿಜ್ಞಾನ ಸಾಬೀತುಪಡಿಸಿದೆ. ಬಹಳ ಜನ ವಸ್ತು ಅತೀತ ಅಂಶ (supramatter entity) ಎಂದು ಪರಿಗಣಿಸುವ ಮನಸ್ಸು ಅಥವಾ ಚಿಂತನೆ ವಾಸ್ತವದಲ್ಲಿ ವಸ್ತುವಿನ ಉತ್ಪನ್ನವೇ ಆಗಿದೆ. ಮನಸ್ಸು ಮಾನವ ಮೆದುಳಿನ ಒಂದು ನಿರ್ದಿಷ್ಟ ಕೆಲಸವೆಂದು ವಿಜ್ಞಾನ ಸ್ಥಾಪಿಸಿದೆ. ಈ ಮಾನವ ಮೆದುಳು,

ವಸ್ತು ಮತ್ತು ವಸ್ತುವಿನ ಕಣಗಳಿಂದ (particles) ರಚಿಸಲ್ಪಟ್ಟಿದೆ ಎಂಬುದನ್ನು ನಾವೆಲ್ಲರೂ ಬಲ್ಲೆವು. ದೇವರ ಬಗ್ಗೆ ಯೋಚಿಸುವ ಮನುಷ್ಯ – ದೇವರನ್ನು ಕಲ್ಪಿಸಿಕೊಳ್ಳುವ ಮನಸ್ಸು ಒಂದು ಅಂಗದ ಸಹಾಯದಿಂದ ಕಲ್ಪಿಸಿಕೊಳ್ಳುತ್ತದೆ–ಅದೇ ಮಾನವನ ಮೆದುಳು. ಈ ಮೆದುಳು ವಸ್ತುವಿನಿಂದ ರಚಿಸಲ್ಪಟ್ಟಿದೆ. ಹಾಗಾಗಿ ಒಂದು ನಿರ್ದಿಷ್ಟ ವಸ್ತು ಪರಿಸ್ಥಿತಿಯಲ್ಲಿ ಮಾನವನನ್ನು ಗೊಂದಲಕ್ಕೊಳಪಡಿಸಲು ಸಾಕಷ್ಟು ನೆಲೆಯಿರುವ ಒಂದು ಪರಿಸ್ಥಿತಿಯಲ್ಲಿ, ದೇವರ ಕಲ್ಪನೆಯನ್ನು ಮಾಡಿದ್ದು ಒಂದು ವಸ್ತು, ಅದುವೇ ಮಾನವ ಮೆದುಳು. ಇಂದು ಹೇಗೆ ಬಂಡವಾಳಶಾಹಿಗಳು, ಮನಸ್ಸಾಕ್ಷಿ ರಹಿತ ರಾಜಕಾರಣಿಗಳು ಮಿಥ್ಯಾ ಪ್ರಚಾರದಿಂದ ಜನರನ್ನು ಗೊಂದಲಕ್ಕೀಡು ಮಾಡುತ್ತಾರೆಂಬುದರ ಅನುಭವ ನಿಮಗಿದೆ. ಇವುಗಳನ್ನು ನೀವು ನಂಬಬಲ್ಲಿರಾ? ಇವು ಸತ್ಯ ಅಲ್ಲ ಎಂಬುದನ್ನು ನಮ್ಮಂತೆಯೇ ನೀವೆಲ್ಲರೂ ಬಲ್ಲಿರಿ. ಆದರೆ ಈ ಪ್ರಚಾರದಿಂದ ಕೆಲಜನರು ಗೊಂದಲಕ್ಕೆ ಒಳಗಾಗುತ್ತಾರೆ, ಈ ಅಸತ್ಯವನ್ನೇ ಸತ್ಯವೆಂದು ತಿಳಿಯುತ್ತಾರೆ ಎಂಬುದೂ ವಾಸ್ತವವಲ್ಲವೆ? ಏಕೆಂದರೆ ಇಂದೂ ಸಹ ಜನರನ್ನು ಗೊಂದಲಕ್ಕೆ ಒಳಪಡಿಸಲು ಬೇಕಾದ ವಾಸ್ತವಿಕ ಪರಿಸ್ಥಿತಿ ಸಾಕಷ್ಟಿದೆ. ಅಂತೆಯೇ ಜನರನ್ನು ಗೊಂದಲಕ್ಕೊಳಪಡಿಸಲು ಸಾಧ್ಯವಿರುವ ಒಂದು ವಾಸ್ತವಿಕ ಪರಿಸ್ಥಿತಿಯ ಇರುವಿಕೆಯೇ ದೇವರ ಪರಿಕಲ್ಪನೆಗೆ ಜನ್ಮ ನೀಡಿದ್ದು. ದೇವರು ವಸ್ತು ಪ್ರಪಂಚದಿಂದ ಸ್ವತಂತ್ರನಾಗಿ ಅಸ್ತಿತ್ವದಲ್ಲಿದ್ದಾನೆಂಬುದು ಸರಿಯಾದ ಅಂಶವಲ್ಲ. ನಾವು ಗಮನಿಸುವುದೆಲ್ಲವೂ ವಸ್ತುವಿನಿಂದ ರಚಿತವಾಗಿದೆ. ವಸ್ತುವಿನ ಹೊರಗೆ ಅಸ್ತಿತ್ವದಲ್ಲಿ ಏನೂ ಇಲ್ಲ ಎಂಬುದನ್ನು ವಿಜ್ಞಾನ ಸಾಬೀತು ಪಡಿಸಿದೆ. ವಸ್ತುವು, ವಸ್ತುವಿನಿಂದ ಸೃಷ್ಟಿಸಲ್ಪಟ್ಟಿದೆ. ಈ ವಸ್ತು ಪ್ರಪಂಚವೂ ವಸ್ತುವಿನಿಂದಲೇ ಹೊರಹೊಮ್ಮಿದೆ. ಆದ್ದರಿಂದ ನಾವು ಯಾವುದನ್ನೂ ವಸ್ತುವಿನ ಹೊರಗೆ ಅಥವಾ ಹೊರತಾಗಿ ಯೋಚಿಸಲಾರೆವು. ಪ್ರಯೋಗಗಳ ಮೂಲಕ ವಿಜ್ಞಾನ ಇದನ್ನು ದೃಢೀಕರಿಸಿದೆ.

## ವಿಶ್ವವನ್ನು ಕೇವಲ ಅರಿಯುವುದು ಮಾತ್ರವಲ್ಲ, ಅದನ್ನು ಬದಲಾಯಿಸುವುದು ಮಾರ್ಕ್ಸ್‌ವಾದದ ಧ್ಯೇಯ

ಆದ್ದರಿಂದ ದ್ವಂದ್ವಾತ್ಮಕ ವಸ್ತುವಾದ ರಾತ್ರೋರಾತ್ರಿ ಬೆಳೆಯಲಿಲ್ಲವೆಂಬುದನ್ನು ನಾವು ಕಾಣುತ್ತೇವೆ. ಮಾರ್ಕ್ಸ್‌ವಾದ ಅಥವಾ ದ್ವಂದ್ವಾತ್ಮಕ ವಸ್ತುವಾದದ ಬೆಳವಣಿಗೆಯ ಹಿಂದೆ ಒಂದು ದೀರ್ಘ ಇತಿಹಾಸವೇ ಇದೆ. ಸಮಾಜದಲ್ಲಿ ವಸ್ತುವಾದಿ ಚಿಂತನೆಯು ವಿಜ್ಞಾನ ಮತ್ತು ಉತ್ಪಾದನಾ ವ್ಯವಸ್ಥೆಯ ಪ್ರಗತಿಯೊಂದಿಗೆ ಹಂತಹಂತವಾಗಿ ಬೆಳೆಯುತ್ತಾ ಸಾಮಾಜಿಕ ವ್ಯವಸ್ಥೆಯ ಅನೇಕಾನೇಕ ಬದಲಾವಣೆಗಳ ಮೂಲಕ ಮತ್ತು ಮಾನವ ಇತಿಹಾಸದ ಕ್ರೋಢೀಕೃತ ಜ್ಞಾನದಿಂದ ಸಂಪದ್ಭರಿತಗೊಳ್ಳುತ್ತಾ ಹಾಗೂ ಕೆಲವು ಸಾಮಾನ್ಯ ಸತ್ಯಗಳು ಮತ್ತು ವೈಜ್ಞಾನಿಕವಾಗಿ

ಪ್ರಯೋಗ ಪರಿಶೀಲನೆಗೆ ಒಳಗಾದ ನಿಯಮಗಳ ಆಧಾರದಲ್ಲಿ ಮಾರ್ಕ್ಸ್‌ವಾದ ಅಥವಾ ದ್ವಂದ್ವಾತ್ಮಕ ವಸ್ತುವಾದ ಅಸ್ತಿತ್ವಕ್ಕೆ ಬಂದಿದೆ. ಇತರ ತತ್ವಜ್ಞಾನದೊಡನೆ ಅದರ ಮೂಲಭೂತ ವ್ಯತ್ಯಾಸವೆಂದರೆ ಅದು ವಿಜ್ಞಾನದ ಮೇಲೆ ಆಧಾರಿತವಾಗಿದೆ ಹಾಗೂ ವೈಜ್ಞಾನಿಕ ವಾಸ್ತವತೆಗಳನ್ನು ಮತ್ತು ವೈಜ್ಞಾನಿಕ ಸತ್ಯಗಳನ್ನು ನಿರಾಕರಿಸಿ ವಸ್ತುವಿನಿಂದ ಸ್ವತಂತ್ರವಾದ ಅಂಶಗಳಿಗೆ (entities) ಹುಡುಕಾಟ ನಡೆಸುವುದಿಲ್ಲ. ಅದು ವಸ್ತುವಿನಿಂದ ಸ್ವತಂತ್ರವಾದ ಅಂಶಗಳ (entities) ಅಸ್ತಿತ್ವವನ್ನು ಒಪ್ಪುವುದಿಲ್ಲ, ಅಂದರೆ ಯಾವುದು ಅಸ್ತಿತ್ವದಲ್ಲೇ ಇಲ್ಲವೋ ಆ ಅಂಶಗಳನ್ನು (entities) ಒಪ್ಪುವುದಿಲ್ಲ. ದ್ವಂದ್ವಾತ್ಮಕ ವಸ್ತುವಾದದ ಪ್ರಕಾರ, ತತ್ವಜ್ಞಾನದ ಧ್ಯೇಯ, ಜ್ಞಾನದ ಶೋಧನೆಯ ಗುರಿಯು ವಿಶ್ವವನ್ನು ತಿಳಿಯುವುದು ಮಾತ್ರವಲ್ಲ, ಕೇವಲ ಅದನ್ನು ಅರ್ಥೈಸುವುದೇ ಅಲ್ಲ, ಬದಲಿಗೆ ಅದನ್ನು ಬದಲಾಯಿಸುವುದೇ ಆಗಿದೆ. ಅದರ ಧ್ಯೇಯ ಸಮಾಜದಲ್ಲಿ ಪ್ರತಿಕ್ಷಣವೂ ಜರುಗುತ್ತಿರುವ ಅನೇಕಾನೇಕ ಬದಲಾವಣೆಗಳ, ಸಮಾಜದಲ್ಲಿ ಜರುಗುತ್ತಿರುವ ಹಲವಾರು ಬೆಳವಣಿಗೆಗಳ ಹಿಂದಿರುವ ವಿಭಿನ್ನ ನಿಯಮಗಳನ್ನು ಅರಿಯುವುದು, ಗ್ರಹಿಸುವುದು ಮತ್ತು ಬಳಸುವುದು ಹಾಗೂ ಬದಲಾವಣೆಯ ಪ್ರಕ್ರಿಯೆಯಲ್ಲಿ ಪ್ರಭಾವ ಬೀರಲು ಮತ್ತು ಕ್ರಿಯಾಶೀಲರಾಗಲು ಅವನ್ನು ಪ್ರಜ್ಞಾಪೂರ್ವಕವಾಗಿ ಬಳಸುವುದು, ವಿಶ್ವವನ್ನು ಇನ್ನೂ ಬದಲಾಯಿಸಲು ಈ ಪ್ರಕ್ರಿಯೆಯನ್ನು ತೀವ್ರಗೊಳಿಸುವುದು ಮತ್ತು ಈಗಾಗಲೇ ಬದಲಾದ ವಿಶ್ವದ ಪ್ರಗತಿಯ ಗತಿಯನ್ನು ಮುಂದೆ ಕೊಂಡೊಯ್ಯುವುದೇ ಆಗಿದೆ.

ಇದೇ ದ್ವಂದ್ವಾತ್ಮಕ ವಸ್ತುವಾದದ ಸಂಕ್ಷಿಪ್ತ ಇತಿಹಾಸವಾಗಿದೆ. ವಸ್ತುವಿನ ಪ್ರಸಕ್ತ ಪರಿಕಲ್ಪನೆಗಳು, ಅದರ ಬದಲಾವಣೆಯನ್ನು ನಿಯಂತ್ರಿಸುವ ನಿಯಮಗಳು ಮತ್ತು ದ್ವಂದ್ವಾತ್ಮಕ ವಸ್ತುವಾದದ ಕೆಲವು ಅಂಶಗಳ ಬಗ್ಗೆ ತಿಳಿಯೋಣ.

## ಆಧುನಿಕ ವಿಜ್ಞಾನದಲ್ಲಿ ವಸ್ತುವಿನ ಪರಿಕಲ್ಪನೆ

ದ್ವಂದ್ವಾತ್ಮಕ ವಸ್ತುವಾದದ ಪ್ರಕಾರ ವಸ್ತುಜಗತ್ತು ಮಾತ್ರವೇ ಸತ್ಯ. ಎಲ್ಲವೂ ವಸ್ತುವಿನಿಂದ ಸೃಷ್ಟಿಸಲ್ಪಟ್ಟಿದೆ. ಈ ವಸ್ತುವು ಸಾರ್ವತ್ರಿಕ ವಸ್ತುವಾಗಿದೆ. ಅದಕ್ಕೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಸಾರ್ವತ್ರಿಕ ವಸ್ತು ಎಂದರೆ ನಾನು ಸರ್ವವ್ಯಾಪಿಯಾದ ವಸ್ತುವಿನ, ಎಲ್ಲಾ ನಿರ್ದಿಷ್ಟ ರೂಪಗಳನ್ನೊಳಗೊಂಡ ವಸ್ತುವಿನ ಇಡಿಯ ಸಮೂಹವನ್ನೇ ವಸ್ತು ಎಂದು ಅರ್ಥೈಸುತ್ತೇನೆ ಹಾಗೂ ಅದುವೇ ನಮ್ಮ ವಸ್ತುವಿನ ಪರಿಕಲ್ಪನೆಗೆ ಆಧಾರವಾಗಿರುತ್ತದೆ. ಈ ವಸ್ತುವು ತಾತ್ವಿಕವಾದ ವಸ್ತುವಾಗಿದೆ. ಅದು ಒಂದು ತಾತ್ವಿಕ ಬಗೆ (Category) ಯನ್ನು ಸೂಚಿಸುತ್ತದೆ. ಅದನ್ನು ಯಾರೂ ಸೃಷ್ಟಿಸಿಲ್ಲ. ವಸ್ತು ಅಸ್ತಿತ್ವದಲ್ಲಿದೆ, ತನ್ನಿಂದ ತಾನೇ ಅಸ್ತಿತ್ವದಲ್ಲಿದೆ. ಅದೇ ರೀತಿ ವಸ್ತು ಪ್ರಪಂಚವು ಅಸ್ತಿತ್ವದಲ್ಲಿದೆ. ಈ ವಸ್ತುವು ಅಥವಾ ವಸ್ತು ಪ್ರಪಂಚವು ಸದಾ ಬದಲಾಗುತ್ತಲೇ ಇರುತ್ತದೆ. ಪ್ರತಿಕ್ಷಣವೂ ಅದು ಬದಲಾಗುತ್ತಿದೆ, ಬೆಳೆಯುತ್ತಿದೆ ಮತ್ತು ಈ ವಸ್ತುವು ದ್ವಂದ್ವಾತ್ಮಕ ವಸ್ತುವಾಗಿದೆ. ಈ ವಸ್ತು ಪ್ರಪಂಚದ ಗುಣಲಕ್ಷಣವೆಂದರೆ

ಪ್ರತಿಯೊಂದರಲ್ಲಿಯೂ ಆಂತರಿಕ ದ್ವಂದ್ವವಿದೆ ಹಾಗೂ ಅದೇ ಕಾಲಕ್ಕೆ ಪ್ರತಿಯೊಂದೂ ಪರಿಸರದೊಂದಿಗೆ ಬಾಹ್ಯ ದ್ವಂದ್ವದಲ್ಲಿ ನಿರತವಾಗಿದೆ. ಪ್ರತಿಯೊಂದು ವಸ್ತುವು ಆಂತರಿಕ ಮತ್ತು ಬಾಹ್ಯ ಎರಡೂ ದ್ವಂದ್ವಗಳ ಸುಳಿಯಲ್ಲಿ ಇರುತ್ತದೆ! ವಸ್ತುವು ಈ ರೀತಿ ಅಸ್ತಿತ್ವದಲ್ಲಿರುತ್ತದೆ. ಇದೇ ಅದರ ಗುಣ ಲಕ್ಷಣ. ವಸ್ತುವು ಜಡವಲ್ಲ, ಸ್ಥಿರವೂ ಅಲ್ಲ ಅಥವಾ ಯಾಂತ್ರಿಕ, ಅಪರಿವರ್ತನೀಯವೂ ಅಲ್ಲ. ವಸ್ತುವು ಚಲನಶೀಲ, ಸದಾ ಪರಿವರ್ತನೀಯ ಮತ್ತು ದ್ವಂದ್ವಾತ್ಮಕವಾಗಿದೆ ಅಂದರೆ ಅದು ಆಂತರಿಕ ಮತ್ತು ಬಾಹ್ಯ ಎರಡೂ ದ್ವಂದ್ವಗಳನ್ನು ಹೊಂದಿದೆ. ಹಾಗೂ ಈ ದ್ವಂದ್ವವು ವಸ್ತುವನ್ನು ಚಲನಶೀಲ ಮತ್ತು ನಿರಂತರ ಪರಿವರ್ತನೀಯವನ್ನಾಗಿಸಿದೆ. ಈ ವಸ್ತುವು ಸದಾ ಬದಲಾವಣೆ ಮತ್ತು ಬೆಳವಣಿಗೆಯ ಪ್ರಕ್ರಿಯೆಯಲ್ಲಿದೆ. ಇದು ಚಲನಶೀಲ, ಸ್ಥಿರವಲ್ಲ. ನಮ್ಮ ಸಂವೇದನೆಗೆ ಬಂದರೂ, ಬಾರದಿದ್ದರೂ ಈ ವಸ್ತು ಪ್ರಪಂಚದಲ್ಲಿ ಎಲ್ಲೆಡೆಯಲ್ಲೂ, ಪ್ರತಿಕ್ಷಣದಲ್ಲೂ ಬದಲಾವಣೆಗಳು ಜರುಗುತ್ತಲೇ ಇರುತ್ತವೆ. ಕೆಲವೆಡೆ ಈ ಬದಲಾವಣೆಯು ಗತಿ ವೇಗವಾಗಿದ್ದರೆ ಕೆಲವೆಡೆ ಇದು ನಿಧಾನವಾಗಿರುತ್ತದೆ. ಪ್ರತಿಕ್ಷಣದ ಈ ಬದಲಾವಣೆ ಎಷ್ಟು ನಿಧಾನವಾಗಿದೆಯೆಂದರೆ ಸಾಮಾನ್ಯವಾಗಿ ಇದು ನಮ್ಮ ಸಂವೇದನೆಗೆ ನಿಲುಕದಂತಿರುತ್ತದೆ. ಇದು ಬದಲಾಗದೆ ಇರುವಂತೆ, ಮೊದಲಿದ್ದ ಹಾಗೆ ಇರುವಂತೆ ನಮಗೆ ಕಾಣಬಹುದು. ಆದರೆ ವಾಸ್ತವದಲ್ಲಿ ಇದು ಹಾಗಲ್ಲ. ವಸ್ತು ಎಂದಿಗೂ ಸ್ಥಿರವಲ್ಲ. ಅದು ಎಲ್ಲಾ ಕ್ಷಣಗಳಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿ ಸದಾ ಬದಲಾಗುತ್ತಲೇ ಇರುತ್ತದೆ, ಸದಾ ಚಲನಶೀಲವಾಗಿಯೇ ಇರುತ್ತದೆ. ಈ ಬದಲಾವಣೆಗಳಲ್ಲಿ ಕೆಲವೊಂದು ನಿಯಮಗಳು ಕಂಡು ಬರುತ್ತವೆ. ಈ ನಿಯಮಗಳು ಯಾವುವು? ಯಾವುದೇ ಬದಲಾವಣೆಗಳು ಜರುಗುತ್ತಿದ್ದರೂ, ಪ್ರಪಂಚದಲ್ಲಿ ಎಲ್ಲಾದರೂ ಜರುಗುತ್ತಿದ್ದರೂ, ವಸ್ತುವಿನ ಎಲ್ಲಾ ಕ್ರಿಯೆಗಳಲ್ಲಿ ಮತ್ತು ಎಲ್ಲೆಡೆ ನಾವು ಮೂರು ತತ್ವಗಳು ಕಾರ್ಯಶೀಲವಾಗಿರುವುದನ್ನು ಕಾಣುತ್ತೇವೆ. ಇವು ವಸ್ತುವಿನ ಎಲ್ಲಾ ಬದಲಾವಣೆಗಳಿಗೂ ದಿಕ್ಸೂಚಿಯಾಗಿವೆ. ಈ ಮೂರು ನಿಯಮಗಳು ಯಾವುವು?

## 1. ಪರಿಮಾಣಾತ್ಮಕ ಬದಲಾವಣೆಯಿಂದ ಗುಣಾತ್ಮಕ ಬದಲಾವಣೆ ಮತ್ತು ಗುಣಾತ್ಮಕ ಬದಲಾವಣೆಯಿಂದ ಪರಿಮಾಣಾತ್ಮಕ ಬದಲಾವಣೆ

ಪರಿಮಾಣಾತ್ಮಕ ಬದಲಾವಣೆ, ಕ್ರಮೇಣವಾಗಿ ನಡೆಯುವ ಬದಲಾವಣೆ, ವಿಕಾಸಶೀಲ ಬದಲಾವಣೆಗಳ ಈ ಪ್ರಕ್ರಿಯೆ ಒಂದು ಸಂಧಿಸ್ಥಾನ(nodal point)ದೆಡೆಗೆ ಮುನ್ನಡೆದು ಒಂದು ಹೊಸ ವಸ್ತುವಿಗೆ ಸ್ಥಳ ನೀಡುತ್ತದೆ. ಪ್ರತಿಯೊಂದು ವಸ್ತುವಿನ ಕಣದಲ್ಲಿ ಪ್ರತಿಕ್ಷಣವೂ ಬದಲಾವಣೆಗಳು ನಡೆಯುತ್ತಲೇ ಇರುತ್ತವೆ. ಆದರೆ ಈ ಬದಲಾವಣೆಗಳ ಮೂಲಕ ವಸ್ತುವಿನ ಮೂಲಭೂತ ಗುಣಲಕ್ಷಣಗಳು ಬದಲಾಗುವುದಿಲ್ಲ. ಪ್ರತಿಕ್ಷಣವೂ ಈ

ಬದಲಾವಣೆಗಳು ನಡೆಯುತ್ತಿದ್ದರೂ ವಸ್ತುವಿನ ಮೂಲಭೂತ ಗುಣಲಕ್ಷಣಗಳು ಬದಲಾಗದ ತನಕ ಈ ಪ್ರತಿಕ್ಷಣದ ಬದಲಾವಣೆಗಳನ್ನು ನಾವು ಪರಿಮಾಣಾತ್ಮಕ ಬದಲಾವಣೆ ಎಂದು ಕರೆಯುತ್ತೇವೆ. ಆದರೆ ಈ ಪರಿಮಾಣಾತ್ಮಕ ಬದಲಾವಣೆಗಳ ಮೂಲಕ ವಸ್ತುವಿನ ಸ್ಥಿತಿಯೂ ಬದಲಾಗುವ ಪರಿಸ್ಥಿತಿ ಉದ್ಭವಿಸಿದಾಗ ಅಥವಾ ಒಂದು ಪರಿಪೂರ್ಣವಾಗಿ ಹೊಸದಾದ ವಸ್ತುವೇ ಹುಟ್ಟಿದಾಗ ಈ ಬದಲಾವಣೆಯನ್ನು ನಾವು ಒಂದು ಗುಣಾತ್ಮಕ ಬದಲಾವಣೆ, ಮೂಲಭೂತ ಬದಲಾವಣೆ, ಒಂದು ಕ್ರಾಂತಿಕಾರಿ ಬದಲಾವಣೆ ಮುಂತಾಗಿ ಕರೆಯುತ್ತೇವೆ. ನಿಸ್ಸಂದೇಹವಾಗಿ ಈ ಹೊಸ ವಸ್ತುವು ಹಳೆಯ ವಸ್ತುವಿನೊಂದಿಗೆ ಅವಿಚ್ಛಿನ್ನವಾಗಿದ್ದರೂ ವಸ್ತುವಿನ ಲಕ್ಷಣ ಅಥವಾ ಗುಣದಲ್ಲಿ ಒಂದು ಸಂಪೂರ್ಣವಾದ ಮೂಲಭೂತ ಬದಲಾವಣೆ ನಡೆದಿರುವುದರಿಂದ ಹಳೆಯದರೊಂದಿಗೆ ಬೇರ್ಪಟ್ಟಿರುತ್ತದೆ.

ಸಮಯಾಭಾವದಿಂದ ನಾನು ಪರಿಮಾಣಾತ್ಮಕ ಬದಲಾವಣೆಯಿಂದ ಗುಣಾತ್ಮಕ ಹಾಗೂ ಗುಣಾತ್ಮಕದಿಂದ ಪರಿಮಾಣಾತ್ಮಕ ಬದಲಾವಣೆಯ ನಿಯಮದ ಕುರಿತು ಇನ್ನೂ ಹೆಚ್ಚು ಹೇಳಲಾರೆ.

### 2. ವೈರುಧ್ಯಗಳ ಸಂಗಮ

ವಸ್ತುವಿನೊಳಗೆ ಸತತವಾದ ಸಂಘರ್ಷ ಮತ್ತು ದ್ವಂದ್ವವಿರುವುದರಿಂದ ನಾವು ವಸ್ತುವಿನಲ್ಲಿ ಇನ್ನೊಂದು ಗುಣಲಕ್ಷಣವನ್ನು ಗಮನಿಸುತ್ತೇವೆ. ಅದೇಂದರೆ ಈ ಸಂಘರ್ಷ ಮತ್ತು ದ್ವಂದ್ವಗಳ ಮಧ್ಯೆಯೂ ವೈರುಧ್ಯಗಳ ಐಕ್ಯತೆಯಿದೆ. ಇನ್ನೊಂದು ಮಾತಿನಲ್ಲಿ ಹೇಳಬೇಕೆಂದರೆ ದ್ವಂದ್ವದೊಳಗಡೆಯೇ ಒಗ್ಗಟ್ಟಿನ ಅಂಶವೂ ಇರುತ್ತದೆ. ದ್ವಂದ್ವದೊಳಗಡೆ ವಿರುದ್ಧ ಶಕ್ತಿಗಳು ಪರಸ್ಪರರನ್ನು ವಿರೋಧಿಸುತ್ತಾ ಇರುವೆಡೆ, ದ್ವಂದ್ವದ ಸ್ವಭಾವವು ವಿರೋಧಾತ್ಮಕವಾಗಿದೆ. ವಿರುದ್ಧ ಶಕ್ತಿಗಳು ಒಂದು ಇನ್ನೊಂದನ್ನು ನಿರ್ನಾಮ ಮಾಡಲು ಪ್ರಯತ್ನಿಸುತ್ತಿರುವಾಗ ಅವುಗಳ ಒಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ, ಒಂದರ ನಿರ್ನಾಮವಾಗುವ ತನಕ ದ್ವಂದ್ವದ ಸ್ವಭಾವವು ವಿರೋಧಾತ್ಮಕ ವಾಗಿರುತ್ತದೆ. ಆಗಲೂ ಅವು ಐಕ್ಯತೆಯಲ್ಲಿ ಅಸ್ತಿತ್ವದಲ್ಲಿರುತ್ತವೆ. ಈ ನಿಯಮದನುಸಾರವೇ ಪ್ರತಿಕ್ಷಣವೂ ಬದಲಾವಣೆ ನಡೆಯುತ್ತಿರುತ್ತದೆ. ಐಕ್ಯತೆಯ ಈ ಗುಣಲಕ್ಷಣವು ವೈರುಧ್ಯದ ಮಧ್ಯೆಯೂ ಈ ಬದಲಾವಣೆಯಲ್ಲಿ ಇರುತ್ತದೆ. ಈ ನಿಯಮವು ಈ ವಸ್ತು ಪ್ರಪಂಚದ ಎಲ್ಲೆಡೆ ಜಾರಿಯಲ್ಲಿರುತ್ತದೆ.

### 3. ಅಳಿಯುವಿಕೆಯ ಅಳಿಯುವಿಕೆ

ಬೆಳವಣಿಗೆಯ ಗತಿಯಲ್ಲಿ ಅಳಿಯುವಿಕೆ (negation) ಹಾಗೂ ಅಳಿಯುವಿಕೆಯನ್ನು (negation) ಹಿಂಬಾಲಿಸಿ ಬೆಳವಣಿಗೆ – ಸಮಾಜ, ವಸ್ತು ಪ್ರಪಂಚ ಮತ್ತು ಪ್ರತಿಯೊಂದು ಪ್ರಘಟನೆಯಲ್ಲೂ ಅಭಿವೃದ್ಧಿ ಮತ್ತು ಬೆಳವಣಿಗೆಗಳ ನಿಯಮವೂ ಇದೇ ಆಗಿದೆ. ಈ ವಸ್ತು

ಪ್ರಪಂಚ ಯಾವಾಗಲೂ ಬದಲಾವಣೆ ಮತ್ತು ಬೆಳವಣಿಗೆಯ ಪ್ರಕ್ರಿಯೆಯಲ್ಲಿದೆ. ಈ ಬೆಳವಣಿಗೆ ನಡೆಯುವುದು ಹೇಗೆ? ಸತತವಾಗಿ ತನ್ನನ್ನು ನಿರಾಕರಿಸಿಕೊಂಡು ಅಂದರೆ ಸ್ವತಃ ತನ್ನ ಅಸ್ತಿತ್ವವನ್ನೇ ನಿರಾಕರಿಸಿಕೊಂಡು ಹಳತರ ನಾಶದಿಂದ ಹೊಸತು ಜನಿಸುತ್ತದೆ. ಹಳತರ ಸತತ ನಿರ್ನಾಮದ ಮೂಲಕ ಹೊಸತು ಹುಟ್ಟುತ್ತದೆ.

ವಸ್ತು ಪ್ರಪಂಚದ ನಿಯಮಗಳನ್ನು ಮತ್ತು ಕ್ರಿಯೆಗಳನ್ನು ನಿರ್ದೇಶಿಸುತ್ತಿರುವುದು ಈ ಮೂರು ಮೂಲಭೂತ ನಿಯಮಗಳೆಂದು ವೈಜ್ಞಾನಿಕ ಪ್ರಯೋಗ ಮತ್ತು ಪರಿಶೀಲನೆಗಳ ಮೂಲಕ ನಾವು ಕಂಡುಕೊಂಡಿದ್ದೇವೆ. ಇಲ್ಲಿ ಇನ್ನೊಂದು ಅಂಶವಿದೆ. ನಾನು ಚರ್ಚಿಸುತ್ತಿರುವ ದ್ವಂದ್ವವು ಎರಡು ತೆರನಾಗಿದೆ. ವಿರೋಧಾತ್ಮಕ ಹಾಗೂ ಮಿಲನಾತ್ಮಕ. ಎಲ್ಲಿ ದ್ವಂದ್ವದ ಮುಖ್ಯ ಉದ್ದೇಶ ಒಂದರಿಂದ ಇನ್ನೊಂದರ ನಿರ್ನಾಮವೋ ಅದನ್ನು ನಾವು ವಿರೋಧಾತ್ಮಕ ದ್ವಂದ್ವವೆನ್ನುತ್ತೇವೆ. ಕಾರ್ಮಿಕರು ಮತ್ತು ಮಾಲೀಕರ ನಡುವಣ ಹೋರಾಟದ ಉದ್ದೇಶ ಒಬ್ಬರನ್ನೊಬ್ಬರು ತುಳಿಯುವುದು, ಕಿತ್ತೊಗೆಯುವುದು. ಅದೇ ಒಬ್ಬ ಕಾರ್ಮಿಕ ಮತ್ತು ಇನ್ನೊಬ್ಬ ಕಾರ್ಮಿಕನ ನಡುವಣ ದ್ವಂದ್ವದ ಉದ್ದೇಶ ಒಬ್ಬರನ್ನೊಬ್ಬರು ಗೆಲ್ಲುವುದು ಮತ್ತು ಅವರುಗಳ ನಡುವಣ ಐಕ್ಯತೆಗೆ ಬೆಸುಗೆ ಹಾಕುವುದು. ಇದನ್ನು ನಾವು ಮಿಲನಾತ್ಮಕ ದ್ವಂದ್ವ ಎನ್ನುತ್ತೇವೆ. ಒಂದು ಕಾರ್ಮಿಕ ವರ್ಗ ಪಕ್ಷದ ಒಳಗಿನ ದ್ವಂದ್ವದ ಪ್ರಮುಖ ಪರಿಣಾಮವೆಂದರೆ ಆತ್ಮ ವಿಮರ್ಶೆ, ಆ ಮೂಲಕ ಪಕ್ಷವನ್ನೇ ಬಲಗೊಳಿಸುವುದು, ಅದರ ಐಕ್ಯತೆಗೆ ಬೆಸುಗೆ ಹಾಕಿ ಅದನ್ನು ಬಲಗೊಳಿಸುವುದು.

ದ್ವಂದ್ವಾತ್ಮಕ ವಸ್ತುವಾದದ ಮೂರು ತತ್ವಗಳು, ಅಂದರೆ ವಸ್ತುವಿನ ಬದಲಾವಣೆಯ ಮೂರು ಮೂಲಭೂತ ತತ್ವಗಳ ಕುರಿತಾದ ಚರ್ಚೆಯನ್ನು ನಾನು ಸಮಯದ ಅಭಾವದಿಂದ ಸಂಕ್ಷಿಪ್ತ ಮಾಡಲೇಬೇಕಿದೆ. ನಿಮ್ಮಲ್ಲಿ ಬಹಳಷ್ಟು ಜನ ಈ ಹಿಂದಿನ ಸಂದರ್ಭಗಳಲ್ಲಿ ಇನ್ನೂ ವಿಸ್ತಾರವಾದ ಚರ್ಚೆಗಳನ್ನು ಕೇಳಿರುವಿರಿ. ಅಲ್ಲದೆ ಈಗ ನಾನು ಮಾರ್ಕ್ಸ್‌ವಾದ ಮತ್ತು ಮಾನವ ಸಮಾಜದ ಬೆಳವಣಿಗೆಯ ಮೇಲೆ ನಡೆಸಿದ ಚರ್ಚೆ ಕೂಡಾ ಬಹಳ ಪ್ರಾಥಮಿಕವಾದುದು (elementary) ಮತ್ತು ಸಂಕ್ಷಿಪ್ತವಾಗಿದೆ. ಜ್ಞಾನಶಾಸ್ತ್ರದ (Epistemology) ವಿಭಿನ್ನ ಮುಖಗಳ ಬಗ್ಗೆ ಹಾಗೂ ವಿಜ್ಞಾನದ ವಿಭಿನ್ನ ಆವಿಷ್ಕಾರಗಳ ಕುರಿತು ವಿವರವಾಗಿ ಚರ್ಚಿಸಲು ಇವತ್ತು ಸಾಧ್ಯವಾಗದು. ಆದರೂ ನಿಮಗನಿಸಿದ ಪ್ರಶ್ನೆಗಳನ್ನು ಕೇಳಬಹುದು.

ಮಾರ್ಕ್ಸ್‌ವಾದ ಅಥವಾ ದ್ವಂದ್ವಾತ್ಮಕ ವಸ್ತುವಾದದ ಉಗಮದ ಇತಿಹಾಸ ಮತ್ತು ಮಾನವ ಸಮಾಜದ ಬೆಳವಣಿಗೆ ಮೇಲಿನ ನನ್ನ ಸಂಕ್ಷಿಪ್ತ ಚರ್ಚೆಯನ್ನು ಇಂದು ನಾನು ಈ ಮೊದಲ ಅಧಿವೇಶನದಲ್ಲಿ ಮುಗಿಸುತ್ತಿದ್ದೇನೆ.